ಕರ್ನಾಟಕ ಲೋಚನ

ಸಂಪುಟ ೧೨ ಜೂನ್ ೧೯೯೯ ಸಂಚಿಕೆ ೧

೩೨

12 - 1

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು-೫೬೦ ೦೧೯

‘ಕರ್ನಾಟಕ ಲೋಚನ’

ಸಂಪಾದಕ ಮಂಡಲಿ

ಎನ್. ಬಸವಾರಾಧ್ಯ (ಅಧ್ಯಕ್ಷರು). ವಿದ್ವಾನ್ ಟಿ. ಕೇಶವ ಭಟ್ಟ (ಸಂಪಾದಕರು) ಎನ್. ಎಸ್. ರಾಮಸ್ವಾಮಿ ಅಯ್ಯರ್ (ಸಹಾಯಕ ಸಂಪಾದಕರು).

ಸದಸ್ಯರು : ಪ್ರೊ|| ಜಿ. ವೆಂಕಟಸುಬ್ಬಯ್ಯ, ಡಾ|| ಪಿ. ವಿ. ನಾರಾಯಣ. ಡಾ|| ಎಂ. ಚಿದಾನಂದಮೂರ್ತಿ, ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ, ಡಾ|| ಶ್ರೀನಿವಾಸ ಹಾವನೂರ, ಪ್ರೊ|| ಎಲ್. ಎಸ್. ಶೇಷಗಿರಿರಾವ್, ಪ್ರೊ|| ಕೆ. ಆರ್. ಗಣೇಶ್, ಶ್ರೀ ಎಸ್. ಶಿವಣ್ಣ, ಬೆಂಗಳೂರು. ಡಾ|| ಆರ್. ಶೇಷಶಾಸ್ತ್ರಿ, ಅನಂತಪುರ. ಡಾ|| ಟಿ. ವಿ. ವೆಂಕಟಾಚಲ ಶಾಸ್ತ್ರೀ, ಮೈಸೂರು. ಎಸ್. ಪಿ. ಪಾಟೀಲ, ಧಾರವಾಡ, ಡಾ|| ಶ್ರೀಕೃಷ್ಣಭಟ್ ಅರ್ತಿಕಜೆ, ಮದರಾಸು, ಡಾ|| ಬಿ. ರಾಮಚಂದ್ರರಾವ್, ಹೈದರಾಬಾದು, ಪ್ರೊ|| ವಸಂತ ಕುಷ್ಟಗಿ, ಗುಲ್ಬರ್ಗ.

ಲೇಖನಗಳು-ಟಿಪ್ಪಣಿಗಳು

ಸಂಶೋಧನಾತ್ಮಕ, ಪಾಂಡಿತ್ಯ-ವಿದ್ವತ್ಪೂರ್ಣ ಲೇಖನಗಳು ಹಾಗೂ ಹೊಸ ದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು-ಇವುಗಳ ಮೇಲಣ ವಿಮರ್ಶೆಗಳು ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ, ಇವುಗಳಿಗೆ ಸಂಬಂಧಿಸಿದ ಟೀಕೆ-ಟಿಪ್ಪಣಿಗಳು-ಇವುಗಳಿಗೆ ‘ಕರ್ನಾಟಕ ಲೋಚನ’ ಮೀಸಲಾಗಿದೆ.

ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯ ಗಳಿಗೆ ಆಯಾ ಲೇಖಕರೇ ಜವಾಬುದಾರರು ; ಅವು ಅವಶ್ಯವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

ಲೇಖನಗಳಿಗೆ ಆಹ್ವಾನ

ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾಗಿ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿಕೊಡ ಬೇಕೆಂದು ವಿನಂತಿ. ಲೋಚನದ ಗಾತ್ರ ಪರಿಮಿತವಾದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿ ಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ-ಲೇಖನಾಧಾರ ವಿವರಗಳನ್ನು (Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿ ಕೊಂಡಿರಬೇಕಾಗಿ ವಿನಂತಿ.

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಗೋಖಲೆ ಸಂಸ್ಥೆಯ ಆವರಣ

ಎನ್. ಆರ್. ಕಾಲೋನಿ, ಬೆಂಗಳೂರು-560 019, ದೂರವಾಣಿ : 6615877

ಸಂಪಾದಕರು : ವಿದ್ವಾನ್ ಟಿ. ಕೇಶವ ಭಟ್ಟ

ಸಹಾಯಕ ಸಂಪಾದಕರು : ಎನ್ ಎಸ್. ರಾಮಸ್ವಾಮಿ ಅಯ್ಯರ್

ಸಂಪುಟ ೧೨ ಜೂನ್ ೧೯೯೯ ಸಂಚಿಕೆ-೧

ಪ ರಿ ವಿ ಡಿ

Karnataka Lochana

Half-Yearly Research Journal, Published by
B. M. Sri. Smaraka Prathisthana
(B. M. Sri. Memorial Foundation)
N. R. Colony, Bangalore-560 019 Ph : 6615877

Vol. 12 June 1999 No. 1

CONTENTS

ಸಮಸ್ಯಾಪೂರಣ

ವಿದ್ವತ್ಪತ್ರಿಕೆಯಾಗಿರುವ ಈ "ಕರ್ನಾಟಕ ಲೋಚನ" ಸಂಪುಟ ೬, ಸಂಚಿಕೆ ೧ ಜೂನ್, ೧೯೯೩ ಮೊದಲ್ಗೊಂಡು "ಸಮಸ್ಯಾಪೂರಣ" ಎಂಬ ಅಂಕಣವನ್ನು ಪ್ರಾರಂಭಿಸಲಾಗಿದೆ. ಇದು ಕನ್ನಡಕ್ಕೆ ಅತಿಶಯ ಲಕ್ಷಣವೆನಿಸುವ ಪ್ರಾಸ-ಪಾದ-ಛಂದೋಬದ್ಧ ಪದ್ಯ ಕವಿತಾ ರಚನೆಗೆ ಸಜೀವತೆಯನ್ನು ನೀಡುವ ಉದ್ದೇಶವುಳ್ಳುದು. ಪ್ರತಿ ಸಂಚಿಕೆಯಲ್ಲಿಯೂ ಅದರ ಮುಂದಣ ಸಂಚಿಕೆಗಾಗಿ ಸಮಸ್ಯಾಪದ್ಯಪಾದವನ್ನು ಕೊಡಲಾಗುತ್ತದೆ. ಒಬ್ಬೊಬ್ಬರಿಂದ ಒಂದೊಂದು ಪದ್ಯ ಮಾತ್ರ ಸ್ವೀಕಾರಾರ್ಹ. ಈ ಸಂಚಿಕೆಗಾಗಿ ಕೊಡಲಾದ ಸಮಸ್ಯಾವಾಕ್ಯ ಹೀಗಿದೆ.

—"ಆರುಂ ಕೊಲಲಾರ್ಪರೆ ಸಾಯುದರಂ".

—ಪಂಪರಾಮಾಯಣ ೩-೩೧

೧ ತ್ವರೆಯಿಂ ಶಶಿಹಾಸನ ಸಂ
ಹರಿಸಲ್ ಯೋಜಿಸಿದೊಡಾಯ್ತೆ ? ಆರುಂ ಕೊಲಲಾ
ರ್ಪರೆ ಸಾಯುದರಂ ? ಸುತಸಂ
ಹರಣಮೆ ಫಲಮಾಯ್ತು ದುಷ್ಟಬುದ್ಧಿಗೆ ನಿಜದಿಂ ||

—ಆರ್. ಶಂಕರನಾರಾಯಣ್

2 ಆರ್ ಶಕ್ತರೆಳ್ಚರಿಸೆ ಪುಸಿನಿದ್ರಿಪರಂ
ಆರಾರ್ಪರ್ ನಯಗೈಯಲ್ ಶಠಮೂರ್ಖರಂ
ಆರರ್ಹರ್ ಸಂತೃಪ್ತಿಸೆ ಕಡುಲುಬ್ಧಕರಂ
ಆರುಂ (ಅಂತೆಯೆ) ಕೊಲಲಾರ್ಪರೆ ಸಾಯುದರಂ ||

—ಎಂ. ಆರ್. ಅನಂತರಾಮಯ್ಯ

೩. ಆರುಂ ಕೊಲಲಾರ್ಪರೆ ಸಾಯುದರ
ನ್ನಾರುಂ ಬೇಡುವರೇ ಕೊಡದವರ
ನ್ನಾರುಂ ಕರಗಿಪರೇ ಕರ್ಗಲ್ಲಂ
ತಾರೆಗೆ ಯೆಕ್ಕಳಿಪುದು ತರವಲ್ಲಂ ||

—ಕೆ. ಪಿ. ರಾಜಗೋಪಾಲ್

೪ ಪಂಕಜನಾಭನ ಭಕ್ತಿಯ ಬಿಡು ನೆವ
ಗಂ ಕಡುಹಗೆಯವನೆಂದ ಪಿತನ ಮಾ
ತಂ ಕಡೆಗಣಿಸಿದ ಸುತನಂ ವಧಿಸಲು ಪರಿಪೀಡಿಸಿದಾಗ ||
ಸಂಕಟಗೊಂಡು ನೃಹರಿ ಬಂದಾ ಖಳ
ನಂ ಕೊಂದಂ ಪ್ರಹ್ಲಾದನುಳಿದನಾ
ರುಂ ಕೊಲಲಾರ್ಪರೆ ಸಾಯದರಂ ದಿಟವಾಯ್ತೀ ನುಡಿಯಲ್ಲಿ ||

—ವಿದ್ವಾನ್ ತಾಳ್ತಜೆ ಕೃಷ್ಣಭಟ್ಟ

೫ ಅರಗಿನಮನೆಯೊಳ್ ಪಾಂಡವ
ರುರಿಯದೆ ಪಾರಾದರದರಿನಾರುಂ ಕೊಲಲಾ
ರ್ಪರೆ ಸಾಯದರಂ ? ಕೌರವ
ನರಿಯಂ ಕಡು ಪೆದ್ದನಾದ ಕತದಿಂದಲ್ತೇ ?

—ಟಿ. ಕೇಶವ ಭಟ್ಟ

೬ ತೋರದೆ ವಿಧಿಯ ವಿನೋದದ ನಾಟಕ ?
ಕೌರವ ವಿಷಕೊಡಲನಿಲಜ ನಳಿದನೆ
ನೀರೊಳು ದೂಡಲು ಸತ್ತನೆ ? ಬರಿಭ್ರಮೆ ಕೊಲ್ಲುವುದುಳಿಸುವುದು |
ವೈರಿಯು ಸಿಡಿಗುಂಡನು ವಿಸ್ಫೋಟಿಸೆ
ತೀರಿದ ನೋರ್ವನ ಬದಲೋರ್ವನು ಹಾಯವ್
ಆರುಂ ಕೊಲಲಾರ್ಪರೆ ಸಾಯದರಂ ಹಗೆಗೆ ದಗೆಯ ಬಗೆದು ||

—ತಲೆಂಗಳ ರಾಮಕೃಷ್ಣಭಟ್ಟ ವಿದ್ವಾನ್

೭ ಭಲರೆ ಕಾರ್ಗಿಲ್ಲ ಯೋಧರೇಂ ಸಾವವರೇ ?
ಕೊಲಲಿಲ್ಲವೇ ಅತಿಕ್ರಮಣಕಾರರು ಅ
ಲ್ಲಲಾ ನಮ್ಮದೇ ನುಡಿಗಳ್ಳರು ಇಂದಾರುಂ
ಕೊಲಲಾರ್ಪರೆ ಸಾಯದರಂ, ಗರ್ಥವುಂಟೇ ?
ಸಲೆ ಸೇರಿಸದಿರಿ ವೇದಾಂತವನಿದಕೆ
ಹುಲುಪಾತಕಿಗಳ ಕೃತ್ಯದನರ್ಥಕ್ಕೆ

—ನಾ. ಗೀತಾಚಾರ್ಯ

(60ನೇ ಪುಟಕ್ಕೆ ಮುಂದುವರಿದಿದೆ)

ನೀತಿ ವಾಕ್ಯಾಮೃತ ಮತ್ತು ಅದರ ಕನ್ನಡ ವೃತ್ತಿ—ಒಂದು ಪರಿಚಯ

—ಪ್ರೊ॥ ಬಿ. ರಾಮಸ್ವಾಮಿ

ನೀತಿವಾಕ್ಯಾಮೃತವು ಸೂತ್ರಪ್ರಾಯವಾದ ವಾಕ್ಯಗಳಲ್ಲಿ ರಚಿತವಾಗಿರುವ ಸಂಸ್ಕೃತ ರಾಜನೀತಿಶಾಸ್ತ್ರ ಗ್ರಂಥ. ಇದನ್ನು ರಚಿಸಿದ ಜೈನ ಕವಿ ಸೋಮದೇವಸೂರಿ. ಈ ಗ್ರಂಥ ರಚನೆಗೆ ಮೊದಲು ಈತನು ರಚಿಸಿದ್ದುದು 'ಯಶಸ್ತಿಲಕ' ಎಂಬ ಸಂಸ್ಕೃತ ಚಂಪು ಕಾವ್ಯ. ಇದರ ವಸ್ತು ಜೈನ ಸಾಹಿತ್ಯದಲ್ಲಿ ಪ್ರಸಿದ್ಧವಾದ ಯಶೋಧರ ಮಹಾ ರಾಜನ ಕಥೆ. ಇದರ ರಚನೆಯಾದದ್ದು ರಾಷ್ಟ್ರಕೂಟ ಚಕ್ರವರ್ತಿ ಮೂರನೆಯ ಕೃಷ್ಣನ ಸಾಮಂತನಾಗಿದ್ದ ಅರಿಕೇಸರಿಯ ಮಗ ಚಾಳುಕ್ಯ ರಾಜವಾಗ ರಾಜನ ಕಾಲ ದಲ್ಲಿ, ಕ್ರಿ.ಶ. 960ರಲ್ಲಿ. ನೀತಿ ವಾಕ್ಯಾಮೃತದ ಕನ್ನಡ ವೃತ್ತಿ (ವ್ಯಾಖ್ಯಾನ)ಯನ್ನು ರಚಿಸಿದ ನೇಮಿನಾಥನು ಮೇಘಚಂದ್ರ ತ್ರೈವಿದ್ಯನ ಶಿಷ್ಯನಾದ ವೀರನಂದಿ ಸೈದ್ಧಾಂತಿಕನ ಶಿಷ್ಯ. ಮೇಘಚಂದ್ರ ತ್ರೈವಿದ್ಯನು ಪೂಜ್ಯಪಾದಕೃತ ಸಮಾಧಿಶತಕಕ್ಕೆ ಕ್ರಿ.ಶ. 1148ರಲ್ಲಿ ಕನ್ನಡ ವ್ಯಾಖ್ಯಾನವನ್ನು ಬರೆದನು. ವೀರನಂದಿಯು ಸ್ವಕೃತ ಆಚಾರ ಸಾರಕ್ಕೆ ಕ್ರಿ.ಶ; 1153ರಲ್ಲಿ ಕನ್ನಡ ವ್ಯಾಖ್ಯಾನವನ್ನು ರಚಿಸಿದನು. ನೇಮಿನಾಥನು ಸ್ತುತಿಸಿರುವ ರಾಮಚಂದ್ರ ಮುನಿಯು ಮಹಾಕವಿ ಜನ್ನನ ಗುರು. ನೀತಿವಾಕ್ಯಾ ಮೃತದ ಕನ್ನಡ ವೃತ್ತಿಯಲ್ಲಿ 'ಱ' ಎಂಬ ಅಕ್ಷರದ ಪ್ರಯೋಗವಿರಬೇಕಾದೆಡೆಗಳಲ್ಲಿ ಎಲ್ಲಿಯೂ ಆ ಅಕ್ಷರದ ಪ್ರಯೋಗವು ಕಂಡುಬರುವುದಿಲ್ಲ; ವ್ಯಂಜನಾಂತವಾಗಿರ ಬೇಕಾದ ಹಲವು ಶಬ್ದಗಳು ಸ್ವರಾಂತವಾಗಿವೆ. ಇದು ಕೇವಲ ಲಿಪಿಕಾರನ ಪ್ರಮಾದ ವೆಂದು ಹೇಳಲಾಗುವುದಿಲ್ಲ. ಈ ಕಾರಣಗಳಿಂದ ನೀತಿವಾಕ್ಯಾಮೃತ ವೃತ್ತಿಯು (ವ್ಯಾಖ್ಯಾನವು) ರಚಿತವಾದದ್ದು 12ನೆಯ ಶತಾಬ್ದದ ಕೊನೆ ಅಥವಾ 13ನೆಯ ಶತಾಬ್ದದ ಮೊದಲಲ್ಲಿ ಎಂದು ಹೇಳಬಹುದಾಗಿದೆ.

1031ರಲ್ಲಿ ಕರ್ಣಾಟಕ ಪಂಚತಂತ್ರವನ್ನು ರಚಿಸಿದ ದುರ್ಗಸಿಂಹನು ನೀತಿ ವಾಕ್ಯಾಮೃತದ ಕೆಲವು ಸೂತ್ರಗಳನ್ನು "ಸೋಮದೇವನ ನೀತಿ" ಎಂದು ನಾಮ ನಿರ್ದೇಶಸಹಿತವೂ ಆ ರೀತಿಯ ನಾಮ ನಿರ್ದೇಶವಿಲ್ಲದೆಯೂ ಪಂಚ ತಂತ್ರದ ಕೆಲವು ಕಥೆಗಳಲ್ಲಿ ಸೂಚಿಸಿದ್ದಾನೆ. ಈ ಪಂಚತಂತ್ರವು ಕವಿಯೇ ಹೇಳಿರುವಂತೆ ವಸುಭಾಗ ಭಟ್ಟನ ಪಂಚತಂತ್ರದ ಕನ್ನಡ ರೂಪ. ಪಂಚತಂತ್ರದಲ್ಲಿರುವ ಹಲವು ಕಥೆಗಳಲ್ಲಿ

ನಾಲ್ಕು ಕಥೆಗಳು ನೀತಿವಾಕ್ಯಾಮೃತದಲ್ಲಿ ಸೂಚಿತವಾಗಿವೆ. ಇದರ ಆಕರವು ವಸು ಭಾಗಭಟ್ಟನ ಪಂಚತಂತ್ರವೇ ಇರಬಹುದು. ದುರ್ಗಸಿಂಹನು ಪಶ್ಚಿಮ ಚಾಳುಕ್ಯ ರಾಜ ಜಯಸಿಂಹನಲ್ಲಿ (ಮೂರನೆಯ ಜಯಸಿಂಹ 1015–1042) ಸಂಧಿವಿಗ್ರಹಿ ಯಾಗಿದ್ದವನು. ನೀತಿವಾಕ್ಯಾಮೃತದ ಕನ್ನಡವೃತ್ತಿಕಾರನಾದ ನೇಮಿನಾಥನು ತಾನೇ ಹೇಳಿರುವಂತೆ ಸಂಧಿವಿಗ್ರಹಿಯಾಗಿದ್ದು ನಿವೃತ್ತನಾಗಿದ್ದವನು. ಇವನ ಸ್ಥಳವು "ಕೋಡನ ಪೂರ್ವದ ವಳ್ಳಿ" ಎಂದರೆ "ಕೋಡ ವಳ್ಳಿ". ಇದು ಈಗಿನ ಕೂದವಳ್ಳಿಯೆ ? ವಿಚಾರಾರ್ಹ. ನೇಮಿನಾಥನು ಸಂಧಿವಿಗ್ರಹಿಯಾಗಿದ್ದುದು ಹೊಯ್ಸಳ ಚಕ್ರವರ್ತಿ ಎರಡನೆಯ ಬಲ್ಲಾಳನ (1173–1220) ಕಾಲದಲ್ಲಿರಬಹುದು. ನೀತಿವಾಕ್ಯಾ ಮೃತವು ಆಗಿನ ಕಾಲದ ಸಂಧಿವಿಗ್ರಹಿಗಳಿಗೆ (Foreign relations officers) ಪರಾಮರ್ಶ ಯೋಗ್ಯವಾದ, ಆಧಾರಭೂತವಾದ ರಾಜನೀತಿ ಶಾಸ್ತ್ರದ ಕೈಪಿಡಿಯಾಗಿದ್ದಿರಬೇಕು.

ನೀ.ವಾ.ವನ್ನು ರಚಿಸುವಲ್ಲಿ ಸೋಮದೇವಸೂರಿಯು ತನ್ನ ಕಾಲದಲ್ಲಿ ಪ್ರಸಿದ್ಧ ವಾಗಿದ್ದ ನೀತಿಶಾಸ್ತ್ರಗಳಿಂದ ಉಪಕೃತನಾಗಿದ್ದಾನೆ ಎಂದು ಹೇಳುವುದಕ್ಕೆ ಅವಕಾಶ ವಿದೆ. ನೀ.ವಾ.ದ ಪ್ರಕರಣಗಳ ಶೀರ್ಷಿಕೆಯಾದ 'ಸಮುದ್ದೇಶ' ಎಂಬ ಮಾತು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿರುವ ಪದ. ಅರ್ಥಶಾಸ್ತ್ರದ ಹಲವು ವಾಕ್ಯಗಳು ನೀ.ವಾ.ದ ಕೆಲವು ಸಮುದ್ದೇಶಗಳಲ್ಲಿ ಸೇರ್ಪಡೆಯಾಗಿವೆ. 'ನೀತಿವಾಕ್ಯಾಮೃತ' ಎಂಬ ಗ್ರಂಥ ನಾಮವು ಕಾಮಂದಕ ನೀತಿ ಸಾರದ "ನೀತಿಶಾಸ್ತ್ರಾಮೃತಮ್ ಶ್ರೀಮಾನರ್ಥಶಾಸ್ತ್ರ ಮಹೋದಧೇಃ। ಯ ಉದ್ಧರೇ ನನುಸ್ತ ಸ್ಮೃತಿ ವಿಷ್ಣುಗುಪ್ತಾಯ ಮೇಧಸೇ॥" ಎಂಬ ಸೂಕ್ತಿಯಲ್ಲಿರುವ 'ನೀತಿಶಾಸ್ತ್ರಾಮೃತಮ್' ಎಂಬ ಮಾತಿನ ಪ್ರತಿರೂಪ. ಕಾಮಂದ ಕನ ನೀತಿಸಾರವು ಪದ್ಯ ಕೃತಿ. ನೀ.ವಾ.ವು ಬಾರ್ಹಸ್ಪತ್ಯ ನೀತಿ ಸೂತ್ರಗಳಂತೆ ಬಿಡಿ ನುಡಿಗಳಲ್ಲಿ ರಚಿತವಾಗಿರುವ ಗದ್ಯಕೃತಿ. ನೀ.ವಾ.ವು ಕೌಟಿಲ್ಯನ ಸಂಗ್ರಹರೂಪವಲ್ಲ ; ಅದರ ವಿವರಣಾತ್ಮಕ ವ್ಯಾಖ್ಯಾನವೂ ಅಲ್ಲ. ಸಾಮಾನ್ಯ ಧರ್ಮ, ವ್ಯವಹಾರಧರ್ಮ ರಾಜಧರ್ಮಗಳನ್ನು ಸರಳವಾಗಿ, ಸಂಗ್ರಹವಾಗಿ ನಿರೂಪಿಸುವ ಸ್ವತಂತ್ರ ರಾಜನೀತಿ ಶಾಸ್ತ್ರ ಗ್ರಂಥ. ಮುದ್ರಿತ ನಾಗರಿ ಅಕ್ಷರ ಪ್ರತಿಯಲ್ಲಿ "ಸೋಮದೇವೀಯಾನಿ ರಾಜ ನೀತಿ ಸೂತ್ರಾಣಿ (ನೀತಿ ವಾಕ್ಯಾಮೃತಮ್)" ಎಂಬ ಗ್ರಂಥನಾಮವಿದೆ. ರಾಜನೂ ಅವನ ಅಧಿಕಾರಿಗಳೂ ಅಲ್ಲದೆ ದೇಶದ ಸಾಮಾನ್ಯ ಪ್ರಜೆಯೂ ತಿಳಿದಿರಬೇಕಾದ ನೀತಿಶಾಸ್ತ್ರದ ಕೈಪಿಡಿಯಂತಿದೆ ಸೋಮದೇವ ಸೂರಿಯ ನೀತಿವಾಕ್ಯಾಮೃತ.

ನೀ.ವಾ.ವು ಸೂತ್ರಪ್ರಾಯವಾದ ವಚನ ರಚನೆಯಾದರೂ ವಾಕ್ಯಗಳಲ್ಲಿ ಸೂತ್ರ ಶೈಲಿಯ ಕ್ಲಿಷ್ಟತೆಯಿಲ್ಲ, ವಾಕ್ಯಗಳಲ್ಲಿ ಶೈಥಿಲ್ಯವಿಲ್ಲ, ಆದರೆ ಶಾಸ್ತ್ರ ಗ್ರಂಥದ ಬಿಗಿಯಿದೆ. ಸೂತ್ರಕಾರನು ಅಲ್ಲಲ್ಲಿ ಅರ್ಥಗರ್ಭಿತವಾದ ಗಾದೆಗಳಂತಿರುವ ಸುಭಾಷಿತಗಳನ್ನೂ

ಸಂದರ್ಭೋಚಿತನಾದ ಕಥಾ ಸೂಚಿಕೆಗಳನ್ನೂ ಸೇರಿಸಿರುವುದರಿಂದ ಈ ಶಾಸ್ತ್ರಗ್ರಂಥ ದಲ್ಲಿ ಸಾಹಿತ್ಯದ ಸೊಬಗಿದೆ. ಕನ್ನಡವೃತ್ತಿ (ವ್ಯಾಖ್ಯಾನ)ಕಾರನು ವಾಕ್ಯ (ಸೂತ್ರ) ಗಳ ವೃತ್ತಿಯನ್ನು ಬರೆಯುವಲ್ಲಿ ಮೊದಲು ಸೂತ್ರದ ಆಶಯವನ್ನು ಪೀಠಿಕಾರೂಪವಾಗಿ ತಿಳಿಸಿ ಅನಂತರ ಸೂತ್ರದ ಪದಗಳ ಅರ್ಥವನ್ನು ಸೂತ್ರದ ತಾತ್ಪರ್ಯವನ್ನು ತಿಳಿ ಸುತ್ತಾ ಮುಂದುವರಿಯುತ್ತಾನೆ. ಸಂಸ್ಕೃತ ವ್ಯಾಖ್ಯಾನಗಳಲ್ಲಿರುವಂತೆ ಹೆಚ್ಚಿನ ವಿವರಣೆಗಳನ್ನು ಒದಗಿಸಿ ಸೂತ್ರಾರ್ಥವನ್ನು ವಿವರಿಸುವ ಅಥವಾ ಸಮರ್ಥಿಸುವ ಕ್ರಮ ವನ್ನು ಅನುಸರಿಸಿಲ್ಲ.

ನೀ. ವಾ.ದಲ್ಲಿ ಧರ್ಮ, ಅರ್ಥ, ಕಾಮ ಎಂಬ ತ್ರಿವರ್ಗ (ಪುರುಷಾರ್ಥಗಳಲ್ಲಿ ಮೊದಲ ಮೂರು) ; ಅರಿಷಡ್ವರ್ಗ ; ಅನ್ವೀಕ್ಷಿಕೀ, ತ್ರಯೀ, ವಾರ್ತಾ, ದಂಡನೀತಿ ಎಂಬ ನಾಲ್ಕು (ರಾಜ) ವಿದ್ಯೆಗಳು ; ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ ಬಲ, ಮಿತ್ರ ಎಂಬ ರಾಜ್ಯ ಸಪ್ತಾಂಗ ; ಮಂತ್ರಿ, ಪುರೋಹಿತ, ಸೇನಾಪತಿ, ದೂತ, ಚಾರ ಎಂಬ ರಾಜಕಾರ್ಯ ನಿರ್ವಾಹಕರು; ವ್ಯವಹಾರ, ವಿವಾದ, ಷಾಡ್ಗುಣ್ಯ, ಯುದ್ಧ ಎಂಬ ರಾಜಕಾರ್ಯಕ್ಕೆ ಸಂಬಂಧಿಸಿದ ವಿಷಯಗಳು ; ವಿಚಾರ, ವ್ಯಸನ, ರಾಜರಕ್ಷಾ, ದಿವಸಾನುಷ್ಠಾನ, ಸದಾಚಾರ, ವಿವಾಹ ಎಂಬ ವಿವಿಧ ವಿಷಯಗಳು ಮತ್ತು ಪ್ರಕೀರ್ಣಕವೂ ಸೇರಿ 32 ಸಮುದ್ದೇಶಗಳಲ್ಲಿ (Sections)ರುವ 1570 ವಾಕ್ಯ (ಸೂತ್ರ)ಗಳಲ್ಲಿ ರಾಜನೀತಿ, ಸಾಮಾನ್ಯನೀತಿ, ವ್ಯವಹಾರ ನೀತಿಗಳಿಗೆ ಸಂಬಂಧಿಸಿದ ಹಲವು ವಿಷಯಗಳ ನಿರೂಪಣೆಯಿದೆ.

ಸೋಮದೇವ ಸೂರಿಯು (ದಿಗಂಬರ) ಜೈನಮತೀಯನಾದರೂ ನೀತಿ ನಿರೂ ಪಣೆಯಲ್ಲಿ ಸನಾತನೀಯರ ವೈದಿಕ ಧರ್ಮಶಾಸ್ತ್ರಗಳನ್ನು ತಕ್ಕಮಟ್ಟಿಗೆ ಅನುಸರಿಸಿರು ವುದು ಕಂಡುಬರುತ್ತದೆ. ಇದಕ್ಕೆ ಆಗಿನ ರಾಜಕೀಯವೂ, ಸಮಕಾಲೀನ ಪದ್ಧತಿ ಗಳೂ ಕಾರಣವಿರಬಹುದು. ನೀ.ವಾ.ದಲ್ಲಿ ವರ್ಣಧರ್ಮ, ಆಶ್ರಮ ಧರ್ಮ, ಜಾತಿ ಪದ್ಧತಿಗಳು ಇವುಗಳ ನಿರೂಪಣೆಯೂ, 'ತ್ರಯೀ' ಸಮುದ್ದೇಶದಲ್ಲಿ ಚತುರ್ದಶ ವಿದ್ಯಾಸ್ಥಾನಗಳ ವಿವರವೂ ಇರುವುದು ಇದಕ್ಕೆ ನಿದರ್ಶನ. ಇದಲ್ಲದೆ ಪ್ರಜೆಗಳ ಹಿತ ರಕ್ಷಣೆಗಾಗಿ ರಾಜನು ಲೋಕಾಯತ (ಚಾರ್ವಾಕ) ಧರ್ಮದ (ಮತದ) ಮೂಲಸೂತ್ರ ವನ್ನು ಅವಲಂಬಿಸಬೇಕೆಂದು ಹೇಳಿರುವುದೂ ಸೋಮದೇವ ಸೂರಿಯ ದೃಷ್ಟಿ ವೈಶಾಲ್ಯ ವನ್ನು ಸೂಚಿಸುತ್ತದೆ. ನೀ.ವಾ.ದಲ್ಲಿ ಪ್ರತಿಪಾದಿತವಾಗಿರುವ ಕೆಲವು ವಿಷಯಗಳು ಮಾತ್ರ ಈಗಿನ ಕಾಲಕ್ಕೆ ಅನ್ವಯಿಸುವಂತಿಲ್ಲವಾದರೂ ಒಟ್ಟಿನಲ್ಲಿ ಈ ರಾಜನೀತಿ ಶಾಸ್ತ್ರವು ಈ ಕಾಲದಲ್ಲಿಯೂ ಜನ ಜೀವನವನ್ನು ಹಸನುಗೊಳಿಸುವಲ್ಲಿಯೂ ರಾಜಕೀಯ ದೃಷ್ಟಿಕೋನವನ್ನು ಉತ್ತಮಪಡಿಸುವಲ್ಲಿಯೂ ಸಹಕಾರಿಯಾಗಬಲ್ಲ ರಾಜನೀತಿ ಗ್ರಂಥವೆನ್ನಬಹುದು.

ಈಗಿನ ಪ್ರಜಾತಂತ್ರ ರಾಷ್ಟ್ರದಲ್ಲಿ ರಾಜತ್ವವು ಪ್ರಜೆಗಳಲ್ಲಿ ಹಂಚಿಕೆಯಾಗಿದೆ. ಪ್ರಾಪ್ತವಯಸ್ಕರಾದ ಪ್ರಜೆಗಳು ರಾಜ್ಯಾಡಳಿತಕ್ಕಾಗಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಅವಕಾಶವನ್ನು ಹೊಂದಿದ್ದಾರೆ. ನಾಡಿನ ಪ್ರಜೆಗಳಲ್ಲಿ ಯಾರೇ ಆಗಲಿ ರಾಜ್ಯದ ಶಾಸನ ಸಭೆಗಳಿಗೂ ರಾಷ್ಟ್ರದ ಲೋಕ ಸಭೆಗೂ ಚುನಾಯಿತರಾಗಿ ಆ ಸಭೆಗಳಲ್ಲಿ ಸಕ್ರಿಯವಾಗಿ ವ್ಯವಹರಿಸುವ ಸಾಧ್ಯತೆಯಿದೆ. ಅವರುಗಳಲ್ಲಿ ಯಾರಾದರೂ ರಾಜಕೀಯ ಧುರೀಣರಾಗಿ, ಮಂತ್ರಿಗಳಾಗಿ, ರಾಜ್ಯಾಡಳಿತದಲ್ಲಿ ಭಾಗವಹಿಸುವ ಸಾಧ್ಯತೆಯಿದೆ. ಈಗಿನ ರಾಜಕಾರಣಿಗಳು, ಆಡಳಿತಗಾರರು, ಪಕ್ಷದ, ಪಂಥದ, ವೈಯಕ್ತಿಕ ಹಿತಾಸಕ್ತಿಗಳನ್ನು ಬದಿಗಿಟ್ಟು ಪ್ರಜಾ ವರ್ಗದ ಹಿತ ಸಾಧನೆಗಾಗಿ ಶ್ರಮಿಸಬೇಕಾಗಿದೆ. ಪ್ರಜಾಹಿತ ದೃಷ್ಟಿಯಿಂದ ರಾಜ್ಯಾಡಳಿತ ನಡೆಯಬೇಕಾಗಿದೆ. ಈ ಬಗ್ಗೆ ಸೂಕ್ತ ಸಲಹೆಗಳನ್ನು ಒಳಗೊಂಡಿರುವ ಈ ರಾಜನೀತಿ ಗ್ರಂಥವು ಪ್ರಯೋಜನಕಾರಿಯಾದ, ಆಧಾರಭೂತವಾದ, ಮಾರ್ಗದರ್ಶಕವಾದ ಕೃತಿಯೆನ್ನಬಹುದು.

ವಿದ್ಯಾಸಂಸ್ಥೆಗಳಲ್ಲಿ ನೀತಿಬೋಧೆಗೆ ಅವಕಾಶವಿರಬೇಕೆಂದು ಈಗಿನ ಕೆಲವು ಮಂದಿ ಶಿಕ್ಷಣ ತಜ್ಞರ ಅಭಿಪ್ರಾಯವಿದೆ. ರಾಜನೀತಿ, ವ್ಯವಹಾರ ನೀತಿಗಳೊಂದಿಗೆ ಸಾಮಾನ್ಯ ನೀತಿಯನ್ನೊಳಗೊಂಡಿರುವ ಈ ಗ್ರಂಥವು ಮತಾತೀತ ಭಾವನೆಗಳನ್ನು ಹೊಂದಿರುವುದರಿಂದ ಇದು ಸರ್ವವಿಧದಲ್ಲಿಯೂ ಅರ್ಹತೆಯುಳ್ಳ ಗ್ರಂಥವೆನ್ನಬಹುದು. ಒಂದು ದೃಷ್ಟಿಯಿಂದ ಈ ನೀತಿವಾಕ್ಯಾಮೃತವು ಆದರ್ಶ ರಾಜ್ಯಾಂಗ ನಿಯಮಗಳ ಒಂದು ಕರಡು ಪ್ರತಿ (Draft)ಯಂತೆಯೂ ಇದೆ. ಈ ಸಂಸ್ಕೃತ ನೀತಿಸೂತ್ರ ಗ್ರಂಥದ ಕನ್ನಡ ವೃತ್ತಿಯೂ ಹಳಗನ್ನಡದಲ್ಲಿರುವುದರಿಂದ ಎಲ್ಲರಿಗೂ ಸುಲಭಗ್ರಾಹ್ಯವಲ್ಲ. ಆದ್ದರಿಂದ ಈ ಉದ್ಗ್ರಂಥವು ಎಲ್ಲರಿಗೂ ಅರ್ಥವಾಗುವಂತೆ ಸರಳಾನುವಾದ ಮತ್ತು ಅತ್ಯವಶ್ಯವಾದ ಟಿಪ್ಪಣಿಗಳೊಂದಿಗೆ ಪ್ರಕಟಗೊಳ್ಳುವುದಾದರೆ ಅತ್ಯಂತ ಪ್ರಯೋಜನಕಾರಿಯಾಗಬಹುದೆಂಬುದರಲ್ಲಿ ಸಂದೇಹವಿರಲಾರದು.

ಈಗ ಈ ಕೃತಿಯ ಲಘು ಪರಿಶೀಲನೆಯಿಂದ ಇದರಲ್ಲಿ ಪ್ರತಿಪಾದಿತವಾಗಿರುವ ವಿಷಯಗಳ ವೈವಿಧ್ಯವನ್ನೂ ನಿರೂಪಣೆಯ ರೀತಿಯನ್ನೂ ಪರಿಚಯ ಮಾಡಿಕೊಳ್ಳಬಹುದಾಗಿದೆ. ಸೂತ್ರಗಳನ್ನು ಅರ್ಥೈಸುವಲ್ಲಿ ವೃತ್ತಿಕಾರನು ಸೂತ್ರದ ಪದಗಳನ್ನು ವೃತ್ತಿಯಲ್ಲಿ ಉಲ್ಲೇಖಿಸಿದ್ದಾನೆ. ಈ ಲೇಖನದಲ್ಲಿ ಆ ಸಂಸ್ಕೃತ ಪದಗಳನ್ನು ಬಿಟ್ಟು ಅರ್ಥವನ್ನು ಮಾತ್ರ ಕೊಟ್ಟು ಸೂತ್ರಗಳನ್ನು ವಿವರಿಸಲಾಗಿದೆ. ವೃತ್ತಿಯ ಅರ್ಥವನ್ನು ಕೆಲವೆಡೆಗಳಲ್ಲಿ ಈಗಿನ ಬಳಕೆಯ ಕನ್ನಡ ಮಾತುಗಳಲ್ಲಿ ವಿವರಿಸಿದೆ.

ನೀ. ವಾ.ದ ಮೊದಲನೆಯ ಪ್ರಕರಣವು ಧರ್ಮ ಸಮುದ್ದೇಶ. ಇದರಲ್ಲಿ 52 ಸೂತ್ರಗಳಿವೆ. ಸೋಮದೇವಸೂರಿ ತನ್ನ ಕೃತಿಯನ್ನು "ಅಥ ಧರ್ಮಾರ್ಥಕಾಮ

ಫಲಾಯ ರಾಜ್ಯಾಯ ನಮಃ" ||೧|| ಎಂದು ಪ್ರಾರಂಭಿಸಿದ್ದಾನೆ. "ಸಂಸಾರಿಗಳ್ಗೆ ಧರ್ಮಾರ್ಥಕಾಮಂಗಳಂ ಫಲವಾಗುಳ್ಳ ರಾಜ್ಯಕ್ಕೆ ನಮಸ್ಕಾರಂಗೆಯ್ವೆಂ" ಎಂಬುದು ಇದರ ವೃತ್ತಿ. "ಧರ್ಮಾರ್ಥ ಕಾಮಂಗಳನುಳ್ಳುದೆ ರಾಜ್ಯವೆಂಬುದು ತಾತ್ಪರ್ಯಂ".

"ಧರ್ಮ ಸ್ವರೂಪಮಂ ಪೇಳ್ವುದುತ್ತರವಾಕ್ಯಂ". ಇದು ಮುಂದಿನ ಸೂತ್ರದ ಪೀಠಿಕೆ. "ಯತೋಽಭ್ಯುದಯ ನಿಃ ಶ್ರೇಯಸಸಿದ್ಧಿಃ ಸ ಧರ್ಮಃ ||೨|| "ಆವುದೊಂದ ಱತ್ತಣಿಂ ಸಾಂಸಾರಿಕ ಮೋಕ್ಷ ಸುಖಂಗಳ ನಿಷ್ಪತ್ತಿ ಅದು ಧರ್ಮವೆಂಬುದು". "ಸಾಂಸಾರಿಕ ಮೋಕ್ಷ ಸುಖಂಗಳ್ ಧರ್ಮದಿಂದಕ್ಕುಮೆಂಬುದು ತಾತ್ಪರ್ಯಂ". "ಧರ್ಮಮಂ ನೆಗಳ್ವುಪಾಯಮಂ ಪೇಳ್ವುದುತ್ತರ ಸೂತ್ರಂ". ಸೂತ್ರ-"ಆತ್ಮವತ್ ಪರತ್ರ ಕುಶಲ ವೃತ್ತಿ ಚಿಂತನಂ ಶಕ್ತಿತಸ್ತ್ಯಾಗ ತಪಸೀ ಚ ಧರ್ಮಾಗಮೋಪಾಯಾಃ ||" ತನ್ನೊಳೆಂತಂತೆ ಪೆಱವು ಪ್ರಾಣಿಗಳೊಳಂ ಹಿತಮಂ ಚಿಂತಿಪ್ಪುದುಂ ಶಕ್ತಿಗೆ ತಕ್ಕಂತೆ—ಶ್ರೂಯತಾಂ ಧರ್ಮ ಸರ್ವಸ್ವಂ ಶ್ರುತ್ವಾಚೈವಾವಧಾರ್ಯತಾಂ | ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್|| ಇದು ವ್ಯಾಸ ಮಹರ್ಷಿ ವಾಕ್ಯ. (ಇದು ಆಚರಣೆ ಮತ್ತು ಆರ್ಜನೆ) "ತ್ಯಾಗಮುಂ ತಪಮುಮೆಂಬೆರಡುಂ ಧರ್ಮ ಮನಱಿವ ಉಪಾಯಂಗಳ್ || ಅನಂತರ 'ತ್ಯಾಗ' ಮತ್ತು 'ತಪಸ್ಸು' ಇವುಗಳ ವಿವರಣೆಗಳಿವೆ. ದಯೆಯ ಮೇಲ್ಮೆಯನ್ನು ಒತ್ತಿ ಹೇಳಿದ್ದಾನೆ ವೃತ್ತಿಕಾರ.

ಎರಡನೆಯ 'ಅರ್ಥಸಮುದ್ದೇಶ'ದಲ್ಲಿ ೧೧ ಸೂತ್ರಗಳಿವೆ. ಸೂತ್ರ || "ಯತಃ ಸರ್ವ ಪ್ರಯೋಜನ ಸಿದ್ಧಿಃ ಸೋಽರ್ಥಃ" ||೧|| "ಆವುದೊಂದಱತ್ತಣಿಂ ಎಲ್ಲಾ ಪ್ರಯೋಜನ ಸಿದ್ಧಿಯೋ ಅದು ಅರ್ಥವೆಂಬುದು". "ಪ್ರಯೋಜನ ಸಿದ್ಧಿಯಂ ಮಾಡದುದರ್ಥಮಲ್ಲೆಂಬುದು ತಾತ್ಪರ್ಯಂ". ಸೂತ್ರ || "ಅಲಬ್ಧಲಾಭೋ ಲಬ್ಧ ಪರಿರಕ್ಷಣಂ ರಕ್ಷಿತ ವಿವರ್ಧನಮ್ [ವೃದ್ಧಸ್ಯತೀರ್ಥೇಷು ಪ್ರತಿಪಾದನಂ] ಚ ಅರ್ಥಾನುಬಂಧಃ ||೩|| ಮುನ್ನಿಲ್ಲದುದಂ ಪಡೆವುದುಂ ಪಡೆದುದಂ ಕಾಪುದುಂ ಕಾಪುದಂ ಪೆರ್ಚಿಸುವುದುಂ [ಹೆಚ್ಚಿಸಿದ್ದನ್ನು ತಕ್ಕುದನ್ನರಿದು ವಿನಿಯೋಗಿಸುವುದು] ಅರ್ಥಾನುಬಂಧವೆಂಬುದು. (ಧರ್ಮಕ್ಕೆ ಸಹಾಯನಾಗುವವರೂ ಕಾರ್ಯ ಸಹಾಯರೂ ತೀರ್ಥ ಎನ್ನಿಸಿಕೊಳ್ಳುವರು).

ಮೂರನೆಯ ಕಾಮ ಸಮುದ್ದೇಶದಲ್ಲಿ 15 ಸೂತ್ರಗಳಿವೆ. ಸೂತ್ರ || ಅಭಿಮಾನಿಕ ರಸಾನುವಿದ್ಧಾ ಯತಃ ಸರ್ವೇಂದ್ರಿಯ ಪ್ರೀತಿಃ ಸಃ ಕಾಮಃ ||೧|| ಅರ್ಥ– ಅಭಿಮಾನಿಕ ರಸದೊಡನೆ ಕೂಡಿ ತೃಪ್ತನಾದೆನೆಂಬ ಗರ್ವ ಸರ್ವಸ್ವದಿಂ ಕೂಡಿದ ಎಲ್ಲಿ ಇಂದ್ರಿಯಗಳ ಸಂತೋಷಂ ಆವುದೊಂದಱತ್ತಣಿಂದಪ್ಪುದು ಅದು ಕಾಮವೆಂಬುದು || "ಸಕಲೇಂದ್ರಿಯಂಗಳ ಸಂತೋಷದ ತುತ್ತ ತುದಿಯನೆಯ್ದಿಸುವುದು ಕಾಮವೆಂಬುದು ತಾತ್ಪರ್ಯಂ" ಸೂತ್ರ || ಧರ್ಮಾರ್ಥಾವಿರೋಧೇನ ಕಾಮಂ ಸೇವೇತ ನ ನಿಃ ಸುಖಂ

ಸ್ಯಾತ್ ||೨|| ಅರ್ಥ-ಧರ್ಮಾರ್ಥಂಗಳಂ ಕಿಡಿಸದೆ ಕಾಮಮಂ ಸೇವಿಸುಗೆ, ಅಗ ಸುಖ ವಿಲ್ಲದಂ ಆಗದಿರ್ಕೆ.

ತ್ರಿವರ್ಗವನ್ನು ಸಮವಾಗಿ ಸೇವಿಸಬೇಕು. ತ್ರಿವರ್ಗದಲ್ಲಿ ಕಾಮಕ್ಕಿಂತ ಅರ್ಥವೂ, ಅರ್ಥಕ್ಕಿಂತ ಧರ್ಮವೂ ಮುಖ್ಯ. ಧರ್ಮದ ಆಧಾರದ ಮೇಲೆ ಅರ್ಥಕಾಮಗಳಿರ ಬೇಕಾದ್ದರಿಂದ ಧರ್ಮಾರ್ಜನೆಗೆ ಗಮನ ಕೊಡಬೇಕು ಎಂಬ ವಿವರಗಳಿವೆ.

ನಾಲ್ಕನೆಯ ಅರಿಷಡ್ವರ್ಗ ಸಮುದ್ದೇಶದಲ್ಲಿ 7 ಸೂತ್ರಗಳಿವೆ. ಸೂತ್ರ || ಅಯುಕ್ತಿತಃ ಪ್ರಣೀತಾಃ ಕಾಮ ಕ್ರೋಧ ಲೋಭಮಾನಮದ ಹರ್ಷಾಃ ಕ್ಷಿತೀಶಾನಾಂ ಅಂತರಂಗೋಽರಿಷಡ್ವರ್ಗಃ ||೧|| ಅರ್ಥ-"ಕ್ರಮಂದಪ್ಪಿ ಪ್ರಯೋಗಿಸಿದ ಕಾಮಮುಂ, ಕ್ರೋಧಮುಂ, ಲೋಭಮುಂ, ಮಾನಮುಂ,ಮದಮುಂ, ಹರ್ಷಮುಮೆಂಬಿವು ಅರಸುಗಳ್ಗೆ ಒಳಗಣ ಪಗೆ ವಱಿವರ ನೆರವಿಗಳ್." ಅನಂತರ ಇವುಗಳ ವಿವರಗಳು ಮುಂದಿನ ಆರು ಸೂತ್ರಗಳಲ್ಲಿವೆ. ಇಲ್ಲಿ ಅರಿಷಡ್ವರ್ಗದಲ್ಲಿ ಸಾಮಾನ್ಯವಾಗಿರುವ 'ಮೋಹ'ಕ್ಕೆ ಬದಲು 'ಮಾನ'ವೂ ಮಾತ್ಸರ್ಯದ ಸ್ಥಾನದಲ್ಲಿ ಹರ್ಷವೂ ಇರುವುದನ್ನು ಗಮನಿಸಬೇಕು. 'ದುರಾಗ್ರಹಮಂ ಬಿಸಡದದುಂ, ಉಚಿತಮಪ್ಪ ವಚನಮಂ ಕೈಕೊಳ್ಳದುದುಂ ಮಾನ ಮೆಂಬುದು' ಎಂದೂ 'ನಿಷ್ಕಾರಣಂ ಪೆಱಂಗೆ ದುಃಖಮಂ ಪುಟ್ಟಿಸುವುದಱಿಂದಂ ತನಗೆ ಕೇಡಾದಹುದೆಂಬ ಸಂದೇಹದಿಂದಂ ಮೇಣ್ ಮನಕ್ಕೆ ಸಂತಸಮಂ ಪುಟ್ಟಿಸುವನು ರಾಗಂ ಹರ್ಷಮೆಂಬುದು, ಎಂಬ ವಿವರವು ಗಮನಾರ್ಹ.

[ಅರ್ಥಶಾಸ್ತ್ರದ ಮೊದಲನೆಯ ವಿನಯಾಧಿಕರಣದ ಪ್ರಥಮ ಪ್ರಕರಣವಾದ 'ವಿದ್ಯಾಸಮುದ್ದೇಶ'ವೂ, ದ್ವಿತೀಯ ಪ್ರಕರಣವಾದ 'ವೃದ್ಧ ಸಂಯೋಗ'ವೂ ಸೇರಿ ನೀ. ವಾ. ದ 5ನೆಯ ವಿದ್ಯಾವೃದ್ಧ ಸಮುದ್ದೇಶವಾಗಿದೆ. ಕನ್ನಡವೃತ್ತಿಕಾರನು ಈ ವಿದ್ಯಾವೃದ್ಧ ಸಮುದ್ದೇಶವನ್ನೂ ನೀ.ವಾ. ದ 6ನೆಯ ಅನ್ವೀಕ್ಷಿಕೀ ಸಮುದ್ದೇಶವನ್ನೂ ಸೇರಿಸಿ 5ನೆಯ ಅನ್ವೀಕ್ಷಿಕೀ ಸಮುದ್ದೇಶವನ್ನಾಗಿ ಮಾಡಿಕೊಂಡಿರುವಂತಿದೆ.] ನೀ. ವಾ.ದ 5ನೆಯದಾದ ವಿದ್ಯಾವೃದ್ಧ ಸಮುದ್ದೇಶದಲ್ಲಿ 69 ವಾಕ್ಯಗಳಿವೆ. 2ನೆಯ ಸೂತ್ರದ ಅರ್ಥ :—ಅವುದೊಂದು ಕಾರಣದಿಂ ಅರಸಂಗೆ ದುಷ್ಟರಂ ಕಿಡಿಪುದುಂ ಶಿಷ್ಟರಂ ರಕ್ಷಿಪುದುಂ ಸೆಗಳ್ತೆಯು. ಮತ್ತೆ ಮಂಡೆ ಬೋಳಿಪುದುಂ ಜಟೆಯಂ ತಾಳ್ವುದುಂ ಮೇಣ್ ಸೆಗಳ್ತೆಯಲ್ಲದು. ಇದು ಮೊದಲನೆಯ ಸೂತ್ರದ "ಬೆಸಕೆಯ್ವ ಬೆಸಗೈಯದ ರೊಳು ಅಸನೊರ್ವಂ. ಕ್ರಮದಿಂಪ್ರಮಮಂ ಯಮಮುಂಪೋಲ್ಕುಂ. ಅತಂ ಅರಸಂ ಎಂಬ ಅಭಿಪ್ರಾಯವನ್ನು ವಿಶೇಷಿಸಿ ಸಮರ್ಥಿಸುತ್ತದೆ. 'ಅರಸನು ಸನ್ಯಾಸಿಯಂತಾ ಗಲಿ ಬೈರಾಗಿಯಂತಾಗಲಿ ಇರಕೂಡದು' ಎಂದು ವಿಧಿಸುತ್ತದೆ. ಶಾಸ್ತ್ರಮನೋವದ ಪುರುಷಂ ಕಣ್ಗಳನುಳ್ಳನಾದೊಡಂ ಅಂಧಕನೇ. ಅಱಿಯದನತ್ತಣಿಂ ಸಾಕ್ಷ್ಯೊಂದು

ಪ್ರಾಣಿಯುಂ ಇಲ್ಲವು. ವರಮರಾಜಕಂ ಭುವನಂ ನಮೂರ್ಖೋರಾಜಾ || ಶ್ಲೋ. ೩೦. ೩೧ || ಸೂತ್ರ || ಆನ್ವೀಕ್ಷಿಕೀ ತ್ರಯೀ ವಾರ್ತಾ ದಂಡನೀತಿರಿತಿ ಚತಸ್ರೋ ರಾಜ ವಿದ್ಯಾಃ || 49 || ಸಾಂಖ್ಯಂ ಯೋಗೋ ಲೋಕಾಯತ ಮಿತಿ ಚಾನ್ವೀಕ್ಷೀ || ೫೩ || ಈ ಸೂತ್ರವು ಮುದ್ರಿತನಾಗರಿ ಅಕ್ಷರದ ಪ್ರತಿಯಲ್ಲಿಲ್ಲ). ಆನ್ವೀಕ್ಷಿಕೀ ಆಧ್ಯಾತ್ಮ ವಿಷಯಾ, ತ್ರಯೀ ದೇವಯಜ್ಞಾದಿಷು, ವಾರ್ತಾ ಕೃಷಿಕರ್ಮಾದಿಷು, ದಂಡ ನೀತಿಃ ಸಾಧು ಪಾಲನೇ ದುಷ್ಟ ನಿಗ್ರಹೇ ಚ || 54 || (ಈ ಸೂತ್ರವು ಹಸ್ತ ಪ್ರತಿಯಲ್ಲಿಲ್ಲ).

ಆರನೆಯ ಆನ್ವೀಕ್ಷಿಕೀ ಸಮುದ್ದೇಶದಲ್ಲಿ 46 ಸೂತ್ರಗಳಿವೆ. ಇದರಲ್ಲಿ ರಾಜ ನಿಗೆ ಉಪಯುಕ್ತಗಳಾದ ಯೋಗಾದಿಗಳನ್ನು ವಿವರಿಸಿ ಲೋಕಾಯತಮತದ ವೈಶಿಷ್ಟ್ಯ ವನ್ನು ನಿರೂಪಿಸುತ್ತಾನೆ ಸೂತ್ರಕಾರನು. ಈ ಭವದ ಕಾರ್ಯಂಗಳಂ ಸಾಧಿಸುವುದ ನಗ್ಗಳ ಮಾಗುಳ್ಳುದು (ಪ್ರಸನ್ನತೆಯುಲ್ಲಿ ತಾತ್ಪರ್ಯಮನುಳ್ಳುದು) ಲೋಕಾಯತ ಮೆಂಬುದು || ೩ || ೧೮೧. (33) ||. ಅಧೀತ ಲೋಕಾಯತಮತೋ ಹಿರಾಜಾ ರಾಷ್ಟ್ರ ಕಂಟಕಾನುಚ್ಛೇತ್ತುಂ ಯತತೇ (ಕಲ್ಪತೇ) || ೧೮೨ (34) || ಲೋಕಾಯತ ಮತವನ್ನರಿಯುವುದರಿಂದ ಅರಸು ಹಿಂಸೆಯುಲ್ಲಿ ತೊಡಗಬಲ್ಲವನಾಗುತ್ತಾನೆ. ಹಿಂಸೆ ಯಲ್ಲಿ ತೊಡಗದೆ ರಾಜ್ಯ ರಕ್ಷಣೆ ಸಾಧ್ಯವಿಲ್ಲ. (35) ದೋಷಿಗಳೊಳು ಕ್ಷಮೆ ತಪಸ್ವಿ ತಳ್ಗೆ ಅಲಂಕಾರಂ, ಅರಸುಗಳ್ಗೆ ಅಲಂಕಾರಮಲ್ಲ || ೧೮೬ (38) || ಹಗೆಗಳಲ್ಲಿ ಪರಾಕ್ರಮವನ್ನು ತೋರಿಸದ ರಾಜನು ಬದುಕಿದ್ದೂ ಸತ್ತಂತೆ. ಧರ್ಮ ರಕ್ಷಣೆಗಾಗಿ ಹಿಂಸೆಯುಲ್ಲಿ ತೊಡಗುವುದು ದೋಷವಲ್ಲ ಎಂದು ವಿಶೇಷಿಸಿ ಹೇಳಲಾಗಿದೆ.

ಏಳನೆಯ ತ್ರಯೀ ಸಮುದ್ದೇಶದಲ್ಲಿ 41 ಸೂತ್ರಗಳಿವೆ. ನಾಲ್ಕು ವೇದಗಳು, ಆರು ವೇದಾಂಗಗಳು, ಇತಿಹಾಸ, ಪುರಾಣ, ಮೀಮಾಂಸಾ ನ್ಯಾಯಶಾಸ್ತ್ರ—ಇವು ಹದಿನಾಲ್ಕು ವಿದ್ಯಾಸ್ಥಾನಗಳು (1) "ತ್ರಯೀಯುತ್ತಣಿಂ ನೆಟ್ಟನೆ ವರ್ಣಾಶ್ರಮಂಗಳ ಆಚಾರದ ಧರ್ಮಾಧರ್ಮಂಗಳ ಅಜೀವಕ್ಕುಂ" ತ್ರಯಿಯುಜೀನೆಯದೆ ಪುಣ್ಯ ಪಾಪಂಗಳ ನಟಿಯುನೆಂಬುದು ತಾತ್ಪರ್ಯಂ. ನೆಗಳ್ತೆಯೊಳ್ ದೋಷಮಿಲ್ಲದೆಯುಂ ಒಳ್ಳಿತಪ್ಪ ಸಂಸ್ಕಾರಮುಂ ಶರೀರ ಶುದ್ಧಿಯುಂ ಶೂದ್ರರುಮಂ "ದೇವ ದ್ವಿಜ ತಪಸ್ವಿ ಪರಿ ಕರ್ಮಸು ಯೋಗ್ಯಾನ್ ಕರೋತಿ" || 12 || ಆದಿತ್ಯನ ಬೆಳಗಿನಂತೆ ಧರ್ಮವು ಎಲ್ಲ ರಿಗೂ ಸಮಾನ. ವಿಶಿಷ್ಟಾನುಷ್ಠಾನದಲ್ಲಿ ಅವರವರ ಜಾತ್ಯನುಸಾರಿಯಾದ ನಿಯಮ ಗಳಿರುವುವು. ಪ್ರಜೆಗಳು ತಂತಮ್ಮಾಚಾರಮಂ ಮೀರದಿರಲು ತ್ರಿವರ್ಗಸಿದ್ಧಿ.

ಎಂಟನೆಯ ವಾರ್ತಾ ಸಮುದ್ದೇಶದಲ್ಲಿ 26 ಸೂತ್ರಗಳಿವೆ. ಸೂತ್ರ || ಕೃಷಿ ಪಾಶುಪಾಲ್ಯೇ ವಾಣಿಜ್ಯಾಚ ವಾರ್ತಾ || ೧ || ವಾರ್ತೆಯು ಸೇಜಿವಿಯಾಗುತ್ತಿರಲು

ನೆಟ್ಟನೆ ಎಲ್ಲಾ ಸಂಪತ್ತುಗಳಪ್ಪುವು ॥ ೨ ॥ "ಕೃಷ್ಯಾದಿಗಳಲ್ಲದೇನುಂ ತೀರದೆಂಬುದು ತಾತ್ಪರ್ಯಂ".

ಒಂಭತ್ತನೆಯ ದಂಡನೀತಿ ಸಮುದ್ದೇಶದಲ್ಲಿ 7 ಸೂತ್ರಗಳಿವೆ. ಇಲ್ಲದ ತಪ್ಪನ್ನು ಆರೋಪಿಸಿ ದಂಡವನ್ನು ವಿಧಿಸುವ, ಇಲ್ಲದ ರೋಗವನ್ನು ಇದೆಯೆಂದು ಹೇಳಿ ಚಿಕಿತ್ಸೆಯನ್ನು ವಿಧಿಸಿ ಹಣ ಸೆಳೆಯುವ ಅಧಿಕಾರಿಗಳು ಮತ್ತು ವೈದ್ಯರು ನಿಂದ್ಯರು. [ವೈದ್ಯಶಾಸ್ತ್ರದಂತೆ ದೋಷದ ಸಂಶುದ್ಧಿಗೆ ಕಾರಣಮಪ್ಪುದು ದಂಡನೆಂಬುದು].

ಹತ್ತನೆಯ ಮಂತ್ರಿ ಸಮುದ್ದೇಶದಲ್ಲಿ 169 ಸೂತ್ರಗಳಿವೆ. ಪಿರಿಯರಿಂ ನಿಲಿಸಲ್ಕೆ ಪಟ್ಟ ಕಲ್ಲುಂ ಆಕ್ಕುಂ ದೇವಂ, ಮನುಷ್ಯಂ ಮತ್ತೇನ್ ಅಗನೇ ॥ ೩ ॥ ಅಂತೆಯೇ ಲೋಕದಲ್ಲಿ ಕೇಳಲ್ಪಡುಗುಂ ಚಾಣಕ್ಯನ ಪ್ರಸಾದದಿಂಗಡ ಕ್ರಮದಾತನಲ್ಲದೆಯುಂ ಚಂದ್ರಗುಪ್ತಂ ಸಾಮ್ರಾಜ್ಯಮಂ ಯೆಯ್ದಿದ ನಿಂತು ॥ ೪ ॥ (ಮೂಲ ಸೂತ್ರದಲ್ಲಿ ವಿಷ್ಣುಗುಪ್ತನೆಂದಿದೆ) ಸೂತ್ರ ॥ ಅಕೃತಸ್ಯಾರಮ್ಭಂ ಅರಬ್ಧಸ್ಯಾನುಷ್ಠಾನಂ ಅನುಷ್ಠಿತಸ್ಯ ವಿನಿಯೋಗ ವಿಶೇಷ ಸಮ್ಪದಂ ಚ ಕರ್ಮಸು ಯೇ ಕುರ್ಯುಃ ತೇ ಮಂತ್ರಿಣಃ ॥ ೨೪ ॥ ಸೂತ್ರ ॥ ಕರ್ಮಣಾಮಾರಂಭೋಪಾಯಃ ಪುರುಷ ದ್ರವ್ಯ ಸಂಪತ್, ದೇಶ ಕಾಲ ವಿಭಾಗಃ ವಿನಿಪಾತ ಪ್ರತೀಕಾರಃ ಕಾರ್ಯ ಸಿದ್ಧಿಶ್ಚೇತಿ ಪಂಚಾಂಗೋ ಮಂತ್ರಃ ॥ 25 ॥ ಅರ್ಥ—ಕಾರ್ಯಂಗಳಂ ಮೊದಲ್ಗೊಳ್ವುಪಾಯಮುಂ, ಪುರುಷ ದ್ರವ್ಯಂಗಳ ನೆಜವಿಯುಂ, ದೇಶ ಕಾಲಂಗಳಬಿ'ತಮುಂ, ಕಾರ್ಯದ ವಿಘ್ನಂಗಳಂ ಮಾಣಿಸುವುದುಂ, ಕಾರ್ಯದ ತೀರ್ಕಣೆಯುಮೆಂದಿಂತು ಐದು ಅವಯವಂಗಳನುಳ್ಳುದು ಮಂತ್ರಂ ॥ ಇನಿತಿಲ್ಲದ ಮಂತ್ರದಿಂ ಕಾರ್ಯ ನಿಶ್ಚಯಮಿಲ್ಲೆಂಬುದು ತಾತ್ಪರ್ಯಂ. ಸೂತ್ರಾರ್ಥ—ಕಾರ್ಯ ಸಿದ್ಧಿಯ ಹನ್ನಬರಂ ಮಂತ್ರವು ರಕ್ಷಿಸಲ್ವೇಕಾದುದು ॥ ೨೮ ॥

ಹನ್ನೊಂದನೆಯ ಪುರೋಹಿತ ಸಮುದ್ದೇಶದಲ್ಲಿ 55 ವಾಕ್ಯಗಳಿವೆ. ಪುರೋಹಿತನ ಲಕ್ಷಣ :—ಕರಮುಗ್ಗಳನಪ್ಪ ಕುಲಮುಂ ಶೀಲಮುನುಳ್ಳನಂ, ಆಱಂಗದೊಳಂ ವೇದದೊಳಂ ದೈವದೊಳಂ ನಿಮಿತ್ತದೊಳಂ ದಂಡನೀತಿಯೊಳಂ ಕುಶಲನಪ್ಪನಂ, ದೈವದೊಳಾದ ಮನುಷ್ಯರೊಳಾದ ಆಪತ್ತುಗಳ್ಗೆ ಪ್ರತೀಕಾರಮಂ ಮಾಳ್ಪನಂ, ಪುರೋಹಿತನಂ ಮಾಳ್ಪುದು ॥ ೧ ॥ [ಪುರೋಹಿತನು ಮುಖ್ಯವಾಗಿ ರಾಜಗುರು] ಸೂತ್ರ ॥ ರಾಜ್ಞೋ ಹಿ ಮಂತ್ರಿ ಪುರೋಹಿತೌ ಮಾತಾ ಪಿತರೌ........ ॥ ೩ ॥ ಶಿಕ್ಷೆಯುಂ ಆಲಾಪಮುಂ ಕ್ರಿಯೆಯುಮೆಂಬಿವರೊಳ್ ಅರ್ಪಮನುಳ್ಳ (ಶಕ್ತಿಯನುಳ್ಳ) ಅರಸುಮಗಂ ಎಲ್ಲಾ ಲಿಪಿಗಳೊಳಂ, ಗಣಿತದೊಳ್ ವ್ಯಾಕರಣದೊಳಂ, ತರ್ಕ

ಕಾವ್ಯಶಾಸ್ತ್ರದೊಳಂ, ನೀತಿಶಾಸ್ತ್ರದೊಳಂ, ರತ್ನಪರೀಕ್ಷೆಯೊಳಂ, ಕಾಮಶಾಸ್ತ್ರ, ಶಸ್ತ್ರ ವಿದ್ಯೆ, ವಾಹನಶಾಸ್ತ್ರ ಎಂಬೀ ವಿದ್ಯೆಗಳೊಳಂ ಒಳ್ಳಿತ್ತಾಗಿ ಶಿಕ್ಷಿಸಿರಲ್ಪಡವೇಳ್ಪುಂ || ೪ || "ಅರಸು ಮಗಸಿನಿತಂ ಕಲಿಯದಂದು ರಾಜ್ಯಕ್ಕುಪಯೋಗನಲ್ಲೆಂಬುದು ತಾತ್ಪರ್ಯಂ" ಇಂದಿನ ಯುವ ಪೀಳಿಗೆಗೂ ಈ ಶಿಕ್ಷಣ ಅಗತ್ಯವಲ್ಲವೆ ?

12ನೆಯ ಸೇನಾಪತಿ ಸಮುದ್ದೇಶದಲ್ಲಿ ಮೂರು ವಾಕ್ಯಗಳಿವೆ. ಇವುಗಳಲ್ಲಿ ಸೇನಾಪತಿಯ ಗುಣಗಳೂ ದೋಷಗಳೂ ನಿರೂಪಿತವಾಗಿವೆ. 13ನೆಯ ದೂತ ಸಮುದ್ದೇಶದಲ್ಲಿ 23 ವಾಕ್ಯಗಳಿವೆ, "ದೂರಮಪ್ಪ ಕಾರ್ಯಂಗಳೊಳು (ದೂತಃ) ಅಟ್ಟಿದ ಮನುಷ್ಯಂ" || ೧ || ಅನಂತರ ದೂತನ ಲಕ್ಷಣಗಳನ್ನು ಹೇಳಿದೆ. (ಇವರು ರಾಯಭಾರಿಗಳು). ಆತಂ ಮೂಱ ತೆರದನುಂ—ನಿಸೃಷ್ಟಾರ್ಥ, ಪರಿಮಿತಾರ್ಥ, ಶಾಸನಹರ ಎಂದಿಂತು. 14ನೆಯ ಚಾರಸಮುದ್ದೇಶದಲ್ಲಿ 26 ವಾಕ್ಯಗಳಿವೆ. ಸೂತ್ರ || ಸ್ವಪರ ಮಂಡಲ ಕಾರ್ಯಾ ಕಾರ್ಯಾವಲೋಕನೇ ಚಾರಶ್ಚಕ್ಷೂಂಷಿ ಕ್ಷಿತಿ ಪತೀನಾಂ || ೧ || ಅರ್ಥ—ತನ್ನ ಪೆಱರ ನಾಡ ಮಾಡಲ್ಪಡುವುದುಂ ಮಾಡಲ್ಪಡ ದುದುಮೆಂದಿವಂ ನೋಳ್ಪಲ್ಲಿ ಹೆರಿಗರ್ (ಗೂಢ ಪುರುಷರು) ಕಣ್ಗಳ್ ಅರಸುಗಳ್ಗೆ || ೧ || ಅವರ ಗುಣಗಳು, ಭೇದಗಳು ಮತ್ತು ಕಾರ್ಯ ವಿಧಾನ ಮೊದಲಾದವನ್ನು ಮುಂದಿನ ಸೂತ್ರಗಳಲ್ಲಿ ವಿವರಿಸಲಾಗಿದೆ.

15ನೆಯ ವಿಚಾರ ಸಮುದ್ದೇಶದಲ್ಲಿ 17 ಸೂತ್ರಗಳಿವೆ. ವಿಚಾರಿಸದೆ ಆವ ಕಾರ್ಯಮುಮಂ ಮಾಡದಿರ್ಕೆ || ೧ || ಪ್ರತ್ಯಕ್ಷಮುಂ ಅನುಮಾನಮುಂ ಆಗಮ ಮೆಂಬಿವ ಱಂ ಎಂತಿರ್ದುದಂತಾಗಿ ವಸ್ತುವಂ ನಿಯಮಿಸುವುದಕ್ಕೆ ಕಾರಣಮಿಂತಪ್ಪುದು ವಿಚಾರಮೆಂಬುದು || ೨ || ಕಂಡದ್ದನ್ನೂ ವಿಚಾರಿಸಿ ತಿಳಿಯಬೇಕು. ಆತುರದಿಂದ ಅವಿಚಾರದಿಂದ ಮಾಡಿದ ಕಾರ್ಯಗಳು ಅನರ್ಥಕಾರಿಗಳು ಎಂಬಿವೇ ಮೊದಲಾದ ವಿವರಗಳು ಮುಂದಿನ ಸೂತ್ರಗಳಲ್ಲಿವೆ.

16ನೆಯ ವ್ಯಸನ ಸಮುದ್ದೇಶದಲ್ಲಿ 32 ಸೂತ್ರಗಳಿವೆ. ಮನುಷ್ಯನನ್ನು ಶ್ರೇಯ ದತ್ತಣಿಂದ (ಪುಣ್ಯದತ್ತಣಿಂದ) ಅಗಲಿಸುವುದು ವ್ಯಸನ (1). ವ್ಯಸನಮಿತ್ತೆಱಂ— ಸಹಜಮೆಂದುಂ ಆಹಾರ್ಯಮೆಂದಿಂತು || 2 || ಇಲ್ಲಿಂದ ಮುಂದೆ ವ್ಯಸನಗಳಿಂದ ಮುಕ್ತವಾಗುವ ರೀತಿ ಮೊದಲಾದ ವಿವರಗಳಿವೆ.

17ನೆಯ ಸ್ವಾಮಿಸಮುದ್ದೇಶದಲ್ಲಿ 62 ಸೂತ್ರಗಳಿವೆ. ಧರ್ಮದೊಳ್ ನೆಗಳ್ದ, ಕುಲಮುಂ ನೆಗಳ್ತೆಯುಂ ಪರಿವಾರಮುಮೆಂಬಿವರಿಂ(ಅನ್ವಯ) ಶುದ್ಧಮಪ್ಪ ಪ್ರತಾಪಮ ನುಳ್ಳ ನೀತಿಯೊಳೆ ಕೂಡಿದ ನೆಗಳ್ತೆಯುಳ್ಳನುಂ ಸ್ವಾಮಿಯೆನಿಸಿಕೊಂಬಂ || ೧ || ಸ್ವಾಮಿಯನೇ ಪ್ರಧಾನಮಾಗುಳ್ಳವು ಎಲ್ಲಾ ಪ್ರಕೃತಿಗಳು ಪ್ರಯೋಜನ ನಿಮಿತ್ತವಾಗಿ

ಅಹರು. ಒಡೆಯನಿಲ್ಲದವರು ಆಗರು ‖ ೩ ‖ ಸ್ವಾಮಿಯಿಲ್ಲದಾಪನುಂ ಸಮಗ್ರ ನಲ್ಲೆಂಬುದು ತಾತ್ಪರ್ಯಂ. ಮುಂದೆ ಸ್ವಾಮಿಯ ಗುಣಾವಗುಣಗಳು ಮೊದಲಾದ ವಿವರಗಳಿವೆ.

18ನೆಯ ಅಮಾತ್ಯ ಸಮುದ್ದೇಶದಲ್ಲಿ 73 ಸೂತ್ರಗಳಿವೆ. ಸೂತ್ರಾರ್ಥ—ಚತುರಂಗವೆಂಬೀ ಜೂದಿನೊಳಂ ಪೆರ್ಗಡೆಯಿಲ್ಲದ [ಅಮಾತ್ಯನಿಲ್ಲದ] ಅರಸನಿಲ್ಲ. ಮತ್ತೆ ಉಳಿದ ಅರಸು ಪೆರ್ಗಡೆಯಿಲ್ಲದಂ ಏನ್ (ಉಂಟೆ) ‖ ೧ ‖ ಸೂತ್ರ—ಆಯವ್ಯಯೋಃ ಸ್ವಾಮಿರಕ್ಷಾ ತಂತ್ರ (ಪರಿಗ್ರಹ) ಪೋಷಣಂ ಚಾಮಾತ್ಯಾನಾಮಧಿಕಾರಃ ‖ ೫ ‖ ಇಲ್ಲಿಂದ ಮುಂದೆ ಅಮಾತ್ಯನ ಗುಣದೋಷಗಳು, ಕಾರ್ಯ ವಿಧಾನಗಳು ಮೊದಲಾದ ವಿವರಗಳಿವೆ.

19ನೆಯ ಜನಪದ ಸಮುದ್ದೇಶದಲ್ಲಿ 28 ವಾಕ್ಯಗಳಿವೆ. ಪಶುಧಾನ್ಯ ಹೊನ್ನು ಈ ಸಂಪತ್ತುಗಳಿಂದ ಕೂಡಿದುದು ರಾಷ್ಟ್ರ: ಒಡೆಯನಿಗೆ ದಂಡಾಧಿಕಾರ ಹಾಗೂ ಕೋಶ ವೃದ್ಧಿಯನ್ನುಂಟು ಮಾಡುವುದು ದೇಶ ; ವಿವಿಧ ವಸ್ತು ಪ್ರದಾನದಿಂದ ಒಡೆಯನಿಗೆ ಗಜಾಶ್ವ ಸಂಪತ್ತನ್ನು ಒದಗಿಸುವುದು ವಿಷಯ ; ಅಳ್ವನ ಬಯಕೆಯನ್ನು ಪೂರಯಿಸಿ ಸಂತೋಷಗೊಳಿಸುವುದು ಮಂಡಲ. ಜನಸ್ಯ ವರ್ಣಾಶ್ರಮ ಲಕ್ಷಣಸ್ಯ ದ್ರವ್ಯೋತ್ಪತ್ತೇರ್ವಾ ಪದಂ—ಸ್ಥಾನಮಿತಿ ಜನಪದಃ ‖ ೫ ‖ ಅನಂತರ ಜನಪದ ಗುಣದೋಷ ವಿವರಗಳಿವೆ. ಸೂತ್ರಾರ್ಥ—ಯಾವ ದೇಶದಲ್ಲಿ ಬೇಸಾಯವು ಮಳೆಯ ನೀರನ್ನೇ ಅವಲಂಬಿಸಿದೆಯೋ ಅಲ್ಲಿ ದುರ್ಭಿಕ್ಷ ‖ ೧೦ ‖

20ನೆಯ ದುರ್ಗ ಸಮುದ್ದೇಶದಲ್ಲಿ 7 ವಾಕ್ಯಗಳಿವೆ. ಪಗೆವರ್ಗಸಾಧ್ಯಮಪ್ಪುದು ದುರ್ಗಂ. ಆ ದುರ್ಗಂ ಇತ್ತೆಱಂ ಸ್ವಾಭಾವಿಕಂ (ತನಗೆ ತಾನಾದುದು) ಆಹಾರ್ಯಂ ಚ (ಮಾಡಿದುದು).

21ನೆಯ ಕೋಶ ಸಮುದ್ದೇಶದಲ್ಲಿ 14 ವಾಕ್ಯಗಳಿವೆ. ಸಂಪತ್ತಿನೊಳಂ ವಿಪತ್ತಿನೊಳಂ ಆಳ್ದನ ತಂತ್ರದ ಪೆರ್ಚಂ ಅಪ್ಪದೊಂದು ಕೂಡಿಪ್ಪುದೆಂದಿಂತು ಕೋಶ ಮೆಂಬುದು ‖ ೧ ‖ ಅನಂತರ ಭಂಡಾರದ ಗುಣಗಳನ್ನು ಹೇಳಿ ಭಂಡಾರವನ್ನು ಹೆಚ್ಚಿಸುತ್ತ ವು ಹುಟ್ಟಿದ ಅರ್ಥವನ್ನು ಉಪಭೋಗಿಸುವುದು ‖ ೩ ‖

22ನೆಯ ಬಲ ಸಮುದ್ದೇಶದಲ್ಲಿ 29 ವಾಕ್ಯಗಳಿವೆ. ಒಡೆಯನನ್ನು ಎಲ್ಲಾ ಅವಸ್ಥೆಗಳಲ್ಲಿಯೂ (ಬಲತೇ ಸಂವೃಣೋತಿ ಇತಿ ಬಲಂ) ರಕ್ಷಿಸುವುದು ಬಲ ‖ ೧ ‖ ಅನಂತರ ಹಸ್ತಿ, ಅಶ್ವ, ಪದಾತಿಗಳ ವಿಷಯಗಳೂ, ಬಲದ ಗುಣಗಳೂ ಇವೆ.

23ನೆಯ ಮಿತ್ರ ಸಮುದ್ದೇಶದಲ್ಲಿ 10 ವಾಕ್ಯಗಳಿವೆ. ಸಿರಿಯೊಳೆಂತಂತೆ ಆಪತ್ತಿನೊಳಂ ಆವನೊರ್ವಂ ಸ್ನೇಹವ ಮಾಡುವನೋ ಅವಂ ಮಿತ್ರಂ. ಅನಂತರ ಮಿತ್ರನ ಗುಣದೋಷಗಳ ವಿವರಣೆಗಳಿವೆ. ಯಾವುದಾದರೊಂದು ಉಪಕಾರದಿಂದ ತಿರ್ಯಗ್ಜಾತಿಗಳೂ ಪ್ರತ್ಯುಪಕಾರ ಮಾಡುವವು ; ಆದರೆ ಮನುಷ್ಯನು ಉಪಕಾರವನ್ನು ಮರೆತು ಅಪಕಾರ ಮಾಡುವುದುಂಟು (9) ಇದಕ್ಕೆ ನಿದರ್ಶನವಾಗಿ—ತಥಾ ಚೋಪಾಖ್ಯಾನಂ ಎಂದು ಪಂಚ ತಂತ್ರದ ಭೇದ ಪ್ರಕರಣದಲ್ಲಿರುವ ಶಿವಭೂತಿಯ ಕಥೆಯೂ, ಅದೇ ಪ್ರಕರಣದ ನಾಳೀಜಂಘನೆಂಬ ಗೋಲಾಂಗೂಲದ ಕಥೆಯೂ ಇವೆ. ಆದರೆ ಪಂಚ ತಂತ್ರದ ಕಥೆಗೂ ಇಲ್ಲಿ ಸೂಚಿಸಿರುವ ಶಿವಭೂತಿಯ ಕಥೆಗೂ ವಿವರಗಳಲ್ಲಿ ಕೆಲವು ವ್ಯತ್ಯಾಸಗಳಿವೆ.

24ನೆಯ ರಾಜರಕ್ಷಾಸಮುದ್ದೇಶದಲ್ಲಿ 91 ಸೂತ್ರಗಳಿವೆ. ಅರಸು ರಕ್ಷಿಸಲ್ಪಟ್ಟನಾದೊಡೆ ಎಲ್ಲಂ ರಕ್ಷಿಸಲ್ಪಟ್ಟುದಕ್ಕುಂ. ಅದು ಕಾರಣದಿಂ ತನ್ನ ವರ್ಗಳತ್ತಣಿಂದೆಯುಂ ಪೆಱರಿಂದಮುಂ ನಿಚ್ಚಂ ಅರಸು ರಕ್ಷಿಸಲ್ಪಡುವಂ ॥ ೧ ॥ ಇಲ್ಲಿ ರಾಜ ರಕ್ಷಣೆಗೆ ಸಂಬಂಧಿಸಿದ ವಿವರಗಳಿವೆ.

25ನೆಯ ದಿವಸಾನುಷ್ಠಾನ ಸಮುದ್ದೇಶದಲ್ಲಿ 111 ವಾಕ್ಯಗಳಿವೆ. ಬ್ರಾಹ್ಮೇ ಮುಹೂರ್ತೇ ಉತ್ಥಾಯ ಇತಿ ಕರ್ತವ್ಯತಾಯಾಂ ಸಮಾಧಿಮುಪೇಯಾತ್ ॥ ೧ ॥ ಇತಿಕರ್ತವ್ಯತಾಯಾಂ—ದಿವಸಾನುಷ್ಠಾನ. ಆ ದಿನದಲ್ಲಿ ಮಾಡಬೇಕಾದ ಕಾರ್ಯಂಗಳಲ್ಲಿ ಏಕಾಗ್ರತೆಯಂ ಪೊರ್ದುಗೆ ಇಲ್ಲಿಂದ ಮುಂದೆ ಆಹಾರ ವಿಹಾರಾದಿ ವಿಷಯಗಳ ಬಗೆಗೆ ವಿವರಣೆಗಳಿವೆ.

26ನೆಯ ಸದಾಚಾರ ಸಮುದ್ದೇಶದಲ್ಲಿ 69 ವಾಕ್ಯಗಳಿವೆ. ಸಮುದ್ದೇಶದ ಸೂಕ್ತಿಗಳು ಗಮನಾರ್ಹವಾಗಿವೆ ಅವುಗಳಲ್ಲಿ ಕೆಲವು ಸೂಕ್ತಿಗಳ ಸೊಬಗನ್ನು ಸವಿಯಬಹುದು ಸ್ಥಳ ಸಂಕೋಚ ಭಯದಿಂದ ಸಂಸ್ಕೃತ ಮೂಲವನ್ನು ಕೊಟ್ಟಿಲ್ಲ. ಕನ್ನಡ ಅನುವಾದವನ್ನು ಮಾತ್ರ ಕೊಟ್ಟಿದೆ. ಆಸೆ, ಮರವೆ, ವಿಶ್ವಾಸಗಳಿಂದ ಬೃಹಸ್ಪತಿಯಾದ ಪುರುಷನೂ ವಂಚಿಸಲ್ಪಡುವನು ॥ ೧ ॥ ಪದವಿಯೊಳಿಲ್ಲದನ, ತನ್ನ ಕುಲದಿಂ ಗರ್ವಂ ಆವಂಗೆ ಲಘುತ್ವಮಂ ಮಾಡದು ॥ ೫ ॥ ಆವನೊರ್ವನ ಜನ್ಮವು ಪಳಿಯೊಳ್ಸಿಕ್ಕಿದುದಲ್ಲವೋ ಆತನೇ ಮಹಾ ಭಾಗ್ಯವಂತನು ॥ ೯ ॥ ಭಯಗಳಲ್ಲಿ ವಿಷಾದವು ಪ್ರತೀಕಾರವಲ್ಲ ; ಧೈರ್ಯಾವಲಂಬನವೇ ಪ್ರತೀಕಾರ ॥ ೧೧ ॥ ಪಗೆವರಿಂದೆಯುಂ ಲೇಸಾಗಿನುಡಿಯಲ್ಪಟ್ಟ ವಚನಮಂ ದೂಷಿಸಲಾಗದು ॥ ೧೪ ॥ ಆವನೊರ್ವಂ ಪಡೆದನಿತರಿಂದಮೆ ಸಂತುಷ್ಟನಕ್ಕುಂ ಆತಂಗೆ ಲಕ್ಷ್ಮಿಯು ಸುಮುಖಿಯಲ್ಲಳ್ ॥ ೧೭ ॥ ಅಂಜಿದರೊಳ್ ಅಭಯಂಗುಡುವುದಱತ್ತಣಿಂ ಮತ್ತೊಂದು ದಾನಮಿಲ್ಲ ॥ ೧೭ ॥

ಆಯಕ್ಕೆ ತಕ್ಕಂತು ವ್ಯಯವನ್ನು ಮಾಡಬೇಕು ||೪೪|| ಸಂತೋಷಿಯೇ ಸುಖಿ ||೪೮||
ವ್ರತಂ, ವಿದ್ಯಾ, ಸತ್ಯಂ, ಆನೃಶಂಸ್ಯಂ, ಅಲೌಲ್ಯತಾ, ಚ ಬ್ರಾಹ್ಮಣ್ಯಂ ; ನ
ಪುನರ್ಜಾತಿ ಮಾತ್ರಂ ||೫೬|| (ಅಕ್ರೂರತೆ, ಅತ್ಯಾಶೆ ಇಲ್ಲದಿರುವುದು (ಬ್ರಾಹ್ಮಣ್ಯವು
ಜಾತಿ ಮಾತ್ರದಿಂದಲ್ಲ) ಈ ಗುಣಂಗಳಿಲ್ಲದ ಬ್ರಾಹ್ಮಣಂ ಶೂದ್ರ ನೆಂಬುದು
ತಾತ್ಪರ್ಯಂ. ಅರಸುಗಳ ಬಲಮುಂ ಬಿಲ್ಲುಂ ಮೋಣ್ದೋಷಮಿಲ್ಲದ ಪ್ರಾಣಿಗಳ
ಕೇಡಿಂಗೆ ಕಾರಣಮಲ್ಲದು ; ಮತ್ತೆ ಶರಣ್ಬೊಕ್ಕರಂ ರಕ್ಷಿಸಲ್ವೇಡಿ (ರಕ್ಷಣೆಗಾಗಿ) ||೬೯||.

27ನೆಯ ವ್ಯವಹಾರ ಸಮುದ್ದೇಶದಲ್ಲಿ 70 ವಾಕ್ಯಗಳಿವೆ. ಮನುಷ್ಯರ್ಗೆ
ಸ್ತ್ರೀಯುಂ (ಗಂಡನಿಗೆ ಹೆಂಡತಿಯು) ನಿಶ್ಚಯದಿಂ ಸಂಕಲೆಯಿಲ್ಲದೆಯುಂ ಪಿರಿದಪ್ಪ
ಕಟ್ಟೆಂದು ಪೇಳ್ವರ್ ||೧|| ಇದು ಮನದ ಬಂಧನವೆಂಬುದು ತಾತ್ಪರ್ಯಂ.
ತಾಯಿಯುಂ ಸ್ತ್ರೀಯುಂ (ಹೆಂಡತಿ) ಏನುಮಾನಱಿಯದ (ವ್ಯವಹಾರಾದಿಗಳನಱಿಯದ
ಮಕ್ಕಳುಂ ಎಂಬ ಮೂವರುಂ ನಿಶ್ಚಯದಿಂ ರಕ್ಷಿಸಲ್ಪಡತಕ್ಕವರು ||೨|| ಇವರಂ
ರಕ್ಷಿಸದಂ ಪುರುಷನಲ್ಲೆಂಬುದು ತಾತ್ಪರ್ಯಂ. ಅತಿಥಿ ಪರಿಜನರಿಗೆ ತೃಪ್ತಿಯನ್ನುಂಟು)
ಮಾಡಿದ ದಿನವೇ ಹಬ್ಬ || ೫೩ || ದುಷ್ಕೃತ್ಯಗಳ ನಿವೃತ್ತಿಯೇ ತೀರ್ಥ
ಯಾತ್ರೆ || ೫೫ ||

28ನೆಯ ವಿವಾದಸಮುದ್ದೇಶದಲ್ಲಿ 61 ವಾಕ್ಯಗಳಿವೆ. ಈ ಸಮುದ್ದೇಶದಲ್ಲಿ
ವಿವಾದಗಳು-ಪ್ರಮಾಣಗಲು-ಪ್ರಮಾಣಗಳಿಲ್ಲದವು-ಇವುಗಳ ಪರಿಷ್ಕರಣ-ದಿವ್ಯಗಳು-
ದಿವ್ಯಪರೀಕ್ಷೆ-(Trial by ordeal)-ಶಪಥಗಳು-ಅವುಗಳ ರೀತಿ-ವಿವಾದಗಳನ್ನು
ಪರಿಹರಿಸುವ ಸಭೆ-ಸಭಾಧ್ಯಕ್ಷ ಮೊದಲಾದ ವಿಷರಗಳಿವೆ. ಈ ವಿಷಯಗಳಿಗೆ
ಸಂಬಂಧಿಸಿದ ಹೃದ್ಯವಾದ ಕೆಲವು ಸೂಕ್ತಿಗಳನ್ನು ಗಮನಿಸಬಹುದು. ಗುಣಮುಮ್
ದೋಷಮುಮೆಂಬೀ ಎಱಡರೊಳ್ ತುಲಾದಂಡ ಸಮಾನನಾದವನು ಅರಸು || ೧ ||
ಆದಿತ್ಯನಂತೆ ವಸ್ತುವೆಂತಿರ್ದುದಂತೆ ಪ್ರಕಟಿಸುವ ಪ್ರತಿಭೆಯುಳ್ಳವರು ಸಭ್ಯರು || ೩ ||
ವ್ಯವಹಾರ ಶಾಸ್ತ್ರಮುಂ ಕಂಡು ಕೇಳ್ದುಮಱಿಯದವರುಂ, ಪ್ರತಿವಾದಿಗಳುಂ, ಲಂಚ
ಗೊಂಡರುಂ ಸಭ್ಯರಲ್ಲ || ೪ || ಸಭಾಪತಿಯು ತಾನೇ ಪ್ರತ್ಯರ್ಥಿಯಾದರೆ ಅಲ್ಲಿ ವಿವಾ
ದಕ್ಕೆ ಅವಕಾಶವಿಲ್ಲ || ೬ || ಸಭೆಗೂ ಸಭಾಪತಿಗೂ ಮಧ್ಯಸ್ಥವಿಲ್ಲವಿರಲು ಗೆಲು
ವೆತ್ತಣದು ? || ೭ || ಇದಕ್ಕೆ ದೃಷ್ಟಾಂತವಾಗಿ ಕಿಂಬಹು (ನಾ) [ಭಿಃ] ಛಾಗಲಃ
ಶ್ವಾಸಕ್ರಿಯತೇ ? || ೮ || [ಗಾಯಿಲಿವಾಡಂ ನಾಯಾಮಿದವೆಂಬುದು ನಾಳ್ಗಾದೆ
(ನಾಡಗಾದೆ)] ಇದು "ನಾಲ್ವರ್ ಧೂರ್ತರ್ ಓರ್ವ ಬ್ರಾಹ್ಮಣ" ಎಂಬ ಕಥೆಯಾಗಿ
ಪಂಚತಂತ್ರದ ಭೇದ ಪ್ರಕರಣದಲ್ಲಿದೆ.

29ನೆಯ ಷಾಡ್ಗುಣ್ಯ ಸಮುದ್ದೇಶದಲ್ಲಿ 106 ವಾಕ್ಯಗಳಿವೆ. (ಷಡ್ಗುಣೋಪ
ಯೋಗಿಯಪ್ಪ) ಶಮಮುಂ ವ್ಯಾಯಾಮಮುಮೆಂಬೆಱಡುಂ (ಯೋಗಃ) ಫಲ

ಪ್ರಾಪ್ತಿಯುಂ (ಕ್ಷೇಮಃ) ಪ್ರಾಪ್ತ ಫಲ ಭೋಗದ ರಕ್ಷೆಯುಮೆಂಬಿವಕ್ಕೆ ವ್ಯತಿಕ್ರಮದಿಂ ಕಾರಣಂಗಳ್ ||೧|| ಫಲಮನಯ್ದಿಸುವ ವ್ಯಾಪಾರಂ ವ್ಯಾಯಾಮಂ, ಫಲಮನನುಭವಿಸುವಲ್ಲಿ ವಿಘ್ನಮನುಪಶಮಿಸುವುದು ಶಮಂ ಎಂಬುದು ತಾತ್ಪರ್ಯಂ. ಬೇಕಾದುದನ್ನು ಪಡೆಯುವುದಕ್ಕೆ ಮಾಡಬೇಕಾದ ಸಾಧನೆ ಅಥವಾ ದುಡಿಮೆಯೇ ವ್ಯಾಯಾಮ || ೨ || ಪ್ರಾಪ್ತಫಲ ರಕ್ಷಣೆಯಲ್ಲಿಯೂ ಅನುಭವಿಸುವಲ್ಲಿಯೂ ಇರಬೇಕಾದ ಉಪಶಮ ಅಥವಾ ಮನೋನಿಗ್ರಹವು ಶಮ ||೩|| ಫಲಂಗಳ್ ದೈವಮಾನುಷಾಧೀನಂಗಳ್ || ದೈವಮೆಂಬುದು ಧರ್ಮಾಧರ್ಮಗಳು (ಪುಣ್ಯ ಪಾಪಂಗಳು) || ೪ || ಮಾನುಷಂ=ಮನುಷ್ಯ ವ್ಯಾಪಾರವು. ನಯಾ ನಯೌ=ನೀತಿಯುಮನೀತಿಯೆಂಬಿವು. ಸೂತ್ರಂ || ದೈವಂ ಮಾನುಷಂ ಚ ಕರ್ಮ ಲೋಕಂ ಯೋಜಯತಿ (ಯಾಂಪಯತಿ)" || ೬ || ಮನುಷ್ಯವ್ಯಾಪಾರಂ ಚಿಂತ್ಯಂ-ವಿಚಾರಿಸಲ್ಬಕ್ಕುಂ. ದೈವಂ ಅಚಿಂತ್ಯಂ = ವಿಚಾರಿಸಲ್ಬಾರದು = ದೈವಂ ಮನುಷ್ಯಾಧೀನಮಲ್ಲ || ೭ || ಮಾನುಷ (ಪುರುಷಕಾರ)ವನ್ನವಲಂಬಿಸಿದರೆ ಕಾರ್ಯಸಿದ್ಧಿ ಕಾರ್ಯಹಾನಿಗಳಲ್ಲಿ ಸಂಶಯ ಬರಬಹುದು ದೈವವೇ ಮುಖ್ಯವೆಂದು ನಂಬಿ ಕುಳಿತವನಿಗೆ ಕೇಡು ನಿಶ್ಚಿತ || ೧೩ || ಆಯುಸ್ಸು ಮತ್ತು ಔಷಧಿಗಳ ಸೇರುವಿಕೆಯು ಹೇಗೋ ಹಾಗೆ ದೈವ ಪುರುಷಕಾರಗಳ ಸೇರುವಿಕೆಯು ಇಷ್ಟವಾದದ್ದನ್ನು ಸಾಧಿಸುತ್ತದೆ. "ದೈವವೆಂಬುದು ಪುರೋಪಾರ್ಜಿತಕರ್ಮ" ಎಂಬುದು ವೃತ್ತಿಕಾರನು 15ನೆಯ ವಾಕ್ಯಕ್ಕೆ ಹೇಳಿರುವ ಪೀಠಿಕೆಯಲ್ಲಿ ಸೂಚಿಸಿರುವ ಅಭಿಪ್ರಾಯ. ದೈವವೆಂಬುದು ಸಂಚಿತ ಕರ್ಮ= ಕೂಡಿಟ್ಟುಕೊಂಡ ಕರ್ಮ. ಪೂರ್ವಾರ್ಜಿತ ಕರ್ಮಫಲವನ್ನು ಅನುಭವಿಸುತ್ತಾ ಆಚರಿಸುವ ಧರ್ಮಕಾರ್ಯಗಳು ಪುಣ್ಯವನ್ನೂ, ಅಧರ್ಮಕಾರ್ಯಗಳು ಪಾಪವನ್ನೂ ಧರ್ಮಾಧರ್ಮ ಮಿಶ್ರಿತ ಕಾರ್ಯಗಳು ಪುಣ್ಯ ಪಾಪಗಳೆರಡರ ಸಮ್ಮಿಶ್ರ ಫಲವನ್ನೂ ಉಂಟು ಮಾಡುತ್ತವೆ || ೧೫-13 || ತ್ರಿಪುರುಷ (ಬ್ರಹ್ಮ, ವಿಷ್ಣು, ರುದ್ರ) ಮೂರ್ತಿ ಸ್ವರೂಪವನ್ನು ಹೊಂದಿರುವುದರಿಂದ ರಾಜನಿಂದ ಬೇರೆಯಾದ ದೈವಮಿಲ್ಲ || ೧೮-15 ||.

(ಶಕ್ತಿತ್ರಯಗಳಲ್ಲಿ) ಜ್ಞಾನಬಲಂ=ಬುದ್ಧಿಯ ಬಲವು ಮಂತ್ರ ಶಕ್ತಿಯೆಂಬುದು || ೩೫ || ಶಶಕೇನ ಸಿಂಹ ವ್ಯಾಪಾದನಮತ್ರ ದೃಷ್ಟಾಂತಃ ||೩೬|| ಮೊಲನಿಂ ಸಿಂಹದ ಕೊಲೆ–ಈ ಕಥೆಯು ಪಂಚತಂತ್ರದ ಭೇದ ಪ್ರಕರಣದಲ್ಲಿರುವ ಕಥೆ. ಕೋಶ, ದಂಡ, ಬಲವು ಪ್ರಭುಶಕ್ತಿ || ೩೭ || ವಿಕ್ರಮ ಬಲವು ಉತ್ಸಾಹ ಶಕ್ತಿ. ಇಲ್ಲಿ ರಾಮನು ದೃಷ್ಟಾಂತ. ಮೂಱುಂಶಕ್ತಿಗಳೊಳ್ ಕೂಡಿದನಂ ಅರಸುಗಳೊಳುತ್ತಮಂ || ೪೦ ||.

ಸಂಧಿ ವಿಗ್ರಹ ಯಾನ ಆಸನ ಸಂಶ್ರಯ ದ್ವೈಧೀಭಾವಗಳು (ಅರಸುಗಳ)

ಆರು ಗುಣಗಳು || ೪೩ || 44 ರಿಂದ 70ನೆಯ ಸೂತ್ರದವರೆಗೆ ಷಾಡ್ಗುಣ್ಯಕ್ಕೆ ಸಂಬಂಧಿಸಿದ ವಿವರಗಳಿವೆ. ಸಾಮ-ದಾನ ಭೇದ ದಂಡಗಳು ಉಪಾಯಗಳು ||೭೧|| ಮುಂದಿನ ಸೂತ್ರಗಳಲ್ಲಿ ಈ ಉಪಾಯಗಳ ಪ್ರಯೋಗಗಳ ವಿವರಗಳಿವೆ.

ಈ ಸಮುದ್ದೇಶದ ಕೆಲವು ಸೂಕ್ತಿಗಳನ್ನು ಗಮನಿಸಬಹುದು. ಅಭಿಮಾನಿಯಾದವನಿಗೆ, ಪರರ ಇಚ್ಛೆಯಂತೆ ನಡೆದು ಆತ್ಮವಿಕ್ರಯ ಮಾಡಿಕೊಳ್ಳುವುದಕ್ಕಿಂತ ಮರಣವೇ ಲೇಸು || 61 || ಅಡವಿಯಲ್ಲಿ ಹುಟ್ಟಿದ ಓಷಧಿಯು ಕ್ಷೇಮಕ್ಕೆ ಕಾರಣವಾಗದೆ ? || 79 || ಬಂದ ಅರ್ಥವನ್ನು ಯಾವ ಕಾರಣದಿಂದಲೂ ಉದಾಸೀನ ಮಾಡಲಾಗದು || 95 ||| ಅರ್ಥಾಗಮವಾದಾಗಲೇ ಎಲ್ಲ ತಿಥಿ, ನಕ್ಷತ್ರ, ಗ್ರಹಬಲಗಳು | |96 || ಆನೆಯಿಂದ ಆನೆಯನ್ನು ಕಟ್ಟುವಂತೆ ಅರ್ಥದಿಂದ ಅರ್ಥೋಪಾರ್ಜನೆ. ಕೇವಲ ಬುದ್ಧಿ ಪುರುಷಕಾರಗಳಿಂದಲ್ಲ || 97ನ88 ||.

30ನೆಯ ಯುದ್ಧ ಸಮುದ್ದೇಶದಲ್ಲಿ 124 ವಾಕ್ಯಗಳಿವೆ. ಸೂತ್ರ || ಸಕಿಂ ಮಂತ್ರೀ ಮಿತ್ರಂ [ಸಹಾಯೋ] ವಾ ? ಯಃ ಪ್ರಥಮ ಮೇವ ಯುದ್ಧೋದ್ಯೋಗಂ ಭೂಮಿತ್ಯಾಗಂ ಚ ಉಪದಿಶತಿ || ೧ || ಸಂಗ್ರಾಮದಲ್ಲಿ ಅನರ್ಥ ಸಂಶಯವನ್ನು ನುಡಿಯುವನು ಯೋಧನೇ ? || ೨ || ಬುದ್ಧಿ ಯುದ್ಧದಿಂದ ಶತ್ರುವನ್ನು ಗೆಲ್ಲಲಾರದವನು ಶಸ್ತ್ರಯುದ್ಧಕ್ಕೆ ತೊಡಗುತ್ತಾನೆ. ಪ್ರಜ್ಞಾನಂತರ ಪ್ರಜ್ಞೆ ಗೆಲ್ಲುವಂತೆ ಆಯುಧಗಳು ಗೆಲ್ಲಲಾರವು || ದೂರದಲ್ಲಿದ್ದನಾದರೂ ಮಾಧವನ ತಂದೆಯು ಕಾಮಂದಕೀ ಪ್ರಯೋಗದಿಂದ ಮಾಧವನಿಗೆ ಮಾಲತಿಯು ದೊರಕುವಂತೆ ಮಾಡಿದನೆಂಬುದನ್ನು ಕೇಳಿದ್ದೇವಲ್ಲವೆ ? || 8 || [ಇದು ಭವಭೂತಿ ಮಹಾ ಕವಿಯ ಮಾಲತೀ ಮಾಧವ ಪ್ರಕರಣದ ಕಥೆ. ಕಾಮಂದಕೀ ಪ್ರಯೋಗವು ಕಾಮಂದಕ ನೀತಿಯ ಮೂರ್ತಿ ಮತ್ತಾಗಿದ್ದ ಬೌದ್ಧ ಭಿಕ್ಷುಣಿಯು ಅವಲಂಬಿಸಿದ ತಂತ್ರವನ್ನು ಸೂಚಿಸುತ್ತದೆ.] ಈ ಸಮುದ್ದೇಶದ ಕೆಲವು ಸುಭಾಷಿತಗಳು ಹೀಗಿವೆ-ಅಲ್ಪವ್ಯಯ ಭಯದಿಂದ ಮೂರ್ಖನು ಸರ್ವನಾಶ ಮಾಡಿಕೊಳ್ಳುತ್ತಾನೆ || 28 || ಕೂಡಿಸಿದ ತಾವರೆಯ ನೂಲುಗಳಿಂದ ದಿಗ್ಗಜವನ್ನೂ ಬಂಧಿಸಬಹುದು || 42 || ಹಲ್ಲು ಕಿತ್ತ ಹಾವು ಹಗ್ಗವೇ ಸರಿ || 50 || ಅಧಿಕನೊಡನೆ ವಿಗ್ರಹವು ಆನೆಯೊಂದಿಗೆ ಪದಾತಿ ಯುದ್ಧದಂತೆ || 80 || ವಿಜಯಿಗಳಾದ ರಾಜರಲ್ಲಿ ಮೂರು ಬಗೆ :-ಧರ್ಮವಿಜಯೀ (81) ಲೋಭವಿಜಯಿ (82) ಅಸುರ ವಿಜಯೀ (83) ಅಸುರ ವಿಜಯಿಯೊಂದಿಗೆ ಸಂಶ್ರಯವು ವಧಾಗೃಹವನ್ನು ಮೃಗವು ಪ್ರವೇಶಿಸಿದಂತೆ || 84 ||. ಯುದ್ಧಾನಂತರ ಹಿಂದಿರುಗಿ ಹೋಗುವ ಯೋಧರನ್ನು ಮನ್ನಿಸಿ ಕಳುಹಿಸುವುದು, ನಿಂತವರೊಡನೆ ಸೇರುವುದೂ ದಂಡನಾಯಕನ ಅಧೀನವಾಗಿರುವುದು ಒಳ್ಳೆಯದು || 87 (89) ||.

31ನೆಯ ವಿವಾಹ ಸಮುದ್ದೇಶದಲ್ಲಿ 35 ವಾಕ್ಯಗಳಿವೆ. ಹನ್ನೆರಡು ವರ್ಷ ಪ್ರಾಯವುಳ್ಳ ಸ್ತ್ರೀ, ಹದಿನಾರು ವರ್ಷದ ಹರೆಯವುಳ್ಳ ಪುರುಷರು ವ್ಯವಹಾರ ಸಮರ್ಥರು (ಎಂದರೆ ವಿವಾಹ ಕರ್ಮಕ್ಕೆ ಯೋಗ್ಯರು) || ೧ || ವ್ಯವಹಾರ ಕ್ರಮ ದಿಂದ ಕನ್ಯೆಯನ್ನು ವರಿಸುವ, ಅಗ್ನಿದ್ವಿಜ ಸಾಕ್ಷಿಕವಾದ ಪಾಣಿಗ್ರಹಣವು ವಿವಾಹ || ೩ || ಎಂಟು ವಿಧವಾದ ವಿವಾಹದ ವಿವರಗಳು-ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ ಇವು ಧರ್ಮ್ಯಗಳು. ಗಾಂಧರ್ವ, ಆಸುರ, ರಾಕ್ಷಸ, ಪೈಶಾಚ ಇವು ಅಧರ್ಮ್ಯಗಳಾದರೂ ವಧೂ ವರರಲ್ಲಿ ಪರಸ್ಪರ ಅನುರಾಗವಿದ್ದು ಕುಲಾಚಾರ ಶ್ರೇಷ್ಠತೆಗೆ ಕುಂದಿಲ್ಲವಾದರೆ ಅಧರ್ಮ್ಯವಲ್ಲ || 13 || ಕನ್ಯಾಗುಣ ದೋಷಗಳನ್ನು (14. 15) ಹೇಳಿದ್ದರೂ ವರನ ಗುಣದೋಷಗಳ ಪ್ರಸ್ತಾವವಿಲ್ಲ. ಗೃಹಿಣಿಯೇ ಗೃಹ, ಗೋಡೆ ಮೊಲ್ಬಾವಣಿಗಳ ನೆರವಿಯಲ್ಲ || ೩೧-32 ||.

32ನೆಯ ಪ್ರಕೀರ್ಣಕ ಸಮುದ್ದೇಶದಲ್ಲಿ 80 [78] ವಾಕ್ಯಗಳಿವೆ. ಸಮುದ್ರ ದಂತೆ ಒಳ್ಳಿತ್ತಪ್ಪ ವಚನರತ್ನಗಳ ಇರವಿಗೆ ಕಾರಣಮಪ್ಪುದು ಸಂಕೀರ್ಣಕಂ || ೧ || ವರ್ಣ-ಪದ-ವಾಕ್ಯ-ಪ್ರಮಾಣ-ಪ್ರಯೋಗ-ನಿಷ್ಣಾತಮತಿಃ ಸುಮುಖಃ ಸುವ್ಯಕ್ತ ಮಧುರ ಗಂಭೀರ ಧ್ವನಿಃ ಪ್ರಗಲ್ಭಪ್ರತಿಭಾವಾನ್ ಸಮ್ಯಗೂಹಾಪೋಹಾವಧಾರಣ ಗಮಕಶಕ್ತಿ ಸಂಪನ್ನಃ ಸಂಪ್ರಜ್ಞಾತ ಸಮಸ್ತ ಲಿಪಿ ಭಾಷಾ-ವರ್ಣಾಶ್ರಮ ಸಮಯ ಸ್ವಪರ ವ್ಯವಹಾರ ಸ್ಥಿತಿಃ ಆಶು ಲೇಖನ-ವಾಚನ ಸಮರ್ಥಶ್ಚ-ಇತಿ ಸಂಧಿ ವಿಗ್ರಹಿ ಗುಣಾಃ || 2 (೩) || ಈ ಸಮುದ್ದೇಶದ ಕೆಲವು ಸುಭಾಷಿತಗಳು :-ಆವನೊರ್ವ ನಲ್ಲಿ ಯಾಚಕರು ಬಂದು ಸಂತುಷ್ಟರಾಗದೆ ಹೋಗುವರೋ ಅತನು ಗೃಹಸ್ಥನೆ ? (14) ಎಲ್ಲಾ ಪುಸಿಗಳನೆ ಕಾಣಿಕೆಯಾಗುಳ್ಳುದು ವಿವಾಹವು. ಅದು ದೈವಾಯತ್ತ ಮತ್ತು ವಧೂವರರ ಬಾಳುವಿಕೆ ಪುಣ್ಯಾಧೀನ (22) ಅಶುಭಕ್ಕೆ ಕಾಲಮಂ ಕಳೆವುದೇ ಪಿಂಗಿಸುವುಪಾಯಂ (28). ಪುಲ್ಲಿಂದೆಯುಂ ಪ್ರಯೋಜನಮುಂಟು ಮತ್ತೆ ಕೈ ಕಾಲ ನುಳ್ಳ ಮನುಷ್ಯನಿಂ ಪ್ರಯೋಜನಮಿಲ್ಲವೇ ? (30) ಹೊಸಬನಾದ ಸೇವಕನು ಯಾವನು ತಾನೇ ವಿನಯವುಳ್ಳವನಾಗನು ?(74) ಧನವೈದದಿರಲು ಎಲ್ಲರೂ ತ್ಯಾಗಿ ಗಳೇ (76) ಅಪ್ರಿಯವನ್ನುಂಟುಮಾಡಿದರೂ ತಾಯೇ ಬಾಲಕನ ಬಾಳ್ಕೆಗೆ ಕಾರಣ ಮಕ್ಕುಂ (80) [76].

ವಾಕ್ಯ-ಸಾರತಃ ಸರ್ವೋऽಪಿ ಸರ್ವಾಸ್ವವಸ್ಥಾಸು ನೀತಿಪಥಂ ಆತ್ಮಪಥಂ ಚ ನವಿಸ್ಮರೇತ್, ತದಧ್ವನೀನಶ್ಚ ಭವೇತ್ || 77 || (ಅರ್ಥಾತ್, ಎಲ್ಲರೂ ಎಲ್ಲ ಅವಸ್ಥೆಗಳಲ್ಲಿಯೂ ನೀತಿಪಥವನ್ನು—ಆತ್ಮಪಥವನ್ನು ಮರೆಯಬಾರದು—ಅದೇ ಗಮ್ಯ ವಾಗಿರಬೇಕು). ವಾಕ್ಯ—ಜಯತ್ವೇವಂ ಧರ್ಮಸಂಪತ್ಸಮೃದ್ಧಾಃ ರಾಜಾನಃ ಪ್ರಜಾಶ್ಚ ಭಾರತೀಯಾಃ || 78 || (ಧರ್ಮ ಸಂಪತ್ ಸಮೃದ್ಧರಾದ

ಭಾರತೀಯ ರಾಜರೂ ಪ್ರಜೆಗಳೂ ಈ ರೀತಿಯಾಗಿ ಜಯಶಾಲಿಗಳಾಗಲಿ). ಗ್ರಂಥಾಂತ್ಯದ ಎರಡು ವಾಕ್ಯಗಳು ನೇಮಿನಾಥನ ಕನ್ನಡ ವೃತ್ತಿಯಿರುವ ಹಸ್ತಪ್ರತಿಯಲ್ಲಿಲ್ಲ. ಮುದ್ರಿತನಾಗರಿ ಅಕ್ಷರದ ಪ್ರತಿಯಲ್ಲಿದೆ. ಈ ಎರಡು ವಾಕ್ಯಗಳೂ ಸೋಮದೇವಸೂರಿಯವೇ ಎಂದು ಗ್ರಹಿಸಲಾಗಿದೆ.

ದಿನಾಂಕ 20-5-98 ರಂದು ಮಾಡಿದ ಜಿ. ಪಿ. ರಾಜರತ್ನಂ ಮತ್ತು ವೆಂಕಟರಂಗಪ್ಪ ಸ್ಮಾರಕ ದತ್ತಿ ಉಪನ್ಯಾಸವನ್ನು ಆಧರಿಸಿ ರಚಿಸಿದ ಲೇಖನ. ನೀತಿ ವಾಕ್ಯಾಮೃತದ ಕನ್ನಡ ವೃತ್ತಿಯಿರುವ ಹಸ್ತಪ್ರತಿಯನ್ನುಕೊಟ್ಟು ಅದರ ಅಭ್ಯಾಸದಲ್ಲಿ ನನ್ನನ್ನು ತೊಡಗಿಸಿ, ಈ ಗ್ರಂಥದ ಬಗ್ಗೆ ಪರಿಚಯ ಭಾಷಣ ಮಾಡಬೇಕೆಂದೇ ನನ್ನ ಪ್ರೋತ್ಸಾಹಿಸಿದ್ದಲ್ಲದೆ, ಈ ಉಪನ್ಯಾಸ ಕಾರ್ಯಕ್ರಮವನ್ನೇರ್ಪಡಿಸಬೇಕೆಂದು ಬಿ.ಎಂ.ಶ್ರೀ ಪ್ರತಿಷ್ಠಾನಕ್ಕೆ ತಿಳಿಸಿ ಎಲ್ಲ ವಿಧದಲ್ಲಿಯೂ ಕಾರಣಕರ್ತರಾದ ಮಾನ್ಯ ಮಿತ್ರರು ಡಾ|| ಜಿ. ಎಸ್. ದೀಕ್ಷಿತರಿಗೆ ನಾನು ಕೃತಜ್ಞನಾಗಿದ್ದೇನೆ. ಅವರಿಗೆ ನನ್ನ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನರ್ಪಿಸುತ್ತೇನೆ. ಡಾ|| ದೀಕ್ಷಿತರ ಸಲಹೆಯನ್ನು ಮನ್ನಿಸಿ ನೀತಿ ವಾಕ್ಯಾಮೃತ—ಅದರ ಕನ್ನಡ ವೃತ್ತಿಯ ಪರಿಚಯ ಭಾಷಣ ಮಾಡಿ ಕೊಡಲು ಅವಕಾಶ ಮಾಡಿಕೊಟ್ಟ ಬಿ.ಎಂ.ಶ್ರೀ. ಪ್ರತಿಷ್ಠಾನದ ನನ್ನ ಮಿತ್ರರಿಗೆ ವಂದನಾಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಆಧಾರ ಗ್ರಂಥಗಳು

1. ಆಚಾರ್ಯ ಶ್ರೀ ಸೋಮದೇವ ವಿರಚಿತಂ ನೀತಿ ವಾಕ್ಯಾಮೃತಂ ಶ್ರೀ ನೇಮಿನಾಥ ವಿರಚಿತ ಕರ್ನಾಟಕ ವ್ಯಾಖ್ಯಾನ ಸಹಿತಂ ಮೂಡಬಿದಿರೆಯ ತಾಳೆಯೋಲೆಯ ಪ್ರತಿಯ ಹಸ್ತಪ್ರತಿ. ಪ್ರತಿ ಮಾಡಿದವರು ಶ್ರೀ ಪಂಡಿತ ದೇವಕುಮಾರಶಾಸ್ತ್ರಿಗಳು (ಈ ಹಸ್ತಪ್ರತಿಯ XeroxCopy ಡಾ|| ಜಿ. ಎಸ್.ದೀಕ್ಷಿತರು ಕಳುಹಿಸಿಕೊಟ್ಟದ್ದು) (ಲೇಖನದಲ್ಲಿ ಕೆಲವೆಡೆ ನೀ. ವಾ. ಎಂದು ಸೂಚಿಸಿದೆ).

2. Kautilyartha sastra Sangraha and the Nithisutras of Brihaspati, Chanakya and Somadeva. Edited by Vidwan N. S. Venkatanathacharya University of Mysore, Oriental Research Institute Publication 1957.

3. History of Indian Literature Vol. III Maurice Winternitz. Published by Motilal Banarsidass. Delhi. 1985.

4. ಕರ್ನಾಟಕ ಕವಿಚರಿತೆ (ಆರ್. ನರಸಿಂಹಾಚಾರ್ಯ ವಿರಚಿತ) ಪ್ರಥಮ ಸಂಪುಟ. ಪರಿಶೋಧಿತ ದ್ವಿತೀಯ ಮುದ್ರಣ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1962.

5. ದುರ್ಗಸಿಂಹ ವಿರಚಿತಂ ಕರ್ಣಾಟಕ ಪಂಚತಂತ್ರಂ

ಸಂಪಾದಕರು : ಎನ್. ಅನಂತರಂಗಾಚಾರ್.

ಪ್ರಕಾಶಕರು : ಶಾರದಾ ಮಂದಿರ ಮೈಸೂರು. 1973

6. Sources of Karnataka History by S. Srikantha Sasty.

7. ಯಶೋಧರ ಚರಿತೆಯ ಸಂಗ್ರಹ—ಕೆ. ವಿ. ರಾಘವಾಚಾರ್.

ಶಾಸನಗಳಲ್ಲಿ ನ್ಯಾಯ ನಿರ್ಣಯದ ವಿಚಾರ

ಜಿ. ಎನ್. ಉಪಾಧ್ಯ

ಶಾಸನಗಳು ಸಾಹಿತ್ಯ, ಸಂಸ್ಕೃತಿ ಹಾಗೂ ಇತಿಹಾಸಗಳ ಅಧ್ಯಯನಕ್ಕೆ ಮಹತ್ವದ ಆಕರಗಳು. ಇತಿಹಾಸದ ಪುನಾರಚನೆಯಲ್ಲಿ ಶಾಸನಗಳಿಗೆ ವಿಶೇಷವಾದ ಮಹತ್ವವಿರುವುದೇನೋ ನಿಜ. ಇಲ್ಲಿ ಇತಿಹಾಸವೆಂದರೆ ಬರೀ ರಾಜ ಮಹಾರಾಜರ, ಸೋಲು ಗೆಲುವಿನ ಅಥವಾ ಅಧಿಕಾರಕ್ಕಾಗಿ ನಡೆದ ಮೇಲಾಟ ಎಂದು ಭಾವಿಸುವುದು ತಪ್ಪಾದೀತು. ಸಂಸ್ಕೃತಿ ಪ್ರಧಾನ ಸಂಶೋಧನೆಗೂ ಶಾಸನಗಳು ಸಹಾಯಕವಾಗಿವೆ. ಮನುಷ್ಯ ಜನಾಂಗ ನಡೆದು ಬಂದ ದಾರಿಯನ್ನು ಗುರುತಿಸಲು, ಅವನ ಸಾಮಾಜಿಕ, ಧಾರ್ಮಿಕ, ರಾಜಕೀಯ ಆರ್ಥಿಕ ಶೈಕ್ಷಣಿಕ ಮೊದಲಾದ ಸಾಧನೆಗಳನ್ನು ಕಂಡು ಕೊಳ್ಳಲು ಶಾಸನಗಳು ನಮಗೆ ಪ್ರಮುಖ ಆಕರಗಳಾಗಿವೆ. ಪ್ರಾಚೀನ ಕಾಲದ ಜನರ ಜೀವನ ವಿಧಾನವನ್ನು ಅರ್ಥ ಮಾಡಿಕೊಳ್ಳಲು ಶಾಸನಗಳಿಂದ ಸಾಧ್ಯವಿದೆ.

ಕರ್ನಾಟಕ ಸಂಸ್ಕೃತಿಯ ಚಿತ್ರವನ್ನು ನಮ್ಮೆದುರಿಗಿಡುವಲ್ಲಿ ಇಲ್ಲಿನ ಶಾಸನಗಳು ಮುಖ್ಯ ಭೂಮಿಕೆಯನ್ನು ವಹಿಸಿವೆ. ಪ್ರಾಚೀನ ಕಾಲದಲ್ಲಿ ಕರ್ನಾಟಕದಲ್ಲಿ ನ್ಯಾಯಾಂಗ ವ್ಯವಸ್ಥೆ ಹೇಗಿತ್ತು? ಎಂಬ ಪ್ರಶ್ನೆಗೆ ಶಾಸನಗಳಲ್ಲಿ ಸ್ಪಷ್ಟವಾದ ಉತ್ತರ ಸಿಗುವುದಿಲ್ಲ. ಆದರೂ ಕೆಲವು ಶಾಸನಗಳಲ್ಲಿ ಅಂದಿನ ನ್ಯಾಯ ವ್ಯವಸ್ಥೆಯ ಬಗೆಗಿನ ಚಿತ್ರಣ ಕಾಣ ಸಿಗುತ್ತದೆ.

ಇಂದಿನಂತೆ ಪ್ರಾಚೀನ, ಮಧ್ಯಕಾಲೀನ ಕರ್ನಾಟಕದಲ್ಲಿಯೂ ನ್ಯಾಯಾಂಗ ವ್ಯವಸ್ಥೆ ವಿಕೇಂದ್ರೀಕರಣಗೊಂಡಿತ್ತು. ತಂಟೆ ತಕರಾರುಗಳನ್ನು ಬೇರೆ ಬೇರೆ ಸ್ತರಗಳಲ್ಲಿ ಪರಿಹರಿಸಲಾಗುತ್ತಿತ್ತು. ಚಕ್ರವರ್ತಿ ಅಥವಾ ರಾಜ, ರಾಜ್ಯದ ಸರ್ವೋಚ್ಚ ನ್ಯಾಯಾಧೀಶನಾಗಿದ್ದ. ಸಣ್ಣ ಪುಟ್ಟ ವ್ಯಾಜ್ಯಗಳನ್ನು ಗ್ರಾಮಾಧಿಕಾರಿಯೇ ಪರಿಹರಿಸುತ್ತಿದ್ದ. ಕೆಳ ಹಂತದಲ್ಲಿ ನಿರ್ಣಯ ತೆಗೆದುಕೊಳ್ಳಲಾಗದಂತಹ ವಿಷಯಗಳು ರಾಜನಲ್ಲಿಗೆ ಕೊಂಡೊಯ್ಯಲಾಗುತ್ತಿತ್ತು. ರಾಜನಾದವನು ಮಂತ್ರಿಗಳೊಂದಿಗೆ ಸಮಾಲೋಚಿಸಿ ತೀರ್ಪುಗಳನ್ನು ನೀಡುತ್ತಿದ್ದನೆಂಬ ಅಂಶ ಪ್ರಾಚೀನ ಕಾವ್ಯಗಳಿಂದ ವೇದ್ಯವಾಗುತ್ತದೆ. ಕೆಲವೊಮ್ಮೆ ರಾಜ್ಯಪಾಲರು ಹಾಗೂ ಅಮಾತ್ಯರು ಕೂಡಾ ನ್ಯಾಯ ವಿಚಾರಣೆ ನಡೆಸುತ್ತಿದ್ದರು. ಅಪರಾಧಗಳಿಗೆ ಕಠಿಣವಾದ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ಎಲ್ಲ ನಮೂನೆಯ ಕಲಹಗಳನ್ನು ಪರಿಶೀಲಿಸಿ ತೀರ್ಪು ನೀಡಲಾಗುತ್ತಿತ್ತು.

ವಿಜಯನಗರದ ಅರಸ ಬುಕ್ಕರಾಯನ ಒಂದು ಶಾಸನದಲ್ಲಿ[1] ಧಾರ್ಮಿಕ ಕಲಹದ ಪ್ರಸ್ತಾವ ಬಂದಿದೆ. ದೊರೆ, ಎರಡೂ ಧರ್ಮದ ಪ್ರಮುಖರನ್ನು ಕರೆಯಿಸಿ ರಾಜಿ ಮಾಡಿಸಿದ ವಿಚಾರ ಇತಿಹಾಸ ಪ್ರಸಿದ್ಧವಾಗಿದೆ. "ಶ್ರೀ ವೀರ ಬುಕ್ಕರಾಯನು ಪೃಥ್ವೀ ರಾಜ್ಯವ ಮಾಡುವ ಕಾಲದಲ್ಲಿ ಜೈನರಿಗೂ ಭಕ್ತರಿಗೂ ಸಂವಾಜವಾದಲ್ಲಿ ಆನೆಯಗೊಂದಿ ಹೊಸಪಟ್ಟಣ ಪೆನುಗುಂಡೆ ಕಲ್ಲೆಹದ ಪಟ್ಟಣವೊಳಗಾದ ಸಮಸ್ತ ನಾಡ ಭವ್ಯ ಜನಂಗಳು ಆ ಬುಕ್ಕರಾಯಂಗೆ ಭಕ್ತರು ಮಾಡುವ ಅಂನ್ಯಾಯಂಗಳನೂ ಬಿಂನಹಂ ಮಾಡಲಾಗಿ ಹದಿನೆಂಟುನಾಡ ಶ್ರೀ ವೈಷ್ಣವರ ಕೈಯ್ಯಲು ಮಹಾರಾಯನು ವೈಷ್ಣವ ದರ್ಶನಕ್ಕೆಉೂ ಜೈನದರ್ಶನಕ್ಕೆಉೂ ಭೇದವಿಲ್ಲವೆಂದು ರಾಯನು ವೈಷ್ಣವರ ಕೈಯ್ಯಲು ಜೈನರ ಕೈವಿಡಿದುಕೊಟ್ಟು........ವೈಷ್ಣವರೂ ಜೈನರೂ ವೊಂದು ಭೇದ ಮಾಗಿ ಕಾಣಲಾಗದು"—ಎಂದು ತೀರ್ಪು ನೀಡಿ, ವೈಷ್ಣವ ಹಾಗೂ ಜೈನ ಧರ್ಮದ ಅನುಯಾಯಿಗಳ ಮಧ್ಯೆ ರಾಜೀ ಮಾಡಿಸಿದ ಅಂಶವಿಲ್ಲಿ ದಾಖಲಾಗಿದೆ. ಬೇರೆ ಬೇರೆ ಧರ್ಮಗಳ ನಡುವೆ ಕಲಹವಾದಾಗಲೂ ರಾಜ್ಯದ ರಾಜ ಮಧ್ಯ ಪ್ರವೇಶಿಸಿ, ಸಂಧಾನ ಮಾಡಿಸುತ್ತಿದ್ದನೆಂಬುದಕ್ಕೆ ಈ ಶಾಸನ ಸಾಕ್ಷಿಯಾಗಿದೆ. ಇದೇ ಪರಂಪರೆಯನ್ನು ವಿಜಯನಗರದ ಮುಂದಿನ ಅರಸರು ಚಾಚು ತಪ್ಪದೇ ಅನುಸರಿಸಿದರು.

ಉಡುಪಿ ತಾಲೂಕಿನ ಎರಡು ಶಾಸನಗಳು[2] ನ್ಯಾಯ ನಿರ್ಣಯದ ವಿಚಾರವನ್ನು ಹೊತ್ತು ನಿಂತಿವೆ. ಕ್ರಿ.ಶ. 1430ರ ಬಾರಕೂರು ಶಾಸನ (ತುಳು ನಾಡಿನ ಶಾಸನಗಳು ನಂ. 65) ಹಾಗೂ ಕ್ರಿ.ಶ. 1499ರ ಕಾಪು ಶಾಸನ (ಅದೇ ನಂ. 83)ದಲ್ಲಿ ಸಾರ್ವಜನಿಕರಲ್ಲಿ ಉಂಟಾದ ಮನಸ್ತಾಪದ ವಿಚಾರ ಹಾಗೂ ಅದನ್ನು ನಿವಾರಣೆ ಮಾಡಿದ ರೀತಿಯೂ ದಾಖಲಾಗಿದೆ. ಕ್ರಿ.ಶ. 1430ರ ಬಾರಕೂರು ಶಾಸನ ವಿಜಯನಗರದ ಸುಪ್ರಸಿದ್ಧ ದೊರೆಗಳಲ್ಲಿ ಒಬ್ಬನಾದ ಎರಡನೆಯ ದೇವರಾಯನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಕ್ರಿ.ಶ. 1499ರ ಕಾಪು ಶಾಸನದಲ್ಲಿ ಯಾವ ರಾಜವಂಶದ ಕಾಲದಲ್ಲಿ ಹುಟ್ಟಿಕೊಂಡ ಶಾಸನವೆಂಬುದು ಸ್ಪಷ್ಟವಾಗುತ್ತದೆ.

ಕ್ರಿ.ಶ. 1430ರ ಬಾರಕೂರು ಶಾಸನ ತುಸು ಸುದೀರ್ಘವಾಗಿದೆ. ಆಗ ವಿಜಯನಗರದ ಅರಸ ಎರಡನೆಯ ದೇವರಾಯ ರಾಜ್ಯಭಾರ ಮಾಡುತ್ತಿದ್ದ. "ಶ್ರೀ

---

1. ಕ್ರಿ.ಶ. 1368ರ ಶ್ರವಣಬೆಳಗೊಳ ಶಾಸನ. ನೋಡಿ ಎ. ಎಂ. ಅಣ್ಣೀಗೇರಿ ಆರ್. ಶೇಷಶಾಸ್ತ್ರಿ (ಸಂ) ಶಾಸನ ಸಂಗ್ರಹ. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. 1975 ಶಾಸನ ಸಂಖ್ಯೆ 19.

2. ಕೆ. ವಿ. ರಮೇಶ, ತುಳುನಾಡಿನ ಶಾಸನಗಳು ಸಂಪುಟ. 1. ಗೀತಾಬುಕ್ ಹೌಸ್ ಮೈಸೂರು. 1978 ಶಾಸನ ಸಂಖ್ಯೆ 65 ಹಾಗೂ 83.

ಮನ್ಮಹಾ ರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ದೇವರಾಯ ಮಹಾ ರಾಯರೂ ವಿಜೆಯಾನಗರಿಯ ಸಿಂಹಾಸನದಲಿರ್ದು ದುಷ್ಟ ನಿಗ್ರಹ ಶಿಷ್ಯ ಪ್ರತಿಪಾಲನೆ" ಮಾಡುತ್ತಿದ್ದ ಉಲ್ಲೇಖ ಶಾಸನದ ಆರಂಭದಲ್ಲೇ ಬಂದಿದೆ. ಆ ಸಂದರ್ಭದಲ್ಲಿ ಎರಡನೆಯ ದೇವರಾಯನ ಮಹಾ ಪ್ರಧಾನ ಚಂಡರಸ ಒಡೆಯನೆಂಬವನು ಬಾರಕೂರ ತುಳು ರಾಜ್ಯವನ್ನು ಆಳುತ್ತಿದ್ದ. ಇದೇ ಕಾಲದಲ್ಲಿ ಬಾರಕೂರಿನ ಹತ್ತುಕೇರಿಯೊಳ ಗಣ ಮೂರು ಕೇರಿ ಮತ್ತು ಚೌಳಿಕೇರಿಯ ಜನರ ನಡುವೆ ದಿನಸಿ ಮಾರಾಟದ ವಿಚಾರ ದಲ್ಲಿ ವಿವಾದವಾಗಿ ಆ ಎರಡು ಕೇರಿಯ ಜನರಲ್ಲಿ ದ್ವೇಷ, ವೈಷಮ್ಯ ಬೆಳೆದಿತ್ತು. "ಚೌಳಿಕೇರಿ ಮೂರು ಕೇರಿಗೂ ಸಖರೆಯ ಬೆವಹಾರದಿಂದ ಸಂವಾಜವಾಗಿ ನಂಮ್ಮ ಎರಡು ಕೇರಿಯವರೂ ಕಾಟ ಕಟ್ಟಿ ಬೆವಹಾರಲು ಕೆಟ್ಟು ಇದ್ದಲ್ಲಿ" ಎಂದಿದೆ. ಈ ಎರಡೂ ಕೇರಿಯ ಜನರಲ್ಲಿ ಭಾರಿ ಮನಸ್ತಾಪವಾಗಿ ವ್ಯಾಪಾರ ವಹಿವಾಟು ಹದ ಗೆಟ್ಟಿತ್ತು. ಆದ ಕಾರಣ ಎರಡನೆಯ ದೇವರಾಯನ ಆಜ್ಞೆಯಂತೆ ಮಹಾ ಪ್ರಧಾನ ಚಂಡರಸ ಒಡೆಯರು ಎರಡೂ ಪಂಗಡದ ಪ್ರಮುಖರನ್ನು ಕರೆಯಿಸುತ್ತಾನೆ. ಅಲ್ಲದೆ. "ಎರಡೂ ಕೇರಿಯನೂ ಚಂಡರಸ ವೊಡೆಯರೂ ಕರಸಿ ಸಂವಾಜವನೂ ತಿರ್ದ್ದಿ ಬುಧಿ ಯನ್ನು ಹೇಳಿ ಒಡಂಬಡಿಸಿ ಸಂತಯಿಸಿದ"—ಅಂತ ಈ ಶಾಸನದಲ್ಲಿ ಬಂದಿದೆ. ಚಂಡ ರಸ ಎರಡೂ ಕೇರಿಯವರಿಗೂ ಬುದ್ಧಿ ಹೇಳಿ ಅವರ ನಡುವೆ ಇದ್ದ ದ್ವೇಷ ಅಸೂಯೆಗೆ ತಡೆ ಹಾಕಿ ರಾಜೀ ಮಾಡಿಸುತ್ತಾನೆ. ಅಲ್ಲದೆ, ಯಾರು ಎಲ್ಲಿ ಹೇಗೆ ವ್ಯಾಪಾರ ವಹಿ ವಾಟು ಮಾಡಬೇಕೆಂಬುದನ್ನು ಸ್ಪಷ್ಟ ಪಡಿಸುತ್ತಾನೆ.

"ಬೆವಹಾರವು ನಮ್ಮ ಎರಡು ಕೇರಿಗೆ ಸರಿಯಾಗಿ ಸಲುವುದು, ಪೂರ್ವ ಮರಿ ಯ್ಯಾದೆಯಲು ಚೌಳಿಕೇರಿ ಮೂರು ಕೇರಿಗೆ ನೀಸು ವಡ್ಡಿಯಲು ಕೊಂಡು ಬಹ ಎಳುವಿ ಧಳ ಧಾನ್ಯದ ಬೆವಹಾರವನೂ ಸರಿಯಾಗಿ ಆಡುವೆವು"—ಎಂದು ಎರಡೂ ಕೇರಿಯ ವರು ಒಪ್ಪಿಕೊಳ್ಳುತ್ತಾರಲ್ಲದೆ, "ನಮ್ಮ ಎರಡು ಕೇರಿಯಲೂ ನಂಮೊಳಗೆ ನಾವು ಸಂವಾಜ ಹುಟಿದರೆ ಸಮಯ ಸಂಕೇತದ ಮೇಲೆ ಆಡಿ ಮಾಡಿ ಕೊಂಬೆವು ಕೈದುವ ಹಿಡಿದು ಕಾದ ಸಲ್ಲದು ನಮ್ಮ ಎರಡು ಕೇರಿಯವರೂ ಆಡುವಂಥಾ ಬೆವಹಾರವನೂ ನಂಮ್ಮೊಳಗೆ ನಾವು ವಂಚನೆಯಿಲ್ಲದೆ ವ್ರೊತ್ತ್ರಂ ಬಲ್ಲವ ಮಾಡದೆ ಸರಿಯಾಗಿ ಬೆವಹಾರ ವನೂ ಆಡುವೆವು"—ಎಂಬ ನಿರ್ಣಯಕ್ಕೂ ಬರುತ್ತಾರೆ. ನಮ್ಮ ಮಧ್ಯೆ ಏನಾದರೂ ಜಗಳ, ವಾದ ವಿವಾದವಾದರೆ, ಅದನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತೇವೆಯೋ ಹೊರತು ಆಯುಧಗಳನ್ನು ಹಿಡಿದು ಹೋರಾಡುವುದಿಲ್ಲ ಎಂಬ ನಿಲುವಿಗೂ ಬರು ತ್ತಾರೆ. ಸಿಟ್ಟಿನ ಭರದಲ್ಲಿ ಇಬ್ಬರು ತಂತಮ್ಮೊಳಗೆ ಮಾರಕಾಸ್ತ್ರಗಳಿಂದ ಹೊಡೆ ದಾಡಿದರೆ..... ; ಅಂಥ ಘಟನೆ ಮತ್ತೆ ಜರುಗಬಾರದೆಂಬ ಮುನ್ನೆಚ್ಚರಿಕೆಯೂ ಈ ಶಾಸನದಲ್ಲಿ ಕಂಡುಬರುವುದನ್ನು ಕಾಣಬಹುದು. ಅದ್ದರಿಂದ ಎರಡೂ ಕೇರಿಯವರು

ಶಾಂತಿ ಸಮಾಧಾನದಿಂದ ಹೇಗೆ ನಡೆದುಕೊಳ್ಳಬೇಕು ಎಂಬ ಸೂಚನೆಯೂ ಆಜ್ಞೆಯ ರೂಪದಲ್ಲಿ ಈ ಶಾಸನದಲ್ಲಿ ಬಂದಿದೆ.

ಒಂದು ವೇಳೆ ಈ ಶಾಸನದ ಷರತ್ತುಗಳನ್ನು ಮೀರಿ ನಡೆದದ್ದೇ ಆದರೆ ಅಥವಾ ಹಿಂಸೆಯಲ್ಲಿ ಮತ್ತೆ ತೊಡಗಿದರೆ ಅಂಥವರು ಯಾವ ಶಿಕ್ಷೆಯನ್ನು ಎದುರಿಸಬೇಕಾಗುತ್ತದೆ ಎಂಬ ವಿಷಯವೂ ಇಲ್ಲಿ ದಾಖಲಾಗಿದೆ ಬ್ರಾಹ್ಮಣರನ್ನು, ಗೋವುಗಳನ್ನು, ದೇವಾಲಯಗಳನ್ನು ನಾಶ ಮಾಡಿದ ಪಾಪಕ್ಕೆ ಗುರಿಯಾಗ ಬೇಕಾದೀತು ಎಂದು ಎಚ್ಚರಿಸಲಾಗಿದೆ. ಅಲ್ಲದೇ ಈ ಒಪ್ಪಂದವನ್ನು ಯಾರಾದರೂ ಮೀರಿ ನಡೆದರೆ ಅವರು "ಅರಮನೆಗೆ ತಪ್ಪು ವರಹ ಹನ್ನೆರಡು ಸಾವಿರ ಹೊನ್ನನ್ನು" ತೆರಬೇಕಾಗುತ್ತದೆ ಎಂಬ ಉಗ್ರ ಶಿಕ್ಷೆಯನ್ನು ಹೇಳಲಾಗಿದೆ. ಈ ಬರೆದ ಕಟಳೆಗೆ ಸಿಂದು ಬಾಳುವೆವು"—ಎಂದು ಎರಡೂ ಕೇರಿಯ ಹಿರಿಯರು ನಿರ್ಣಯಕ್ಕೆ ಸಮ್ಮತಿ ವ್ಯಕ್ತಪಡಿಸಿದ ವಿಷಯವಿಲ್ಲಿ ದಾಖಲಾಗಿದೆ. ಎರಡೂ ಪಕ್ಷದವರೂ ಈ ಶಾಸನದ ಎಲ್ಲ ಕರಾರುಗಳಿಗೆ ಬದ್ಧರಾಗಿ ವ್ಯಾಪಾರ ವಹಿವಾಟು ನಡೆಸುವುದಾಗಿ ವಾಗ್ದಾನ ಮಾಡುತ್ತಾರೆ.

ಹೀಗೆ ಜನ ಸಾಮಾನ್ಯರಲ್ಲಿ ; ವ್ಯಾಪಾರಿ ವರ್ಗದಲ್ಲಿ ಮನಸ್ತಾಪವಾದಾಗ ಅದನ್ನು ಪರಿಹರಿಸುವ ಕೆಲಸವನ್ನು ಸ್ಥಳೀಯ ಅಧಿಕಾರಿಗಳ ಸಹಾಯದಿಂದ ರಾಜನಾದವನು ಮಾಡುತ್ತಿದ್ದನೆಂಬುದಕ್ಕೆ ಈ ಶಾಸನ ಉತ್ತಮ ಉದಾಹರಣೆಯಾಗಿದೆ. ಇಂಥ ವೈಷಮ್ಯ, ಮನಸ್ತಾಪ ಮತ್ತೆ ಮತ್ತೆ ತಲೆದೋರಬಾರದೆಂಬ ದೂರಾಲೋಚನೆಯಿಂದ ನಡೆದ ಒಪ್ಪಂದವನ್ನು ಶಾಸನ ರೂಪದಲ್ಲಿ ಬರೆಯಿಸಿ ಊರ ದೇವಾಲಯದಲ್ಲಿ ನಿಲ್ಲಿಸುತ್ತಿದ್ದರು. ಒಂದು ವೇಳೆ ಜನ ಶಾಪಾಶಯವನ್ನು ಮೀರಿದರೂ ಇಲ್ಲಿ ವಿಧಿಸಿರುವ ಬೃಹತ್ ಮೊತ್ತದ ದಂಡವನ್ನು ನೋಡಿ ಗಾಬರಿಯಾಗಿ ತಮ್ಮ ಪಾಡಿಗೆ ತಾವಿರುತ್ತಿದ್ದರು. ಉಗ್ರವಾದ ಶಿಕ್ಷೆಯ ಹೆದರಿಕೆಯೂ ಜನರು ಕಾನೂನನ್ನು ಉಲ್ಲಂಘಿಸದಂತೆ ತಡೆಯುತ್ತಿತ್ತು ಎಂಬುದಕ್ಕೂ ಈ ಶಾಸನ ಸಾಕ್ಷಿಯಾಗಿದೆ. ಒಪ್ಪಂದದ ಅಥವಾ ರಾಜಿಯಾಗುವುದರ ಮುಖಾಂತರ ಅಂದು ಕಟ್ಲೆ ನಿರ್ಣಯವಾಗುತಿದ್ದಿತ್ತು. ಹೆಚ್ಚಾಗಿ ಈ ತೀರ್ಪು ರಾಜಾಜ್ಞೆಯೂ ಆಗಿರುತ್ತಿತ್ತು.

ಕ್ರಿ.ಶ. 1499ರ ಕಾಪು ಶಾಸನದ ಸಾರವೂ ನ್ಯಾಯ ನಿರ್ಣಯದ ಕುರಿತಾಗಿದೆ. ಇದರಲ್ಲಿ ಯಾವುದೇ ದೊರೆಯ ಹೆಸರಿಲ್ಲ. ಇದು ವಿಜಯನಗರದ ಅರಸರ ಕಾಲದ ಶಾಸನವಾಗಿಯೇ ಕಾಣುತ್ತದೆ. ಶಂಕರಾದಿಯರಾದ ಕುಂದ ಹೆಗ್ಗಡೆ ಮತ್ತು ಅವರ ಅನುಯಾಯಿಗಳು ಹಾಗೂ ತಿರುಮಲೆ ಅರಸರಾದ ಮದ್ದ ಹೆಗ್ಗಡೆ ಮತ್ತು ಅವರ ಅನುಯಾಯಿಗಳ ನಡುವೆ ಮಾಡಕೊಂಡ ಒಪ್ಪಂದದ ವಿವರಗಳು ಈ ಶಾಸನದಲ್ಲಿ ದಾಖಲಾಗಿದೆ. ಈ ಒಪ್ಪಂದದ ಪ್ರಕಾರ ಎರಡೂ ಮನೆತನದವರು "ನಂಮ ಅನುಸರರನು

ಜಯಿಸಿ ಕೊಡುವೆವು ನಂಮೊಳಗೆ ವೊಬ್ಬರ ಯಿದಿರಿಗೆ ವೊಬ್ಬರು ಪಥ(ರಿ)ಂದ ಸಲ್ಲದು ನಿಂಮಯಿದಿರಿಗೆ ಬಹ ಅನುಸರಿಗಳಿಗೆ ನೆರನ ಕೊಡ ಸಲ್ಲದು ವೊಬ್ಬರ ಬಿಟ್ಟು ವೊಬ್ಬರು ನಿಲ್ಲಸಲ್ಲದು ನಂ (ಮಯಿರು) ವರ ಕೂಡೆ ಮೋಹರ್ಸಿ ಬಹಂಥಾ ವರ (ಭ)ಂಡೆ ಬುದ್ಧಿಯಿಂದ ವಧಿಸಿದ ಯಿದಿರಾದ ಅನುಸರಿಗಳನೂ ಬುಯಸಿ ಕೊಂಬೆವು" ಎಂಬ ನಿರ್ಧಾರಕ್ಕೆ ಬರುತ್ತಾರೆ. ನಮ್ಮ ನಮ್ಮಲ್ಲಿ ಎಂದಿಗೂ ಕಾದಾಟಕ್ಕೆ ಇಳಿಯುವುದಿಲ್ಲ. ಮೂರನೆಯವರು ದಂಡೆತ್ತಿ ಬಂದಾಗ ಎಲ್ಲರೂ ಒಗ್ಗಟ್ಟಿನಿಂದ ಒಂದಾಗಿ ಹೋರಾಟ ಮಾಡಬೇಕು ; ವೈರಿಗಳನ್ನು ಸದೆ ಬಡಿಯಬೇಕೇ ವಿನಾ ಇಂಥ ಸಂದರ್ಭದಲ್ಲಿ ಪಿತೂರಿ ಕಾರ್ಯ ನಡೆಯದಂತೆ ವರ್ತಿಸಬೇಕೆಂಬ ತೀರ್ಮಾನಕ್ಕೂ ಬರುತ್ತಾರೆ. ಅಲ್ಲದೇ "ನಂಮಯಿಬ್ಬರೊಳಗೆ ಮನಸ್ತಾಪಗಳು ಬಂದರೆ ಬುದ್ಧಿಯಿಂದಲೇ ಪರಿಹರ್ಸಿ ಕೊಳ್ಳಬೇಕಲ್ಲದೆ ತುಡುಕಿ ಕಾದಿ ಸಲ್ಲದು"—ಎಂಬ ನಿಲುವಿಗೂ ಬರುತ್ತಾರೆ. ಈ ಎರಡು ಮನೆತನದವರು ಹಿಂದೆ ಪರಸ್ಪರ ಕಾದಾಟಕ್ಕಿಳಿದು ಹಿಂಸಾಕೃತ್ಯ ಜರುಗಿರಬೇಕು. ಇದೇ ಸಂದರ್ಭದಲ್ಲಿ ಮೂರನೆಯವರು ದಾಳಿ ಮಾಡಿದಾಗ ಈ ಎರಡು ಪಂಗಡಗಳಲ್ಲಿ ಒಂದು ಪಂಗಡದವರು ದಾಳಿ ಮಾಡಿದ ಅರಸರ ಪರವಾಗಿ ನಿಂತು ಮತ್ತೊಂದು ಪಂಗಡವನ್ನು ಸದೆಬಡಿದಿರುವ ಸಾಧ್ಯತೆಯನ್ನು ಈ ಶಾಸನ ಹೇಳುತ್ತದೆ. ಆದ್ದರಿಂದ ಈಗ ಎಚ್ಚೆತ್ತುಕೊಂಡಿರುವ ಅವರು ಅಂಥ ಮನಸ್ತಾಪವಾದರೆ ಕಾದಾಡದೆ ಎಲ್ಲವನ್ನೂ ಮಾತುಕತೆಯ ಮೂಲಕ ಪರಿಹರಿಸಿಕೊಳ್ಳುವ ತೀರ್ಮಾನಕ್ಕೆ ಬಂದಂತಿದೆ. ಎರಡೂ ಮನೆತನದವರು ಸೇರಿ "ಈ ಶಿಲಾ ಶಾಸನದ ಆಡಕಕೆ ತಪ್ಪುವವರಲ್ಲ" ಎಂಬ ನಿಲುವಿಗೆ ಬರುತ್ತಾರೆ. ಈ ಒಪ್ಪಂದ ಶಾಸನಕ್ಕೆ ಪಾಂಡ್ಯ ದೇವರಸ ಒಡೆಯರು ಒಪ್ಪಿಗೆ ಸೂಚಿಸಿದ ಸಂಕೇತವೂ ಇಲ್ಲಿ ಬಂದಿದೆ. ಪಾಂಡ್ಯ ದೇವರಸ ಸ್ಥಳೀಯ ಅಧಿಕಾರಿಯಾಗಿರಬೇಕು. ರಾಜನ ಆಜ್ಞೆಯನ್ನು ಈ ಎರಡು ಮನೆತನದವರಿಗೆ ನಿವೇದಿಸಿ ಅವರಲ್ಲಿ ಒಪ್ಪಂದ ಏರ್ಪಡುವಂತೆ ಮಾಡುವಲ್ಲಿ ಇವನು ಪ್ರಮುಖ ಪಾತ್ರ ವಹಿಸಿದ್ದು ಇಲ್ಲಿ ಗೊತ್ತಾಗುತ್ತದೆ. ಈ ಒಪ್ಪಂದವನ್ನು ಮುರಿದರೆ ಅಂತವರಿಗೆ ಸದ್ಗತಿ ದೊರೆಯದು ಎಂಬ ಶಾಪಾಶಯವೂ ಕೊನೆಯಲ್ಲಿ ಬಂದಿದೆ. 'ಈ ಶಾಸನವನ್ನು ಮೀರಿದರೆ ಇಂತಿಷ್ಟು ತಪ್ಪು ದಂಡವನ್ನು ಕಟ್ಟಬೇಕು' ಎಂಬ ವಿಚಾರ ಈ ಶಾಸನದಲ್ಲಿ ಬಂದಿಲ್ಲ ಮನಸ್ತಾಪವಾದ ಎರಡೂ ಮನೆತನಗಳನ್ನು ಒಂದುಗೂಡಿಸುವುದು, ಆ ಮೂಲಕ ರಾಜ್ಯದ ಏಕತೆಯನ್ನು ಬಲಗೊಳಿಸುವುದು ಈ ಶಾಸನದ ಹಿಂದಿರುವ ಆಶಯವಾಗಿ ತೋರುತ್ತದೆ.

ಈ ಎರಡೂ ಶಾಸನಗಳನ್ನು ಪರಿಶೀಲಿಸಿದ ಅನಂತರ ಅಂದಿನ ನ್ಯಾಯಾಂಗ ವ್ಯವಸ್ಥೆಯ ಕುರಿತಾಗಿ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ.

1. ರಾಜನೇ ಸರ್ವೋಚ್ಚ ನ್ಯಾಯಾಧೀಶನಾಗಿದ್ದ. ಈ ನ್ಯಾಯ ನಿರ್ಣಯ ಕಾರ್ಯದಲ್ಲಿ ಅವನ ಕೈ ಕೆಳಗಿನ ಅಧಿಕಾರಿಗಳೂ ಪಾಲ್ಗೊಳ್ಳುತ್ತಿದ್ದರು. ಸ್ಥಳೀಯ

ಅಧಿಕಾರಿಗಳು ಇಂಥ ಒಪ್ಪಂದದ ಸಂದರ್ಭದಲ್ಲಿ ವಿಶೇಷ ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದ್ದರು.

2. ರಾಜ್ಯದಲ್ಲಿ ಸುಖ, ಶಾಂತಿ, ನೆಮ್ಮದಿ ನೆಲಸಿದ್ದರೆ, ಆಡಳಿತ ಯಂತ್ರ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತದೆ ಎಂಬ ಅಂಶ ರಾಜರಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಸಮಾಜದಲ್ಲಿ, ರಾಜ್ಯದಲ್ಲಿ ವರ್ಗಕಲಹ, ಅಂತಃಕಲಹಗಳು ತಲೆ ಎತ್ತದಂತೆ ನೋಡಿಕೊಳ್ಳಲಾಗುತ್ತಿತ್ತು. ರಾಜ್ಯದೊಳಗೆ ಅಂತಃಕಲಹವೆದ್ದರೆ ನೆರೆಹೊರೆಯವರು ದಾಳಿ ಮಾಡುವ ಸಾಧ್ಯತೆಯೂ ಅಂದು ಹೆಚ್ಚಿದ್ದಿತ್ತು. ಬಾಹ್ಯ ಶಕ್ತಿಗಳು ರಾಜ್ಯದ ಮೇಲೆ ದಾಳಿ ಮಾಡಿದಾಗ ಎಲ್ಲರೂ ಒಟ್ಟಾಗಿ ಎದುರಿಸಿದರೆ, ವಿಜಯ ಸುಲಭ ಸಾಧ್ಯ ಎಂಬ ವಿಚಾರವೂ ಅಧಿಕಾರದ ಚುಕ್ಕಾಣಿ ಹಿಡಿದವರಿಗೆ ತಿಳಿದ ಅಂಶ. ಆದ್ದರಿಂದ ಸಮಾಜದಲ್ಲಿ, ತನ್ನ ಕೈಕೆಳಗಿನ ಅಧಿಕಾರಿ ವರ್ಗದಲ್ಲಿ ಇಂಥ ಅಪ್ರಿಯ ಘಟನೆಗಳು ನಡೆಯದಂತೆ ರಾಜನಾದವನು ನೋಡಿಕೊಳ್ಳುತ್ತಿದ್ದ. ಏನಾದರೂ ಮನಸ್ತಾಪವಾದಾಗ ತತ್‌ಕ್ಷಣ ರಾಜನಾದವನು ಅಥವಾ ಅವನ ಅಧಿಕಾರಿಗಳು ಮಧ್ಯ ಪ್ರವೇಶಿಸಿ ಎದುರಾದ ಸಂಕಟವನ್ನು ಬಗೆಹರಿಸುತ್ತಿದ್ದರು.

3) ನ್ಯಾಯ ತಡವಾಗಿ ದೊರಕಿದರೆ ಆದರಿಂದ ನಾನಾ ರೀತಿಯ ಅನಾಹುತವಾಗುತ್ತದೆ ಎಂಬ ಅರಿವೂ ರಾಜನಿಗಿತ್ತು. ಆದ್ದರಿಂದ ಶೀಘ್ರ ನ್ಯಾಯ ತೀರ್ಮಾನಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿತ್ತು.

4) ಶಾಸನಗಳು, ರಾಜಾಜ್ಞೆಗಳೂ ಆಗಿದ್ದವು. ಜನತೆ ನಡೆದುಕೊಳ್ಳಬೇಕಾದ ರೀತಿ ನೀತಿಯನ್ನು ಶಾಸನಗಳಲ್ಲಿ ಬರೆಸಿ ದೇವಾಲಯದಲ್ಲೋ ಊರಿನ ಪ್ರಮುಖ ಪ್ರದೇಶದಲ್ಲೋ ಇರಿಸಲಾಗುತ್ತಿತ್ತು. ಜನ ಅದನ್ನು ಮೀರುವಂತಿರಲಿಲ್ಲ. ಒಂದು ವೇಳೆ ಮೀರಿ ನಡೆದದ್ದಾದರೆ ಅವನು ಪಾಪಕ್ಕೆ ಗುರಿಯಾಗುತ್ತಾನೆ ಎಂಬ ಅಂಶದ ಜೊತೆಗೆ ಕಠಿಣವಾದ ಶಿಕ್ಷೆ ಅಥವಾ ದಂಡವನ್ನು ಸಹ ಹಾಕಲಾಗುತ್ತಿತ್ತು.

5) ವ್ಯಾಪಾರಿ ವರ್ಗದಲ್ಲಿ ಅಂದು ಸಾಕಷ್ಟು ಪೈಪೋಟಿ ನಡೆಯುತ್ತಿತ್ತು. ಅವರಲ್ಲಿ ಸಾಕಷ್ಟು ಮನಸ್ತಾಪವೂ ಆಗುತಿತ್ತು. ಇಂಥ ಸೂಕ್ಷ್ಮ ಸಂದರ್ಭದಲ್ಲಿ ಆಡಳಿತ ಯಂತ್ರ ಮಧ್ಯ ಪ್ರವೇಶಿಸಿ ಮತ್ತೆ ಹಿಂಸಾಕೃತ್ಯ ವೈಷಮ್ಯ ಚಿಗುರದಂತೆ, ಒಪ್ಪಂದ ಮಾಡಿ ಮನಸ್ತಾಪವನ್ನು ಬಗೆಹರಿಸಿ ನೆಮ್ಮದಿಯ ಬದುಕಿಗೆ ಅನುವು ಮಾಡಿ ಕೊಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಈ ಎರಡು ಶಾಸನಗಳು ವಿಜಯನಗರದ ಅರಸರ ದಕ್ಷ ಆಡಳಿತಕ್ಕೂ ಹಾಗೂ ಅಂದಿನ ನ್ಯಾಯಾಡಳಿತ ಕ್ರಮಕ್ಕೂ ಕನ್ನಡಿ ಹಿಡಿಯುತ್ತವೆ.

ಶ್ರೀ ಗುರು ಸಿದ್ಧರಾಮೇಶ್ವರರು

—ಹೀ. ಚಿ. ಶಾಂತವೀರಯ್ಯ, ಎಂ.ಎ., ಬಿ.ಇಡಿ.

ದೇವರು ಕಾಮನ ಕೊಂದನೆಂಬರು ದೇವಂಗಿಬ್ಬರು ಹೆಂಡಿರುಂಟು ದೇವರು ಕಾಮನ ಕೊಂದುದಿಲ್ಲ ಕಾಮನ ಕೊಂದವರು ಕಾಮ ವೈರಿಗಳು ಮೂವರಿದ್ದಾರೆ ಕೂಡಲ ಸಂಗಯ್ಯನಲ್ಲಿ ಶುಕ ಸೊನ್ನಲಿಗೆ ಸಿದ್ಧರಾಮ ಹನುಮಂತ[1] ಎಂದು ಬಸವಣ್ಣನವರು ಅಪ್ಪಣೆ ಕೊಡಿಸಿದ್ದಾರೆ.

ಶ್ರೀ ಗುರು ಸಿದ್ಧರಾಮೇಶ್ವರರು ಕಾಮ ಕೋಲಾಹಲರೂ ಮಾಯಾತೀತರೂ ಆಗಿದ್ದರೆಂದು ಮಹಾಕವಿ ರಾಘವಾಂಕ ಕೂಡ ತಾನು ರಚಿಸಿರುವ 'ಶ್ರೀ ಸಿದ್ಧರಾಮ ಚಾರಿತ್ರ'ದಲ್ಲಿ "ಹಸಿಯದ ಉಣ್ಣದ ಬೆಮರದ ಎವೆಯಿಕ್ಕದ ಆಗುಳಿಸದ ಉಸಿರಿಕ್ಕದ ಅನುಗೆಡದ ವಿಣ್ ಮೂತ್ರಮಂ ವಿಸರ್ಜಿಸದ ಕಾಮಿಸದ ಕೋಪಿಸದ ಕರ್ಮದ್ವಯಂ ರೂಪಿಸದ ನಿರ್ಮಾಯನು ನೊಸಲಕಣ್ ಸಿಜಮುಕುಟ ಸಹಜ ಕುಂಡಲವೆಸೆವ ರಸೆಯ ಶಂಕರನೆನಿಪ ಗುರು ಸಿದ್ಧರಾಮಯ್ಯಂ[2] ಎಂದು ತಿಳಿಸಿದ್ದಾರೆ. ದೇವತೆಯ ಲಕ್ಷಣಗಳಿವು.

ಶರಣ ತಿಂತಿಣಿಯಲ್ಲಿ ಭಕ್ತಿಯ ಬಸವ, ಜ್ಞಾನದ ಚನ್ನಬಸವ, ವೈರಾಗ್ಯದ ಅಲ್ಲಮ, ಕ್ರಿಯೆಯ ಸಿದ್ಧರಾಮ ಹುತ್ತು ಶರಣಸತಿ ಲಿಂಗಸತಿಯಾದ ಅಕ್ಕ ಮಹಾದೇವಿಯರು ಪ್ರಸಿದ್ಧರು.

ಶ್ರೀ ಗುರು ಸಿದ್ಧರಾಮೇಶ್ವರರನ್ನು ಕ್ರಿಯಾಶೀಲ ಕರ್ಮಯೋಗಿ, ಕಾಯಕದ ಕಲಿ, ಶಿವಯೋಗಿ ಎಂದೆಲ್ಲಾ ಕರೆದಿದ್ದಾರೆ. ಅವರ ಜೀವನ ಚರಿತ್ರೆಯನ್ನು ಮಹಾಕವಿ ರಾಘವಾಂಕ "ಶಿವಸಿದ್ಧವಲ್ಲಭನ ಮಹಿಮೆಯನು ಸರ್ವರರಿಯಲು ನಟ್ಟುಕಲ್ಲೆನಿಸದೆ ಇಳೆಯೊಳಗೆ ಸುಳಿವ ಶಾಸನವೆನಿಸಿ ಪೇಳ್ವೆನೀ ಸತ್ಕೃತಿಯನು"[3] ಎಂದು ತಾನೇ ಕಂಡು ಅಥವಾ ಉಂಡಿರಬಹುದಾದ ಅನುಭವದಿಂದ ಸೋದರಮಾವ ಮಹಾ ಕವಿ ಹರಿಹರನು ರಚಿಸಿರುವ ಅನೇಕ ರಗಳೆಗಳಿಂದ ನೋಡಿ ರಚಿಸಿರಬಹುದು.

---

೧. ಬಸವಣ್ಣನವರ ಷಟ್‌ಸ್ಥಲ ವಚನಗಳು ೧೨೮.
೨. ಶ್ರೀ ಸಿದ್ಧರಾಮ ಚಾರಿತ್ರ ೧–೩.
೩. —ಅದೇ— ೧–೫.

ಮಹಾಕವಿ ರಾಘವಾಂಕನ ಕಾಲವನ್ನು 1225 ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಶ್ರೀ ಗುರು ಸಿದ್ಧರಾಮೇಶ್ವರರ ಕಾಲ 1167 ರಿಂದ 1209ರ ವರೆಗೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದ್ದರಿಂದ ಮಹಾಕವಿ ರಾಘವಾಂಕ ಶ್ರೀ ಗುರುಸಿದ್ಧರಾಮೇಶ್ವರರ ವಿಷಯವನ್ನು ಕಣ್ಣಾರೆ ಕಂಡು ಕಿವಿಯಾರೆ ಕೇಳಿ ಬರೆದಿರಬಹುದು.

ರಾಘವಾಂಕನ ಜೀವನ ಚರಿತ್ರೆ ಅವನ ಕೃತಿಗಳಿಂದಲೂ ಚಿಕ್ಕ ನಂಜೇಶ (1650) ರಚಿಸಿರುವ ರಾಘವಾಂಕ ಚಾರಿತ್ರದಿಂದಲೂ ಅಲ್ಲದೆ ಬಸವ ಪುರಾಣ, ಚನ್ನಬಸವ ಪುರಾಣ, ಪದ್ಮರಾಜ ಪುರಾಣ, ವೀರಶೈವಾಮೃತ ಮಹಾ ಪುರಾಣ, ಮೊದಲಾದವುಗಳಿಂದಲೂ ತಿಳಿದು ಬರುತ್ತದೆ.

ಮಹಾದೇವಭಟ್ಟ ಮತ್ತು ರುದ್ರಾಣಿಯರ ಮಗನಾಗಿ ಹುಟ್ಟಿ, ಸೋದರಮಾವ ಮಹಾಕವಿ ಹರಿಹರನಿಂದ ಪ್ರೇರಣೆ ಪಡೆದು ಪಂಪಾ ಕ್ಷೇತ್ರದ ನಿವಾಸಿಯಾಗಿದ್ದು ಹಂಪೆಯ ವಿರೂಪಾಕ್ಷನ ಹರಕೆಯಿಂದ 'ಉಭಯಕವಿ ಶರಭ ಭೇರುಂಡ, ಉಭಯಕವಿ ಕಮಲರವಿ, ಅಡಟಕವಿ ನಿಕರ ಚೌದಂತ, ಕವಿ ಶರಭ ಭೇರುಂಡನಾಗಿ, ಹಿರಿಯ ಕವಿ ಕೊಂಡಹಳ್ಳಿ ಕೇಶಿರಾಜನನ್ನು ಸ್ತುತಿಸಿ ಹರಿಶ್ಚಂದ್ರಕಾವ್ಯ, ಶ್ರೀ ಸಿದ್ಧರಾಮ ಚಾರಿತ್ರ, ಶ್ರೀ ಸೋಮನಾಥ ಚಾರಿತ್ರ, ವೀರೇಶ ಚರಿತೆ, ಶರಭ ಚಾರಿತ್ರ ಮತ್ತು ಹರಿಹರ ಮಹತ್ವ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಕಡೆಯ ಎರಡು ಕೃತಿಗಳು ಲಭ್ಯವಿಲ್ಲ.

ಈ ಮಹಾಕವಿಯು ಖ್ಯಾತಿಯನ್ನು ಹೊಯ್ಸಳ ನರಸಿಂಹ ಬಲ್ಲಾಳನ ಮಂತ್ರಿ ಕೆರೆಯ ಪದ್ಮರಸರ ಬಯಕೆಯಂತೆ ದೋರ ಸಮುದ್ರಕ್ಕೆ ಬಂದು ಕೆಲವು ಕಾಲವಿದ್ದು ಬೇಲೂರಿನಲ್ಲಿ ಬಯಲಾದಂತೆ ಇತಿಹಾಸ ತಿಳಿಸುತ್ತದೆ. ಬೇಲೂರಿನಲ್ಲಿ ಮಹಾಕವಿ ರಾಘವಾಂಕನ ಸಮಾಧಿಯಿದೆ.

ಶ್ರೀ ಸಿದ್ಧರಾಮ ಚಾರಿತ್ರದ ಕಥಾನಾಯಕ ಮಾನವನಲ್ಲ ಸಾಕ್ಷಾತ್ ಪರಶಿವ. "ಶಿವನ ಪರಮಾವತಾರವೇ ಶಿವಸಿದ್ಧರಾಮ" ಎಂದಿದ್ದಾರೆ. ಸಿದ್ಧರಾಮ ಕರ್ಮಯೋಗಿ, ಕಾಯಕದ ಕಲಿ, ಕ್ರಿಯಾಶೀಲ ಎಂಬುದನ್ನು ಚನ್ನಾಗಿ ನಿರೂಪಿಸಿದ್ದಾರೆ. "ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು ಅನುಗೊಂಬನಿತು ಕಾಯಕಂ ನಡೆಯುತ್ತಿರಬೇಕು[4] ಎಂದು ಧರೆಗೆ ಸೊನ್ನಲಿಗೆ ಪುರ ಕೈಲಾಸವು ಆ ಜಗದ ಗುರು ಸಿದ್ಧರಾಮೇಶ್ವರನಿಲ್ಲಿ ಮೆರೆದ ಗುಡ್ಡರು ಗಹೇಶ್ವರರು ಅಖಿಳ ಜನರು ಅಮರರ ಸತಿಯರು

೪. ಶ್ರೀ ಸಿದ್ಧರಾಮ ಚಾರಿತ್ರ ೪-೨೪.

ರುದ್ರಕನ್ಯೆಯರು ನೆರೆದ ಶಿವಭಜನಂಗಳು ಅಷ್ಟ ಷಷ್ಠಿ ಕ್ಷೇತ್ರ ಅದು ಈ ಹಿಂದೆ ಕಿರುವಳ್ಳಿ ಕುಗ್ರಾಮ. ಶ್ರೀ ಗುರು ಸಿದ್ಧರಾಮೇಶ್ವರರು ಉದಯಿಸಿದ ಮೇಲೆ ದಾರಿದ್ರ್ಯದಾಗರವಾಗಿದ್ದ ಅದು ಸಿರಿಗೆ ಸಿಂಗರ, ಸರ್ವ ವಿದ್ಯಾವಾಸ, ಶಿವಲಿಂಗಬೀಡು, ಪುಣ್ಯದ ಪುಂಜ, ಮುಕ್ತಿಯ ಮನೆ, ಧರ್ಮದ ದಾನಿಯಾಯಿತು.

ಮಹಾಕವಿ ಸಿದ್ಧರಾಮೇಶ್ವರರ ಜೀವನ ಚರಿತ್ರೆಯನ್ನು ತಿಳಿಸುತ್ತ ಧರೆಯ ಕುಡಿಯರ ಕುಲಶಿರೋಮಣಿಗಳೆನಿಪ್ಪ ಮುದ್ದುಗೌಡರು ಮತ್ತು ಸುಗ್ಗವ್ವೆಯರ ಮಗನು ಸುಗ್ಗಲಾದೇವಿ "ವನಿತೆ ಐದಾರು ಸೂಲಂ ಗೆಲಿದಳು ಉರೆ ತನ್ನ ತನುವಿನೊಳಗೆ ಐದಾರು ಗುಣಂಗಳಂ ಗೆಲಿದಂತೆ"[೫] ಎಂದು ಹೇಳಿದ್ದಾರೆ.

ಅಂದರೆ ಕುಡಿಯರ ವಂಶಸ್ಥರಲ್ಲಿ ಪ್ರಧಾನರಾದ ಮುದ್ದುಗೌಡರಿಗೆ ಈಗಾಗಲೇ ಏಳು ಮಕ್ಕಳು ಅವರ ಗುಣ ಪ್ರತೀಕವೇ ಎಂಬಂತೆ ಇದ್ದರು. ಎಂಟನೆಯವನಾಗಿ ಸಿದ್ಧರಾಮ ಉದಯಿಸಿದ. ಅವರು ಕುಡಿಯರು ಅಂದರೆ ಒಕ್ಕಲಿಗರು ವ್ಯವಸಾಯಸ್ಥರು, ರೈತರು, ಮಣ್ಣಿನ ಮಕ್ಕಳು, ಕನ್ನಡದ ಕುಡಿಯು ಅಂದರೆ ಕುಡಿಚಿಗುರು ಅದನ್ನು ಸಂಕೇತವಾಗಿ ಉಳ್ಳವರು. ಇವರನ್ನು ಸಂಸ್ಕೃತದಲ್ಲಿ ಪಲ್ಲವರು ತಮಿಳಿನಲ್ಲಿ ನೊಳಂಬರು ಎಂದಿದ್ದಾರೆ. ತಮಿಳಿನಲ್ಲಿ 'ನೊಳಂಬಂ' ಅಂದರೆ ಟೆಂಡರ್, ಕೋಮಲ, ಮೃದು ಮೃದುವಾದುದು, ಚಿಗುರು. ಅದನ್ನು ಉಳ್ಳವರೇ ನೊಳಂಬರ್ ಎನ್ನುತ್ತಾರೆ.

ಅಂದಿನ ನೊಳಂಬರ್ ಅವರೇ ಇಂದಿನ ನೊಣಬರು. ಅದು ನೊಳಂಬರ್> ನೊಳಬರ್> ನೊಣಬರ್> ನೊಣಬರು ಆಗಿದೆ ಅಳಂಬೆ—ಅಣಬೆ ಆದಂತೆ, ಕಳಂಜ> ಕಣಜ ಆದಂತೆ ಆಗಿದೆ.

ಸಿದ್ಧರಾಮನ ಅಣ್ಣನೇ ಬೊಮ್ಮಣ್ಣಗೌಡ (ಮಾರೇಗೌಡ) ಅವರೇ ತುರುಬಿನ ಮಾರೇಗೌಡರೆಂದು ಪ್ರಸಿದ್ಧರಾಗಿ ಶ್ರೀ ಗುರುಸಿದ್ಧರಾಮೇಶ್ವರರ ಅನುಗ್ರಹ ಪಡೆದು 'ಏಳುನಾಡು' ರಾಜ್ಯವನ್ನು ಸ್ಥಾಪಿಸಿದರು. ಅದು ಮುಂದೆ ಮಹಾನಾಡು ಎಂದು ಪ್ರಸಿದ್ಧಿಯಾಯಿತು.

ಮಹಾಕವಿ ರಾಘವಾಂಕನ ದೃಷ್ಟಿಯಲ್ಲಿ ಸಿದ್ಧರಾಮ ಕೇವಲ ಪವಾಡ ಪುರುಷನಲ್ಲ. ಸಾಕ್ಷಾತ್ ಪರಶಿವನ ಅವತಾರವಾದ ಸಿದ್ಧನೂ, ಸಾಧಕನೂ ಹೌದು. ಸಾಕಾರ ನಿಷ್ಠೆ, ಭೂತಂಗಳೊಳು ಅನುಕಂಪೆಗಳೇ ಅವರ ಜೀವನದ ಸಾರ. ದೇವಾಲಯ ನಿರ್ಮಾಣ, ಲಿಂಗಪ್ರತಿಷ್ಠೆ, ಕ್ಷೇತ್ರ ಪರಿಕಲ್ಪನೆ, ರುದ್ರಾಭಿಷೇಕ, ಯೋಗಮಜ್ಜನ,

---

೫. —ಅದೇ— ೧-೪೮.

ದಾನ ವಿನಿಯೋಗ, ಸಾಮೂಹಿಕ ಮದುವೆ, ವಿದ್ಯಾರ್ಥಿನಿಲಯ, ಕೆರೆ ಕಟ್ಟಿಸುವುದು, ಬಾವಿ ತೋಡಿಸುವುದು, ಕಷ್ಟದಲ್ಲಿ ಸಿಕ್ಕಿದವರನ್ನು ಬಿಡಿಸುವುದು, ಶಿಷ್ಟರನ್ನು ರಕ್ಷಿಸುವುದು, ಪಶು ಪಕ್ಷಿ ಕ್ರಿಮಿಕೀಟಗಳಿಗೂ ಬಾಳಿನಲ್ಲಿ ಗುರಿ ಮೂಡಿಸುವುದೇ ಸಿದ್ಧರಾಮರ ಬಾಳಿನ ಮುಡಿಯ ಮಾಣಿಕ್ಯಗಳು.

ಪರಮ ಸುಖವಳಪಟ್ಟು ದುರ್ನೀತಿಯಂ ಬಿಟ್ಟು ಶಂಕರನ ಭಕ್ತಿ ಮನದೊಳ್ ನೆಟ್ಟು ಧನ್ಯತೆಯ ಕಟ್ಟೆಯಂ ಕಟ್ಟು ಎಂದು ಸಂದೇಶ ನೀಡಿದ್ದಾರೆ. ಅವರು ಕರುಣಾಕರ, ದಯಾನಿಧಿ, ಮಮತೆಯ ಮಡು, ಭೂತಸ್ನೇಹಿ, ಪ್ರಾಣಿಪ್ರಿಯ, ಜಂಗಮಪ್ರಾಣಿ ಎಂದು ಕವಿ ಚಿತ್ರಿಸಿದ್ದಾರೆ.

ಮಹಾಕವಿ ರಾಘವಾಂಕ ಸಿದ್ಧರಾಮ ಚಾರಿತ್ರದಲ್ಲಿ ಉರಿಯೊಳ್ ಅಳಿದಂ ವ್ಯಾಳಿ, ಕೆರೆವೊಕ್ಕ ಕೋರಾಂಟ, ಇರದೆ ಚಕ್ರಕ್ಕೆ ತಲೆಗೊಟ್ಟ ನಾಗಾರ್ಜುನಂ, ಪಿರಿಯ ಕೆಸದೊಳಗದ್ದ ರತ್ನಘೋಷಂ.[೬] ಮೊದಲಾದ ಪುರಾಣ ವ್ಯಕ್ತಿಗಳೊಡನೆ ಕೇತಾರಗುರು, ಹಾವಿನಹಾಳ ಕಲ್ಲಯ್ಯ ಮತ್ತು ಸೊಡ್ಡಳ ಬಾಚರಸ ಮೊದಲಾದ ಇತಿಹಾಸ ಪುರುಷರೊಡನೆ ಮರು ಜೇಪಶಿ, ರುದ್ರಗಮ್ಮರಿ, ಉದಯತಾಳು, ಮೋಹಿನಿಗಜ, ಶೈಲೋದಕ, ಕುಮಾರಧಾರೆ, ಪಾತಿಯ ಕೂಸು, ಕತ್ತರಿವಾಣಿ, ನಂಜಿನೆರಳು, ಬಿಲ್ವದಾರ ಮೊದಲಾದ ಶ್ರೀಶೈಲಕ್ಷೇತ್ರದ ಪ್ರಸಿದ್ಧಿಗಳನ್ನು ತಿಳಿಸಿದ್ದಾರೆ.

ಅತಿ ಜಡರಪ್ಪ ಮಾನವರನು ಇನ್ನೇನೆಂಬೆ ಅತನು ಹರನು ಇರಲು ಅನ್ಯ ದೈವಗಳ ನೋನುವರೆ ಪತಿತರಿರ ನಿಮ್ಮ ಮನೆಯೊಳು ನಿಲುವನಲ್ಲೆಂದು ಲಿಂಗವಂ ಧರಿಸಿ ಪಿಡಿದು ಗತಿಗೆಟ್ಟು ಬೇರಿನ್ನು ದೈವವೆಂದೆನ್ನದಿರಿ ಧೃತಿಗೆಟ್ಟು ಬೇರಿನ್ನು ದೈವವೆಂದೆನ್ನದಿರಿ ಧೃತಿಗೆಟ್ಟು ಬೇರಿನ್ನು ದೈವವೆಂದೆನ್ನದಿರಿ ಧೃತಿಗೆಟ್ಟು ಬೇರಿನ್ನು ದೈವವೆಂದೆನ್ನದಿರಿ ಅತನು ಹರ ಮಲ್ಲಿಕಾರ್ಜುನನು ಈವನೆಂದು ಹಾಡಿದನೊಂದು ಗುರುವಚನ [೭] ಸಮಾಧಿ ಸಂಚಳಿಸಿ ಕಣ್ದೆರೆಯುತಾಗಳು ಹಾಡಿದಂ ಗೀತವಂ [೮] ಹರಣ ಬಂದು ಇಂತೆನ್ನ ಮೇಲು ವಾಯ್ದುಡೆ ಬಳಿಕ ತರಹರಿಸಿ ನಾನೆಂತು ನಿಲುವೆ ಹೇಳೈ ತಂದೆ ಹರ ಕಪಿಲಸಿದ್ಧ ಮಲ್ಲಯ್ಯ ಎಂದು ಹಾಡಿದನು ಅತಿಭಂಗವೆನ್ನ ವೀರಕ್ಕೆ ಸಿದ್ಧೇಶ ಎನೆ ಧೃತಿಗುಂದಬೇಡ ನಿನ್ನೊಳಿಗವನು ಅಂಬಿಕಾಪತಿ ಯ್ಯೆದಿಸುವನು ಎನುತ ಅತನಂ ಕಳಿಪಿ ಗುರುವಚನನುಂ ಹಾಡುತಿರಲು [೯] ಕಪಿಲ ಸಿದ್ಧಮಲ್ಲಯ್ಯ ಹಿರಿದೆನಿಸಿಪ ಘೋರ ಸಂಸಾರ ದಾರಣ್ಯ

---

೬. —ಅದೇ— ೧–೧೦.

೭. —ಅದೇ— ೩–೩೬.

೮. —ಅದೇ— ೪–೨೮.

೯. —ಅದೇ— ೪–೨೯.

ದೊಳು ಹರವರಿಯು ಕಾಮನೆಂದೆಂಬ ಬೇಂಟೆಯು ಬೇಡನುರವಣೆಯು ಅನ್ಯಾಯುವ ವಾಣಿಸ್ಸೈ ಎಂಬ ಗೀತವ ಹಾಡಿ೧೦ ಅಯ್ಯ ಕೇಳಯ್ಯ ನೀನೊಡ್ಡಿದೊಡ್ಡಿದ ಸಮಂ ವ್ಯೈಯುನಿರಿದಿರಿದು ಕಿರಿಕಿರಿದಾಗಿ ಕಡಿದಡಂ ಅಯ್ಯಯ್ಯ ಎಂದಳುಕೆ ಹಿರಿಹಿರಿದಾಗಿ ನೆನೆವೆ ಕೇಳಯ್ಯ ಅಯ್ಯಯೆನುತ ಕಯ್ಯಲಾಕುಳವನಂದಲಗುತ್ತ ಹಾಡುತ್ತ ಲೊಯ್ಯನೀ ಕಾಯುಸಳಿಗೆ ಜೀವ ನಿಮಗೆಂದು ಸಯ್ಯನಿ ವ್ರತನಿರತ ಶ್ರೀ ಸಿದ್ಧರಾಮ ನಾಥಂ ಹಾಡಿದಂ ಗೀತವಂ೧೧ ದೇಹಮಂ ಬಿಟ್ಟು ಜೀವ ಮಲ್ಲಿನಾಥನೆಡೆಗೆ ಹಿಂಡು ಗೊಂಡು ಅಡಗುತಿರೆ ನಿತ್ಯ ನೇಮದೊಳಿರ್ದು ಕಂಡು ಸಿದ್ಧರ ದೇವನಂ ಹಿಡಿದುಕೊಂಡು ಜೀವವ ಹೋಹಬಹ ಗೀತಮಂ ಬಿನ್ನಹಂ ಮಾಡಿ ನಡೆತಂದನು ಹರಮುನ್ನ ಹರಸಿ ಕಟ್ಟಿದ ಲಿಖಿತ ಪಟ್ಟವಂ ಪರಿಹರಿಸಿ ಮತ್ತೊಂದ ಮಾಡುವೀ ಸಾಮರ್ಥ್ಯ ಹರಿಯಜರಿ ಗಾಗದೆನೆ ಸುರರ ನರರಳವೆ ಮಲ್ಲಯ್ಯನೇ ಬಲ್ಲನೆಂಬ ಗುರುವಚನವಂ ಕೊಂಡು ಮರಳಿ ಆವರಿಗೆ ಅರಿಪಿ ಬಾಚರಸ ಸೊಡ್ಡಳ ಲಿಂಗದೊಳು ಸಂದನೆಂಬುದಂ ನಿರುಪಮನು ಕಂಡು ಮತ್ತೊಂದು ವಚನವ ಹಾಡಿ ಸುಖಮಿರ್ಪ ಕಾಲದೊಳಗೆ೧೨ ಜಡರ ನಡುವಿರಲು ಅವರ ಸಂಗದಿಂ (ಲೋಹ ಸಂಗದಿಂ ಕಿಚ್ಚು ಬಡಿಹಡೆದುದೆಂಬಂತೆ) ಕಾಯುಗುಣವಿಡಿದು ಬಳಸುವರೆನಲು ನಸುನಗುತ ಗಾಳಿಯಂ ಹುಡಿ ಹಿಡಿವುದೇ ರಸನೆ ಹೆಡಸುವುದೇ ಅಲಿಯಂ ಜನವ ಒಳಗೊಂಡಿರ್ಪುದೆ ಪೊಡವಿಯೊಳು ಶಿವಯೋಗಿ ಸುಳಿದಡಂ ನೀರ ನಡುವಿಡಿದ ಕಂಜದ ತೆರದಿ ಭಕ್ತಿಯುಕ್ತನು ಅಲ್ಲಿ ಪ್ರೌಢ ಮೂರ್ತಿಗೆ ಅಗ್ರನೆಂದೆನುತ ಹಾಡಿದನು ಗುರು ವಚನವ ಅಲ್ಲಮ ಮೆಚ್ಚಲು೧೩ ಎಂದು ಮಹಾಕವಿ ರಾಘವಾಂಕನ ಪ್ರಕಾರ ಶ್ರೀ ಗುರುಸಿದ್ಧರಾಮೇಶ್ವರರು ಸುಮಾರು ವಚನಗಳನ್ನು ಹಾಡಿರಬೇಕು.

ಅರುವತ್ತೆಂಟು ಸಾವಿರ ವಚನಂಗಳ ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯ ಹಾಡುವುದೊಂದೇ ವಚನ ನೋಡುವುದೊಂದೇ ವಚನ ವಿಷಯವ ಬಿಟ್ಟು ನಿರ್ವಿಷಯವಾಗುವುದೊಂದೇ ವಚನ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ೧೪ ಎಂಬ ವಚನ ದಿಂದ ಶ್ರೀ ಗುರುಸಿದ್ಧರಾಮೇಶ್ವರರು ಅರುವತ್ತೆಂಟು ಸಾವಿರ ವಚನಗಳನ್ನು ಹಾಡಿದಂತೆ ತಿಳಿಸಿದ್ದಾರೆ. ಆದರೆ ನಮಗೆ ದೊರೆತಿರುವುದು ಕೇವಲ ಒಂದೂವರೆ ಸಾವಿರ ವಚನ ಗಳು. ಬಹಳಷ್ಟು ವಚನಗಳು ಲಭ್ಯವಾಗಿಲ್ಲ.

---

೧೦. —ಅದೇ— ೪-೭೩.

೧೧. —ಅದೇ— ೪-೭೪.

೧೨. —ಅದೇ— ೯-೨೦.

೧೩. —ಅದೇ— ೯-೪೨.

೧೪. ಶ್ರೀ ಸಿದ್ಧರಾಮೇಶ್ವರರ ವಚನಗಳು ೧೦೬.

ಮಹಾಕವಿ ರಾಘವಾಂಕರ ಶ್ರೀ ಸಿದ್ಧರಾಮ ಚಾರಿತ್ರವನ್ನು ಓದಿದ ಮೇಲೆ ಶ್ರೀ ಗುರು ಸಿದ್ಧರಾಮೇಶ್ವರರು ಶೈವರೇ ಅಥವಾ ವೀರಶೈವರೇ ಎಂಬ ಪ್ರಶ್ನೆ ತಲೆದೋರುತ್ತದೆ. ಆದರೆ ಕಾವ್ಯದಲ್ಲಿ ಸಂಪೂರ್ಣ ವೀರಶೈವ ಪರಿಸರವಿದೆ. "ಘಳಿಲನಂತಾಗಳೆದ್ದು ಗಗನದೊಳಗೊಂದು ಬೆಳಗು ಮೊಳೆಯಿತ್ತದರ ಬಳಿವಿಡಿದು ಕಣ್ಗೆ ಮಂಗಳವಪ್ಪ ಶೈವತ್ವ ಪ್ರಭಾವ ಪಟಲದಿಂದ ನಾನಾ ದಿವ್ಯ ನಾದದಿಂದ ಬಳಸಿ ಪರುಷದ ಕರಂಡಗೆಯೊಳಣಿಮಾದಿ ರುಣಮಿಳಿತ ಸೆಜ್ಜೆಯೊಳಮಲ ಲಿಂಗವಿಳಿದಾ ಸಿದ್ಧಕುಲತಿಲಕ ನಿರ್ವಾಂ[೧೫] ಆದಿಲಿಂಗದ ಸೆಜ್ಜೆಯಿರಳ್ವಂತೆ ವಿನುತಧರೆ ಹಿಗ್ಗಿ ಸರಿದಿಂಬುಗೂಡೆ ಘಳದ ಮೇಲಣ ಸೊಪ್ಪು ತಿರುಳುರಸಮಂ ತೆಗೆಯೆ ಬಳಿಕೊಳಗೆ ಬೀಜ ಸ್ವಯಂಬುವಾಗಿಪ್ಪಂತೆ ಬಳಸಿ ಲಿಂಗದ ಮುಖಕೆ ಕವಿದಡ್ಡವಾದ ಕಪ್ಪಳಿಕೆ ಹೊರೆ ತೆರೆ ಸೆರೆಗಳ ಅಳವಟ್ಟ ಸೆಜ್ಜೆಗಳೆವಂತೆ ಪಿಂಗಿಸಿಕಳೆದು ತೊಳೆಪ ಸ್ವಯಂಭು ಲಿಂಗವ ಕಂಡರಾಗ ನಿರ್ಮಳ ಲಿಂಗದೊಳು ಕಠಿನಮಂ ನುಡಿದಪಂಗೆ ಆಗದಿಹುದೆ ನಾಯಕನರಕಂ[೧೬] ಮಗಮಗಿಪ ಕರ್ಪೂರ ಕಸ್ತುರಿಯ ಪರಿಮಳದ ಸೊಗಸೆಸೆವ ಪಟ್ಟಗೆಯ ನಡುವೆ ಗದುಗೆಯಿಕ್ಕಿ ಬಿಗಿ ಬಿಗಿದು ಸುತ್ತು ಮೊತ್ತದ ಮಾಳ್ಕೆಯಿಂ ಹಂಸತೂಳವ ಮೃದುವ ಲೇಪಿಸಿ ಮಿಗೆ ರಂಜಿಸುವ ಪರುಷ ಪುರುಷರೂಪಿನ ಲಿಂಗ ಸೊಗಸು ಕರಡಗೆಯೊಳಿಡುವಂತಿಟ್ಟು ಬಳಿತ ಮೂಜಗಭರಿತನನು ಅರಿಯದಲ್ಲಿರ್ದನೆಂದು ಮುದ್ರಿಸಿ ಹೂಡಿ ನಡೆಗೊಂಡರು[೧೭] ಎಂಬ ಮಾತುಗಳಿಂದ ಮಹೇಶ್ವರ (೮-೯೭), ಜಂಗಮ (೪-೪), ಕಾಯಕ (೪-೨೩), ಶರಣ (೮-೯೭), ಭವಿ (೮-೩), ಮೊದಲಾದ ವೀರಶೈವ ಪಾರಿಭಾಷಿಕ ಪದಗಳು 'ಅಲ್ಲಮ ಪ್ರಭು', ಸೊಡ್ಡಳ ಬಾಚರಸ, ಹಾಲಿನ ಹಾಳ ಕಲ್ಲಯ್ಯ ಮೊದಲಾದ ಶರಣ ಉಲ್ಲೇಖಗಳ ಎಲ್ಲ ಕಾರಣಗಳಿಂದ ಶ್ರೀ ಗುರು ಸಿದ್ಧರಾಮೇಶ್ವರರು ವೀರಶೈವರು. ಅವರ ವೀರಶೈವದ ಬಗ್ಗೆ ಸಂದೇಹವೇ ಮೂಡದು. ಹಾಗಿದ್ದರೂ ಶೂನ್ಯ ಸಂಪಾದನೆಕಾರರು ಅನಾವಶ್ಯವಾಗಿ ಚನ್ನಬಸವಣ್ಣನವರಿಂದ ಲಿಂಗಧಾರಣೆ ಮಾಡಿಸಿದುದು ಅವರು ಮಹಾಕವಿ ರಾಘವಾಂಕನ ಶ್ರೀ ಸಿದ್ಧರಾಮ ಚಾರಿತ್ರವನ್ನು ಓದದಿರುವುದು.

ಶ್ರೀ ಗುರು ಸಿದ್ಧರಾಮೇಶ್ವರರು ಶುದ್ಧ, ಸಿದ್ಧ ಮತ್ತು ಪ್ರಸಿದ್ಧ ವೀರಶೈವರು, ವೀರಶೈವತ್ವ ಅವರ ಜನ್ಮಸಿದ್ಧಹಕ್ಕು.

ಸಿದ್ಧರಾಮೇಶ್ವರರಿಗೆ ಸಾಮಾನ್ಯ ಜನರ ಬಗ್ಗೆ ಕಳಕಳಿ ಮತ್ತು ಚಿಂತೆ, ಭವಿಗಳಾದವರನ್ನು ಭಕ್ತರೆಂಬ ಚಿನ್ನವನ್ನಾಗಿ ಮಾಡಿ ಮಹಾಶಿವನಿಗೆ ಮಾರುತ್ತಿದ್ದರಂತೆ.

---

೧೫. ಶ್ರೀ ಸಿದ್ಧರಾಮ ಚಾರಿತ್ರ ೩-೩೩.

೧೬. —ಅದೇ— ೬-೩೧.

೧೭. —ಅದೇ— ೯-೧೧.

ಅಂತಹ ಸಿದ್ಧಪುರುಷರು ರಸಸಿದ್ಧರು ಮತ್ತು ಗುರುಸಿದ್ಧರು. "ಭಸಿತವೇ ಘುಟಿಕೆ ರುದ್ರಾಕ್ಷಿ ಮಾಲಿಕೆ ಸಿದ್ಧರಸ ಮೂಲಮಂತ್ರ ನಿಜಹಸ್ತ ಮೂಹಿತೆ ನಿಯೋಮಿಸುವ ಆಜ್ಞೆ ಇಂಧನಂ ಜ್ಞಾನಾಗ್ನಿ ಅಗ್ನಿಯುಪದೇಶ ಕಣ್ಣಿಡುವುದಾಗಿ ಹೊಸ ಪಾಪ ಗಂಧ ತಾಳಿಕೆ ಕೆಡಲು ಭವಿಲೋಹ ವಿಸರವುಂ ಕಳೆದು ಮಹಾಮಹೇಶ್ವರನೆನಿಪ ಮಿಸುನಿಯಂ ಮಾಡಿ ರುದ್ರಂಗೆ ಮಾರುವಾ ಸಿದ್ಧನಾ ಸಿದ್ಧರಾಮಯ್ಯನು[೧೮] ಎಂದು ವರ್ಣಿಸಿದ್ದಾರೆ.

ನಾರು ಜೇರು ಅಂಜನಂ ಘುಟಿಕೆ ಮೂಲಿಕೆ ಬಿಲ್ವದ್ವಾರ ರಸಸಿದ್ಧಿ ಧಾತುವಾದ ವಶ್ಯ ಕುಟಿಲಾರಾಧನ ವಲಿತ ಪಲಿತ ನಾಶಂ ಕಾಲವಂಚನಾಭ್ಯಾಸಯೋಗಂ ಮರಣಾದಿ ವಿಕರ್ಮ ಮಂತ್ರ ಯಂತ್ರ ತಂತ್ರಸಾರ ಪರಕಾಯ ಪ್ರವೇಶಂ ಬಯಸುವ ವಿಕಾರಿ ಸಿದ್ಧರು ಸರಿಯೆ ಸಿದ್ಧರಾಮಂಗೆ ಶಿವಸಿದ್ಧ ಕುಲ ಕಮಲ ರವಿಗೆ ಎಂದು ಸಿದ್ಧರಾಮರ ಸಿದ್ಧತ್ವ ಮತ್ತು ಸಾಧನೆಯನ್ನು ಬಣ್ಣಿಸಿದ್ದಾರೆ.[೧೯]

ಮಹಾಕವಿ ರಾಘವಾಂಕನು ಚಿತ್ರಿಸಿರುವ ಬಾಲಕ ಸಿದ್ಧರಾಮ ವಿಶ್ವ ವಿಖ್ಯಾತ ವಾದುದು ಜಗತ್ತಿನ ಯಾವ ಸಾಹಿತ್ಯದಲ್ಲಿಯೂ ಇಂತಹ ಅಪರೂಪವಾದ, ಅಪೂರ್ವ ವಾದ ಮುಗ್ಧ ಚಿತ್ರ ದೊರಕದು. ಬಾಲಕ ಸಿದ್ಧರಾಮ ಹೊಲದಲ್ಲಿ ಕಂಡ ಮಲ್ಲಯ್ಯನ ಇಚ್ಛೆಯಂತೆ ಅಂಬಕಳವನ್ನು ತರಲು ಮನೆಗೆ ಹೋಗಬೇಕಾಗಿ ಬಂದಾಗ "ಹುಲಿ ಯುಂಟು ಕರಡಿಯುಂಟು ಅಪ್ಮಾವುವುಂಟು ಇಲ್ಲಿ ಖಳ ಮೂರ್ಖ ಚೋರರುಂಟು ಎಂತಿರಿಸಿ ಪೋಪೆನು ಎಂದಾಗ ಪರಶಿವನು ಎನ್ನ ದೆಸೆಗೆ ಅಂಜಬೇಡ ಹೋಗು ಅಂದಾಗ ಜಗತ್‌ರಸನಾದ ಪರಮೇಶ್ವರನಿಗೆ ಹೆದರಿಕೆ ಬರಿಸಿದ ಮುಗ್ಧ ಹುಡುಗ. ಅವನು ಇಲ್ಲ ದಾದಾಗ ಅವನಿಗಾಗಿ ಹಂಬಲಿಸಿ ಏಳು ವರ್ಷದ ಹುಡುಗ ಮನೆ ಮಠ ತೊರೆದು ಶ್ರೀ ಶೈಲದ ಪರಿಷೆಯರ ಸಂಗಡ ಹೋದುದು ನಿಜಕ್ಕೂ ಸಿದ್ಧರಾಮರ ಹಿರಿಯತನವನ್ನು ತೋರಿಸುತ್ತದೆ. ಪರಿಷೆಯವರು ತೋರಿಸಿದ ಶ್ರೀ ಶೈಲದ ಮಲ್ಲಿಕಾರ್ಜುನ ಲಿಂಗವನ್ನು ಧಿಕ್ಕರಿಸಿ, ನಾನು ನೋಡಿದ ನನಗೆ ಹೊಲದಲ್ಲಿ ದರ್ಶನವಿತ್ತ ಮಲ್ಲಯ್ಯ ಇವನಲ್ಲ. ಮುಡಿಯೊಳು ಹೆರೆಯುಂಟು ತೊರೆಯುಂಟು ಜಡೆಯುಂಟು ಕೊರಳೆಡೆಯ ಕರೆ ಯುಂಟು ಪಂಚಮುಖವುಂಟು ದಶಭುಜವುಂಟು ಕಿರಿಯ ಫಣಿದೊಡವುಂಟು ನೊಸಲ ಕಣ್ಣುಂಟು ಆತನಂ ತೋರಿರೆ" ಎಂದು ಜನಕ್ಕೆ ಸವಾಲು ಹಾಕಿ. ಮಲ್ಲಯ್ಯ ಮಲ್ಲಯ್ಯ ಎಂದು ಕರೆದು ಕರೆದು ರುದ್ರಗನ್ನುರಿಗೆ ನಡೆತಂದು ಕೊರಳೆತ್ತಿ ಕೈಮುಗಿದು ನೆಗಪಿ ಕಣ್ಣಂಮುಚ್ಚಿ ಕರುಣಾಬ್ಧಿ ಮಲ್ಲಿನಾಥ ಎಂದೊಡೆ ಓ ಕಂದ ಬಳಲಿದೆಯಾ ಎನುತ್ತ

---

೧೮. —ಅದೇ— ೧–೧೧.

೧೯. —ಅದೇ— ೧–೯.

ಎತ್ತಿ ತರ್ಕೈರ್ಸಿ ತಲೆದಡವಿ ಮುಂಡಾಡಿ ನೋಡಿ ಕರುಣೇಂದು ಸುರನದಿ ಜಟೆ ಮಕುಟ ಅಸಮಾಕ್ಷಿವುರಗ ಕುಂಡಲ ವೈದುವದನ ಈರೈದು ತೋಳು ಗರಳಗಳ ಇಭಚರ್ಮ ಎಡದ ಗಿರಿಸುತೆವೆರಸಿ ತೋರಿದಂ ನಿಜ ರೂಪವನು.೨೦ ತೋರಿ ಈಶಂ ವಜ್ರಕುಂಡಲ ವಿಕ್ಕಿತಾಂ ತಳೆದ ನಾಗಾಜಿನಕ್ಕೊಗೆದ ಕಂಥೆಯುನಿತ್ತು ಅಪ್ರತಿಮ ಬಾಲಕಂಗೆ ಸರ್ವಸಿದ್ಧಿಗೆ ಕವರ್ಮನೆಯೆಸಿಪ್ಪ ಲಾಕುಳವನೆತ್ತಿತ್ತಿ ಈ ಕುಮಾರನ ಭಕ್ತಿ ಜ್ಞಾನ ವೈರಾಗ್ಯಕ್ಕೆ ಣೆಯಪ್ಪ ವೇಷವಾಯ್ತು ಎಂದು ಹರಸಿ ಕಂದಕೇಳ್ ಹಿಂದುಗೊಂಡೇ ಬಂದು ನೀಂ ಹಿಡಿದುದಂ ಹಿಡಿದು ಬಿಟ್ಟುದಂ ಬಿಟ್ಟು ಕಳೆದು ನಿಂದಲ್ಲಿ ನಿಂದು ನಡೆದಡೆ ನಡೆದು ಕರೆದರೋಯೆಂದು ಬೇಡಿತನಿತ್ತು ಕೊಟ್ಟುದಂ ಕೊಂಡು ನೀನೆಂದಂತೆ ಮಾಳ್ಪೆನ್ ಪರ್ವತದೊಳುಳ್ಳ ಲೇಸಲ್ಲವಂ ನಿನ್ನ ಸೊನ್ನಲಿಗೆಯೊಳು ಅಲಂಕರಿಸು ಪುರವ ವಿರಚಿಸು ಧರೆಯೊಳು ಪಲ್ಲವಿಸಿದ ಅಷ್ಟ ಷಷ್ಟಿ ಪೇತ್ರ ಮೊದಲಾದ ಸಲಲ್ಲಿತ ಲಿಂಗವೆನಿತುಂಟವಂ ನಿಲಿಸು ಬಳಿತ ಕೈಲಾಸಗಿರಿಗೆಡೆಯಾಡಿ ಬೇಡಿಕೋ ಹೋಗೆಂದನು.೨೧

ಕೆರೆಯು ಕೆಲಸದಲ್ಲಿ ಸಿದ್ಧೇಂದ್ರನಿರುತಿರೆ ಬಂದು ಹರಿವಿಲ್ಲವೆನುತ ಕರೆಯೋ ಒಡ್ಡರೆಯುನಂ ತೊರೆ ಕೂಲಿಗೊಂಡನೋ ನಾಳೆ ಮಿಕ್ಕುದನಗೆಯು ಬಾರದೆ ಎಂದ ಅಲ್ಲಮ ಪ್ರಭುವಿಗೆ ಉತ್ತರವಿತ್ತು ಒಡ್ಡರ ಗುರು ಅಂದರೆ ಕಲ್ಲು ಮಣ್ಣು ಕೆಲಸ ಅಂದರೆ ಒರಟು ಕಾಮಗಾರಿ ಅಂದರೆ ಪಿ.ಡ.ಬ್ಲ್ಯುಡಿ. ಅಥವಾ ಲೋಕೋಪಯೋಗಿ ಇಲಾಖೆ ಕೆಲಸದ ಗುರು ಎಂದು ಅರ್ಥ. ಒಡ್ಡ ಜನಾಂಗದ ಗುರು ಎಂದು ಅರ್ಥವಲ್ಲ.

ಎಲೆ ಸಿದ್ಧರಾಮಯ್ಯ ನಿನ್ನ ಮನದ ಆಸೆ ಫಲಿಸಿತೆ, ಫಲಿಸಿತು ಇನ್ನೇಳು ನಿನ್ನ ನೆಲೆಗೆ ಪೋಗು ಮಾತಾಪಿತರು ಮುಮ್ಮಲ ಮರುಗುತಿಹರು ಸೊನ್ನಲಿಗೆಯುನು ಲಿಂಗ ಬೀಡಾಗಿ ಸಿರಿಗೆ ತರುವಾಗಿ ಪುಣ್ಯದ ಪುಂಜವಾಗಿ ಮುಕ್ತಿಕ್ಷೇತ್ರವಾಗಿ ಧರ್ಮದ ದಾನಿಯಾಗಿ ಧರೆಯುರಿವೆ ಮೆರೆಯುವಂತೆ ಮಾಡು ಎಂದು ಹರಸಿ ಪರಶಿವ (ಮಲ್ಲಿಕಾರ್ಜುನ) ಕಳುಹಿಸಿದರು.

ನಿತ್ಯತ್ವ ಉತ್ತಮಾಂಗ ಪಡೆದಂತೆ, ಸತ್ಯ ಸಮತೆಯನ್ನು ಭೂಲೋಕಕ್ಕೆ ಹೇಳಲು ಬಂದಂತೆ, ಭೂತದಯೆ ಅವಯವಗಳನ್ನು ಧರಿಸಿದಂತೆ, ಯೋಗಿ ಚಿತ್ತದ ಬೆಳಕು ಗುರು ಸ್ವರೂಪವನ್ನು ಪ್ರತ್ಯಕ್ಷವಾಗಿ ಧರಿಸಿದಂತೆ ಪರತತ್ವ ರೂಪಾದವನು ಸಿದ್ಧರಾಮ, ಲೋಕದ ಕತ್ತಲೆಯನ್ನು ಕಳೆಯಲು ಬಂದ ಶಿವಭಾಸ್ಕರ. 'ಮಲ್ಲಿಕಾರ್ಜುನನೊಬ್ಬನೇ ನಿತ್ಯ, ಅವನೇ ಜ್ಞಾನಮಯ, ಸರ್ವಜ್ಞ ಷಡ್ಗುಣೈಶ್ವರ್ಯ ಅವನನ್ನು

---

೨೦. —ಅದೇ— ೨-೨೯.

೨೧. —ಅದೇ— ೩-೨೪.

ಬೆರಸಲು ಮಲ್ಲಿಕಾರ್ಜುನನ ಕ್ಷೇತ್ರದೊಳು ಇರ್ದು ಇರ್ದಂತೆ ಇರ್ಪಂ ತೋರ್ಪಂ ಎಂದು ಶಿಷ್ಯರಿಗೆ ನಂಬುಗೆಯಿತ್ತು ಕೆರೆಯ ಮಧ್ಯದ ಗೋಪೆಯಲ್ಲಿ ಐಕ್ಯನಾಗುತ್ತಾನೆ.

ಮಲ್ಲಿಕಾರ್ಜುನ ಬೋನಕ್ಕೆ ಸತ್ರಕ್ಕೆ ಮರೆಯದೆ ನಂಬಿ ಬೆಸಕೈದು ಇಕ್ಕದಾ ಬೀಯದಿಂ ದಾನವನು ಉಂಡು ಕಲುಗೆಲಸ ಕೊಟ್ಟಿಗೆ ಕೆರೆಯಲಿ ಅಕ್ಕುಳಿಸದೆ ಅಲಸದೆ ಅಂಜುತ್ತ ಮಾಡಿದವರ್ಗೆ ಸಿಕ್ಕುವುದು ಮುಕುತಿ ಕರತಳಾಮಳಕ ನಿತ್ಯವಿಪ್ಪುದು ಸುಖವು[೨೨] ಎಂದು ಶ್ರದ್ಧೆ, ಭಕ್ತಿ ಸೇವೆಗಳಿಂದ ಮುಕ್ತಿ ಪಡೆದ ಮುಕ್ತರು ಅವರು.

ಸಕಲ ಜೀವಾತ್ಮರಿಗೂ ಲೇಸನೇ ಬಯಸುವ ಅಂತಹ ಕಾಯಕವನ್ನೇ ಮಾಡಿದ ಮಹಾಶರಣ, ತ್ರಿಕಾಲಜ್ಞಾನಿ, ಜಗದ ಗುರು, ಕಾರುಣ್ಯಸಾಗರ ಎರಡನೆಯ ರುದ್ರ, ಸಮಾಜ ಸೇವಾತತ್ಪರರು ಸಿದ್ಧರಾಮರು.

ಒಂಬತ್ತು ಸಂಧಿ ಐದುನೂರ ನಲುವತ್ತೊಂಬತ್ತು ವಾರ್ಧಕ ಷಟ್ಪದಿಗಳ ಈ ಕಾವ್ಯ "ನೆರೆದ ಸೊಗಸಿನ ಸುಗ್ಗಿ, ರಸದ ಮಡು, ಪುಣ್ಯದಾಗರವೆನಿಪ ಸಿದ್ಧರಾಮನ ಕಥೆ ಕ್ಷಿತಿಯೊಳೆಲ್ಲಾ ಜನಂ ಕೇಳ್ದು ಸಿದ್ಧೇಂದ್ರನುನ್ನತ ಮಹಿಮೆಯೆಂಬ ಸುಧೆಯಂ ಸವಿದು ಬದುಕಲೆಂದು ಅತಿ ಕೃತಾರ್ಥದಿಂದೆ ನಿರಪೇಕ್ಷೆಯಿಂದೆ ಶ್ರೀ ಗುರು ಪದವ ಪೊಗಳ್ದನು ಚತುರ ಕವಿರಾಯ ಹಂಪೆಯ ಹರೀಶ್ವರನ ವರಸುತನು ಉಭಯಕವಿ ಕಮಲರವಿ ರಾಘವಾಂಕ ಪಂಡಿತ ಈ ಕಾವ್ಯಮಂ ಪೇಳದ ದೆಸೆಯಿಂ ಧರೆಯೊಳು ಸುವೃಷ್ಟಿ ಸುಫಲ ಕ್ಷೇಮ ಧಾನ್ಯಮಂ ಕರುಣಿಸುಗೆ ಶ್ರೀ ಗುರು ವಿರೂಪಾಕ್ಷನೊಲಿದು[೨೩] ಎಂದು ಮಹಾಕವಿ ರಾಘವಾಂಕ ವಿನಂತಿಸಿದ್ದಾರೆ.

ಉಸಿರು ಪರಿಮಳವಾಗೆ ಬೆಲೆಗೊಂಬ ಹೂವೇಕೆ. (೩–೧೨), ಒಡಲಿಲ್ಲದು ಸುದುಂಟೆ (೮–೬), ಕೋಪಗಿಚ್ಚನೊತ್ತರಿಸುವಂ ಕಲಿ (೪–೩೩), ಜೀವರಂ ದೇವರಂ ಹೋಲಿಸುವರೆ (೯–೪), ತರುಬಲ್ಲುದೇ ತನ್ನ ಫಲ ರುಚಿಯ (೩–೨೬). ತಾನುಂಡು ತನ್ನ ಗುಡ್ಡಂಗೆ ಹಾಳೆಯನಾಂತ (೮–೧೬) ಪೊಡಮಡಲು ದೇಗುಲಂ ಬಿರ್ದುದು (೧–೨೭), ಮಡಕೆ ಉಣಕಲಿತೊಡೆ ಆರು ಜೀವಿಪರು (೮–೨೩), ರಸವೆ ಸಾಧನವಾಗೆ ಧನವೇಕೆ (೩–೧೨), ಲೋಭವಲಗಿಂಗೆ ತೆರಳದವ ಕಲಿ (೪–೩೩), ಲೋಹದ ಸಂಗದಿಂ ಕಿಚ್ಚು ಬಡಿಹಡೆದುದು (೯–೪೧). ಸತಿಗೆ ಸತಿ ಸೋಲ್ತು ಕೂಡಿದ ಕಾಲವುಂಟೆ (೮–೧೮) ಹೀಗೆ ಲೋಕನೀತಿಯನ್ನು ಕಾವ್ಯದಲ್ಲಿ ತಂದಿದ್ದಾರೆ.

---

೨೨. —ಅದೇ— ೯–೫೭.

೨೩. —ಅದೇ— ೯–೬೩.

ಶ್ರೀ ಗುರು ಸಿದ್ಧರಾಮೇಶ್ವರರ ಕಲ್ಪನೆ ಮೂರು ಮನೆಗೊಂದು ಬಾವಿ, ಆರು ಮನೆಗೊಂದು ಶಾಲೆ, ನೂರು ಮನೆಗೊಂದು ಗುಡಿ, ಸಾವಿರ ಮನೆಗೊಂದು ಕೆರೆ. ಲೋಕ ಕಲ್ಯಾಣವೇ ಅವರ ಉಸಿರು ಲೋಕೋಪಯೋಗಿ ಇಲಾಖೆಯ ಜನಕ, ಅದರಿಂದಲೇ ಲೋಕದ ಒಡೆಯ. ಜನನಾಯಕ, ಧರ್ಮಪ್ರಭು, ಜಗದ ಗುರು ಇವರನ್ನು ಸ್ಮರಿಸು ವುದರಿಂದ ಅಳುರದು ಕಿಚ್ಚು ಮುಟ್ಟದು ವಿಷಾಹಿ ಮಹಾ ಗುರುವಿರ್ದ ನಾಡು ಬೆಳೆವುದು, ಬೇಡಿದಂತೆ ಮಳೆಕೊಳ್ವುದು ಎನಿಪ್ಪ ಜಸಕ್ಕೆನೋಂತ ಶ್ರೀ ಗುರು ಸಿದ್ಧರಾಮೇಶ್ವರರಂ ಪೆಸರ್ಗೊಳ್ವುದು ಪುಣ್ಯಕಾರಕವಾದುದು.

ಕನ್ನಡ ರಾಮಾಯಣಗಳು—ಒಂದು ನೋಟ*

ಡಾ|| ಎಸ್. ವಿ. ಪ್ರಭಾವತಿ

ನಮ್ಮ ದೇಶದ ಇತಿಹಾಸಗಳೆಂದೂ ಮಹಾಕಾವ್ಯಗಳೆಂದೂ ಪರಿಗಣಿತವಾದ "ರಾಮಾಯಣ" "ಮಹಾಭಾರತ"ಗಳು ನಮ್ಮ ಸಂಸ್ಕೃತಿಯ ಸಾರ ಸರ್ವಸ್ವವಾಗಿವೆ. ಜಾನಪದ ಮೂಲದಿಂದ ಬಂದ ರಾಮಾಯಣದ ಜೈನ, ಬೌದ್ಧ ಮತ್ತು ವೈದಿಕ ಪರಂಪರೆಗಳು ಕತೆಯಲ್ಲಿ ಭಿನ್ನವಾಗಿವೆ. ಇದುವರೆಗೆ ಪ್ರಪಂಚದಲ್ಲಿ ಒಂದು ಲಕ್ಷದಷ್ಟು ರಾಮಾಯಣಗಳು ಬೇರೆ ಬೇರೆ ದೇಶ ಭಾಷೆಗಳಲ್ಲಿ ಬಂದಿವೆ. ಕನ್ನಡದಲ್ಲಿ ವೈದಿಕ ಪರಂಪರೆಯ ಹತ್ತು ಕಾವ್ಯಗಳು ಮತ್ತು ಜೈನ ಪರಂಪರೆಯ ಒಂಬತ್ತು ಕಾವ್ಯಗಳು ಇವುಗಳಲ್ಲಿ ಮುಖ್ಯವಾಗಿವೆ (ಬೌದ್ಧ ಪರಂಪರೆಯ ಕನ್ನಡ ಕೃತಿಗಳಿಲ್ಲ)

ಕನ್ನಡದ ಮೊದಲ ರಾಮಾಯಣವು ನಾಗಚಂದ್ರನ ಜೈನ ಪರಂಪರೆಯ "ರಾಮ ಚಂದ್ರ ಚರಿತ ಪುರಾಣ"ವಾಗಿದ್ದರೂ ಸದ್ಯಕ್ಕೆ ಇಲ್ಲಿ ಮೊದಲು ವೈದಿಕ ಪರಂಪರೆಯ ಕೃತಿಗಳನ್ನು ಪರಿಗಣಿಸಿ, ನರಹರಿಯ "ತೊರವೆ ರಾಮಾಯಣ"ದ ಬಗ್ಗೆ ಮೊದಲು ಪ್ರಸ್ತಾವಿಸಲಾಗಿದೆ. ಕುಮಾರವ್ಯಾಸನು ವ್ಯಾಸರ ಕತೆಯನ್ನು ಬರೆದಂತೆ ತಾನು ಕುಮಾರ ವಾಲ್ಮೀಕಿಯ ಕತೆ ಬರೆಯುತ್ತಿರುವುದರಿಂದ ತಾನು ಕುಮಾರ ವಾಲ್ಮೀಕಿ ಅವನು ಗದುಗಿನವನಾದ್ದರಿಂದ ಅದು "ಗದುಗಿನ ಭಾರತ". ತಾನು ತೊರವೆ ಊರಿನವನಾದ್ದರಿಂದ ಇದು "ತೊರವೆ ರಾಮಾಯಣ" ಎಂಬುದು ಕವಿಯ ಇಂಗಿತ ವಾಲ್ಮೀಕಿಯ ಕತೆಯನ್ನೇ ಅನುಸರಿಸಿದ್ದರೂ ಉಮಾ ಮಹೇಶ್ವರ ಸಂವಾದ ರೂಪದ ಕತೆಯ ಪ್ರಾರಂಭಕ್ಕೆ ಅಧ್ಯಾತ್ಮ ರಾಮಾಯಣಕ್ಕೂ, ಶಂಭುಕ ವಧೆಯ ಕತೆಯ ರೂಪಾಂತರಕ್ಕೆ ಜೈನ ಕತೆಗೂ ಋಣಿಯಾಗಿದ್ದಾನೆ. ಅಲ್ಲದೇ ಅನೇಕ ಹೊಸ ಅಂಶಗಳೂ ಇಲ್ಲಿ ಸೇರಿವೆ. ತಾಳಿಕೋಟೆ ಯುದ್ಧದ ರೌದ್ರತೆಯು ಯುದ್ಧ ಕಾಂಡದಲ್ಲಿ ಬಂದಿದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಕುಮಾರವ್ಯಾಸನಂತೆ ಕಾವ್ಯದ ಓಜಸ್ಸು ಏರೇರುತ್ತಾ ಹೋಗುವುದಿಲ್ಲವಾದ್ದರಿಂದ ಕಾವ್ಯವು ಮಧ್ಯಮ ತರಗತಿಯ ಗಾಯನದಂತಿದೆ ಎಂದೂ, ಇವನು ಸಾಧಾರಣ ಜನಪ್ರಿಯ ಕವಿ ಎಂದೂ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದರೂ ಜೈನ ಪರಂಪರೆಯ ಕತೆಯಿಂದ

---

*ಬೇಟೆರಾಯ ದೀಕ್ಷಿತ ದತ್ತಿ ಉಪನ್ಯಾಸಕ್ಕಾಗಿ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಮಂಡಿಸಿದ ಪ್ರಬಂಧ.

ಧಕ್ಕೆಗೊಂತ ಮನಸ್ಸಿಗೆ ಮತ್ತೆ ವೈದಿಕ ಪರಂಪರೆಯ ಕತೆಯನ್ನು ತಂದ ಕೀರ್ತಿ ಇವನದು. ಮುಂದೆ ಬಂದ ಯಕ್ಷಗಾನ ಕವಿಗಳ ಮೇಲೆ ಇವನ ಪ್ರಭಾವವಿದ್ದರೂ ಅವರು ಮಾತ್ರ ಕುಮಾರವ್ಯಾಸನನ್ನೂ ಲಕ್ಷ್ಮೀಶನನ್ನೂ ನೆನೆಯುತ್ತಾರಂತೆ.

ಕೀರ್ತನಕಾರರೆಂದೇ ಪ್ರಸಿದ್ಧರಾದ ಕನಕದಾಸರು ಕವಿಗಳೂ ಹೌದು. ಅವರ 'ರಾಮಧಾನ್ಯ ಚರಿತೆ' ಎಂಬ ಷಟ್ಪದಿ ಕಾವ್ಯದಲ್ಲಿ ವನವಾಸದಲ್ಲಿದ್ದ ಧರ್ಮರಾಯನಿಗೆ ಶಾಂಡಿಲ್ಯ ಮುನಿಗಳು ಹೇಳಿದ ಕತೆ ಎಂಬ ಕಲ್ಪನೆಯೊಂದಿಗೆ ಪ್ರಾರಂಭವಾಗುವ ಈ ಕಾವ್ಯದಲ್ಲಿ ವರ್ಗ ಸಂಘರ್ಷದ ಸಂಕೇತವಾಗಿ ರಾಗಿ ಭತ್ತಗಳ ಸಂವಾದವನ್ನು ತಂದಿದ್ದಾರೆ. ರಾಮನು ರಾವಣನನ್ನು ಕೊಂದನಂತರ ವಿಭೀಷಣ, ಹನುಮಂತ ಮೊದಲಾದವರೊಂದಿಗೆ ಅಯೋಧ್ಯೆಗೆ ಹಿಂದಿರುಗಿ ಪಟ್ಟಾಭಿಷಿಕ್ತನಾದ ಮೇಲೆ ಭೋಜನ ಕೂಟದಲ್ಲಿ ಬಗೆ ಬಗೆಯ ಧಾನ್ಯಗಳಿಂದ ಅಡಿಗೆ ಮಾಡಿ ಬಡಿಸಿದಾಗ 'ರಾಗಿ' ಮತ್ತು 'ಭತ್ತ'ಗಳಿಗೆ ಮೇಲಾಟ ಪ್ರಾರಂಭವಾಗುತ್ತದೆ. ರಾಮ ಸೇಡಿದ ಪರೀಕ್ಷೆಯಲ್ಲಿ ರಾಗಿಯೇ ಗೆದ್ದುದರಿಂದ ರಾಘವನು ತನ್ನ ಹೆಸರನ್ನು ರಾಗಿಗೆ ಕೊಡುತ್ತಾನೆ.

ಜೈಮಿನಿ ಮಹರ್ಷಿಗಳು ಸಂಸ್ಕೃತದಲ್ಲಿ ಬರೆದ ಅಶ್ವಮೇಧಿಕ ಪರ್ವ ಭಾಗದ ಕಥಾವಸ್ತುವನ್ನು ಕನ್ನಡ ಷಟ್ಪದೀ ರೂಪಕ್ಕೆ ತಂದವನು ಲಕ್ಷ್ಮೀಶ. ಕುರುಕ್ಷೇತ್ರದ ರಕ್ತಪಾತದ ಕಳಂಕವನ್ನು ತೊಡೆಯಲು ಧರ್ಮರಾಯನು ನಡೆಸಿದ ಅಶ್ವಮೇಧ ಯಾಗದ ಕುದುರೆಯ ಜೊತೆ ಅರ್ಜುನ ಹೊರಡುತ್ತಾನೆ. ದಾರಿಯಲ್ಲಿ ಅವನ ಮಗನೇ ಆದ ಮಣಿಪುರದ ಚಿತ್ರಾಂಗದೆಯ ಮಗನಾದ ಬಭ್ರುವಾಹನನು ಯಾಗದ ಕುದುರೆಯನ್ನು ಕಟ್ಟಿ ಹಾಕಿ ತಂದೆಯೊಂದಿಗೆ ಯುದ್ಧಕ್ಕೆ ನಿಲ್ಲುತ್ತಾನೆ. ಹಿಂದೆಯೇ ತಂದೆ ಮಕ್ಕಳಿಗೆ ಹೀಗೇ ಯುದ್ಧವಾಗಿತ್ತು ಎಂದು ಹೇಳುತ್ತಾ ರಾಮ ಮತ್ತು ಲವ ಕುಶರಿಗೆ ನಡೆದ ಯುದ್ಧದ ಭಾಗವಾಗಿ ಸೀತಾ ಪರಿತ್ಯಾಗದ ಕತೆಯೂ ಬರುತ್ತದೆ. ಶೇಷರಾಮಾಯಣದ ಕತೆಯನ್ನೇ ಅನುಸರಿಸುವ ಲಕ್ಷ್ಮೀಶನ ಕಾವ್ಯದ ಈ ಭಾಗ ಸುಖಾಂತವಾಗಿರುವುದೇ ವಿಶೇಷ. ಏಕೆಂದರೆ ಉತ್ತರ ಕಾಂಡದ ಕತೆ ದುಃಖಾಂತ. ಇದಕ್ಕೆ ಭವಭೂತಿಯ "ಉತ್ತರ ರಾಮ ಚರಿತ"ವೇ ಪ್ರೇರಣೆಯಿರಬೇಕು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಜನಪ್ರಿಯವಾದ, "ಕೌಶಿಕ ರಾಮಾಯಣ"ವೆಂದೇ ಪ್ರಸಿದ್ಧವಾದ ಬತ್ತಲೇಶ್ವರ ವಿರಚಿತ ೪೪ ಸಂಧಿಗಳ ಈ ಕಾವ್ಯವು ಷಟ್ಪದಿಯಲ್ಲಿದೆ. ಅನೇಕ ಜನಜನಿತ ಸಂಗತಿಗಳು, ದಂತ ಕಥೆಗಳು, ಜೈನ ರಾಮಾಯಣದ ಅಂಶಗಳು, ಅದ್ಭುತ ರಾಮಾಯಣದ ಕತೆಗಳು ಇಲ್ಲಿ ಸೇರಿವೆ. ಶಂಭುಕ ವಧೆ ನೇರವಾಗಿ ಜೈನ ಪರಂಪರೆಯಿಂದ ಬಂದರೆ ರಾವಣನು ತಾನು ಸೀತೆಯನ್ನು ಅಪಹರಿಸಿದರೆ ಮಾತ್ರ ರಾಮನು ತನ್ನನ್ನು ಕೊಲ್ಲಲು ಸಾಧ್ಯ ಎಂದು ತಿಳಿಯುವುದು ಆಧ್ಯಾತ್ಮ ರಾಮಾಯಣದಿಂದ ಬಂದಿದೆ. (ತೆಲುಗಿನ ದಶಾನನ ವಿಲಾಸಂ ಎಂಬ ಕಾವ್ಯದಲ್ಲಿಯೂ ಇದೇ ಅಂಶ ವಿದೆಯಂತೆ). ರಾವಣನ ಅರಮನೆಯ ಪಕ್ಕದಲ್ಲಿರುವ ಒಂದು ತಾವರೆಕೊಳಕ್ಕೆ ಯಾರಾ

ದರೂ ಹೋಗಿ ಆ ಹೂವನ್ನು ಕೀಳಿ ಕತ್ತರಿಸಿದ ಹೊರತು ಶತ್ರು ನಾಶವಾಗುವುದಿಲ್ಲ, ರಾವಣನ ಅಮೃತ ಶಕ್ತಿಯ ರಹಸ್ಯ ಅದರಲ್ಲಿದೆ ಎಂಬ ಕಲ್ಪನೆ ಜಾನಪದದ್ದು.

ಪದ್ಮಪುರಾಣ ಸ್ಕಾಂದಪುರಾಣಗಳ ಪ್ರೇರಣೆಯಿಂದ ವಾಲ್ಮೀಕಿ ಕತೆಗೆ, ಕೇಳು ಜನಮೇಜಯ ಪರಂಪರೆಯನ್ನು ಅಳವಡಿಸಿ, ಇದು ಶಿವನು ಪಾರ್ವತಿಗೆ ಹೇಳಿದ ಕತೆ ಮತ್ತು ಪಾರ್ವತಿಯೇ ಸ್ವಯಂ ಸೀತೆ, ರಾಮನು ವಿಷ್ಣು ಎಂಬ ಕಲ್ಪನೆಯಲ್ಲಿ ಹೇಳಿರುವ ಬೃಹತ್ ಗಾತ್ರದ (ಒಟ್ಟು ೧೫,೦೦೦ ಪಂಕ್ತಿಗಳು) ಷಟ್ಪದಿಗ್ರಂಥ. ವೆಂಕಾಮಾತ್ಯನ "ರಾಮಾಯಣ", ಪಟ್ಟಾಭಿಷೇಕವನ್ನು ನಿಲ್ಲಿಸಲು, ರಾಮನಿಗೆ ಅವನ ಜನ್ಮೋದ್ದೇಶವನ್ನು ತಿಳಿಸಲು ನಾರದರೇ ಬರುತ್ತಾರೆ. ರಾಮನಿಗೆ ತಾನು ಸ್ವಯಂ ವಿಷ್ಣು ಎಂದು ಗೊತ್ತು, ಲಕ್ಷ್ಮಣ ಸೀತೆಯರ ಎದುರಿಗೇ ಇವರಿಬ್ಬರ ಚರ್ಚೆ ನಡೆಯುತ್ತದೆ. ಮುಂದಿನದೆಲ್ಲಾ ಗೊತ್ತಿದೆಯಾಗಿ ರಾಮನಿಗೆ ಚಿಂತೆ ಕಳವಳಗಳಿಲ್ಲ. ಇದರಿಂದ ಕಾವ್ಯದ ನಾಟಕೀಯತೆ ಹಾಳಾಗಿದೆ. ದೇವತೆಗಳ ಕಾರ್ಯಕ್ಕೆ ಸ್ವಯಂ ಸರಸ್ವತಿಯೇ ಬಂದು ಮಂಥರೆಗೆ ಸ್ಫೂರ್ತಿ ಕೊಡುತ್ತಾಳೆ. ಸಾಯುತ್ತಿರುವ ವಾಲಿಗೆ ರಾಮನು ಮನುಸ್ಮೃತಿಯನ್ನು ಉಪದೇಶಿಸುತ್ತಾನೆ. ವಾಸ್ತವವಾಗಿ ವಾಲ್ಮೀಕಿಯ ಕತೆ ಇಲ್ಲಿ ಮುರುಟಿ ಹೋಗಿದೆಯಾಗಿ ಈ ಬೃಹತ್ ಗಾತ್ರದ ಕೃತಿ ಹೊಸದೇನೂ ಹೇಳುವುದಿಲ್ಲ.

ಹೊಸ ಗನ್ನಡ ಕಾವ್ಯದ ಮುಂಗೋಳಿ ಎಂದು ಕರೆಯಿಸಿಕೊಂಡ, ಕೆಂಪು ನಾರಾಯಣನ ಅನಂತರ ಬರುವ ಮುದ್ದಣನು ಒಟ್ಟು ಮೂರು ಕಾವ್ಯಗಳನ್ನು ಬರೆದಿದ್ದಾನೆ. ಮೂರರ ವಸ್ತುವೂ ರಾಮಾಯಣವೇ. ಮೊದಲು ಬರೆದುದು "ಅದ್ಭುತ ರಾಮಾಯಣ". ಈ ಗದ್ಯ ಕೃತಿಯು 'ಕಾವ್ಯಮಂಜರಿ' ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಶಾಕ್ತ ಸಂಪ್ರದಾಯದ ರಾಮಾಯಣಕತೆ, ಚೊಕ್ಕಟವಾದ ತಿಳಿಯಾದ ಹಳಗನ್ನಡ. ಇದರ ಅನಂತರ ಪದ್ಯದಲ್ಲಿ ಬರೆಯಬೇಕೆಂಬ ಅಭಿಲಾಷೆಯಿಂದ "ಶ್ರೀ ರಾಮ ಪಟ್ಟಾಭಿಷೇಕಂ" ಎಂಬ ಹೆಸರಿನ ಸುಮಾರು ವಾರ್ಧಕ ಷಟ್ಪದಿಗಳನ್ನು ಬರೆದು ಗುರುಗಳಿಗೆ ತೋರಿಸಿದಾಗ ಅವರು ಗದ್ಯದಲ್ಲಿ ಬರೆದರೇ ಅವನಿಗೆ ಹೊಂದುತ್ತದೆಂದು ಹೇಳಿದ್ದರಿಂದ ಬರೆದಿದ್ದ ಅಷ್ಟೂ ಷಟ್ಪದಿಗಳನ್ನು ಜೋಡಿ ಮಾಡಿ 'ಮಹಾಲಕ್ಷ್ಮಿ' ಎಂಬ ಹೆಸರಿನಿಂದ ಕಾವ್ಯಮಂಜರಿಗೆ ಪ್ರಕಟಣೆಗೆ ಕೊಟ್ಟನು. ರಾಮನು ವನವಾಸದಿಂದ ಮರಳಿ ಬಂದು ಪಟ್ಟಾಭಿಷಿಕ್ತನಾದುದು ಇದರ ಕತೆ. ಅನಂತರ ಗದ್ಯದಲ್ಲಿ 'ಶ್ರೀ ರಾಮಾಶ್ವಮೇಧಂ' ಬರೆದು ಮುದ್ದಣ ಎಂಬ ಹೆಸರಿನಿಂದ 'ಕಾವ್ಯ ಮಂಜರಿ'ಯ ಬದಲಾದ ರೂಪದ ಪತ್ರಿಕೆ 'ಕಾವ್ಯ ಕಲಾನಿಧಿ'ಗೆ ಕೊಟ್ಟನು. ಇದು ಇವನ ಕೊನೆಯ ಹಾಗೂ ಹೆಚ್ಚು ಪರಿಪಕ್ವ ಕೃತಿ. ಪದ್ಮಪುರಾಣದ ಶೇಷರಾಮಾಯಣವೇ ಇದಕ್ಕೆ ಆಧಾರ.

ಗೀತನಾಟಕಗಳನ್ನು ರಚಿಸುವುದರಲ್ಲಿ ಸಿದ್ಧಹಸ್ತರೆಂದೇ ಪ್ರಖ್ಯಾತರಾದ ಡಾ|| ಪು.ತಿ.ನ. ಅವರ ಎಲ್ಲಾ ಗೀತ ನಾಟಕಗಳನ್ನೂ "ಸಮಗ್ರಗೇಯ ನಾಟಕಗಳು" ಎಂಬ ಹೆಸರಿನಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಪುತಿನ ಟ್ರಸ್ಟ್ ಹೊರ ತಂದಿದೆ. ಇದರಲ್ಲಿ ಇಪ್ಪತ್ತಮೂರು ನಾಟಕಗಳಿದ್ದು ಅವುಗಳಲ್ಲಿ ಏಳು, ರಾಮಾಯಣವನ್ನು ವಸ್ತುವಾಗಿ ಹೊಂದಿವೆ. "ಪುತಿನ ಅವರ ಆರಾಧ್ಯ ದೈವ ಕೃಷ್ಣನಾದರೂ ರಾಮಾಯಣದ ಪ್ರಸಂಗಗಳನ್ನು ಆಧಾರವಾಗಿ ಹೊಂದಿದ ಗೀತನಾಟಕ ಗಳೇ ಜಾಸ್ತಿ" ಎಂಬ ಮುನ್ನುಡಿಯ ದೊರೆಸ್ವಾಮಿ ಅಯ್ಯಂಗಾರರ ಮಾತಿನಲ್ಲಿ ಉತ್ಪ್ರೇಕ್ಷೆ ಯಿದ್ದರೂ, ಸೀತಾಪರಿಣಯ, ಹರಿಣಾಭಿಸರಣ, ಶಬರಿ, ಶ್ರೀರಾಮ ಪಟ್ಟಾಭಿಷೇಕ, ರಾವಣ ಬಂದು ಹೋದದನ್ನು ಕುರಿತು, ರಾಮೋದಯ, ಅಹಲ್ಯಾ—ಈ ಸರಣಿಯನ್ನು ಗಮನಿಸಿದಾಗ ರಾಮಾಯಣದ ಪ್ರಮುಖ ಘಟ್ಟಗಳ ಮೇಲೆ ಅವರು ಕೈ ಆಡಿಸಿರುವುದು ಕಂಡು ಬರುತ್ತದೆ. ಭರತ ಮತ್ತು ಕೈಕೆ ಬಗ್ಗೆ ಮಾತ್ರ ಬರೆಯಲಾಗಲಿಲ್ಲ ಎಂಬ ಕೊರಗು ಅವರಿಗಿತ್ತು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಕ್ಷೀಣಿಸುತ್ತಿರುವ ಭಾರತೀಯ ಸಂಸ್ಕೃತಿಯ ಅಂತಸ್ಸತ್ವವನ್ನು ರಾಮಾಯಣವು ಎತ್ತಿ ಹಿಡಿಯುತ್ತದೆ, ಹಿಡಿಯಬಲ್ಲುದು ಎನ್ನುವ ಹಂಬಲ, ನಂಬಿಕೆ ಅವರಿಗಿತ್ತು. ಇದನ್ನು ಶ್ರೀರಾಮ ಪಟ್ಟಾಭಿ ಷೇಕದ ಮೊದಲ ಮಾತಿನಲ್ಲಿ ಅವರು ತೋಡಿಕೊಂಡಿದ್ದಾರೆ. ಈ ಏಳು ನಾಟಕಗಳಲ್ಲಿ 'ಅಹಲ್ಯೆ' ಬಿಟ್ಟರೆ ಉಳಿದುವೆಲ್ಲಾ ಚಿಕ್ಕ ನಾಟಕಗಳು. ರಾಮಾಯಣದಲ್ಲಿ ಇವಕ್ಕಿರುವ ವಿಸ್ತಾರ ಇಲ್ಲಿಲ್ಲ. ಆದಷ್ಟು ಸಾಂಪ್ರದಾಯಿಕ ಚೌಕಟ್ಟಿನಲ್ಲಿಯೇ ಅಹಲ್ಯೆಯನ್ನು ಸಮ ರ್ಥಿಸಿ ಆಧುನಿಕ ದೃಷ್ಟಿಕೋನವನ್ನು ಕೊಡುವ ಪ್ರಯತ್ನ ಅಹಲ್ಯೆಯಲ್ಲಿದೆ. ವಾಲ್ಮೀಕಿ ರಾಮಾಯಣದಲ್ಲಿ ಮತ್ತು ಪುತಿನ ನಾಟಕದಲ್ಲಿ ಗಾಳಿಯಾಗಿ ಅದೃಶ್ಯಳಾಗಿರುವ ಅಹಲ್ಯೆ ಕುವೆಂಪು ಕೃತಿಯಲ್ಲಿ ಕಲ್ಲಾದುದು ವಿಶೇಷ.

"ಆದಿಕವಿ ವಾಲ್ಮೀಕಿ"ಯಲ್ಲೇ ಮಾಸ್ತಿಯವರು ವಾಲ್ಮೀಕಿ ರಾಮಾಯಣದ ಬಗೆಗಿನ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಅಲ್ಲಿ ಅವರು ಎತ್ತಿರುವ ಸಂದೇಹ ಗಳಿಗೆಲ್ಲಾ ಇಲ್ಲಿ ಕಾವ್ಯರೂಪದ ಪರಿಹಾರ ನೀಡಿದ್ದಾರೆ. ಇದು "ಶ್ರೀ ರಾಮ ಪಟ್ಟಾಭಿ ಷೇಕವಾದರೂ ಇಡೀ ರಾಮಾಯಣದ ಕತೆ ಸ್ಮರಣ ತಂತ್ರದಲ್ಲಿ ಇಲ್ಲಿ ಬಿಚ್ಚಿಕೊಳ್ಳುತ್ತದೆ. ತಾವು ಹರೆಯದಲ್ಲಿ ಸಂಕಲ್ಪಿಸಿ, ಇಳಿ ವಯಸ್ಸಿನಲ್ಲಿ ಆರಂಭಿಸಿ. ಮುಪ್ಪಿನಲ್ಲಿ ಮಂಗಳಕ್ಕೆ ತಂದ ಕೃತಿ ಎಂದು ಅವರು ಹೇಳಿಕೊಂಡಿದ್ದರೂ ಕಾವ್ಯದಲ್ಲಿ ಈ ಅಂಶವು ಎದ್ದು ತೋರದೇ, ವಾಲ್ಮೀಕಿ ಪರಂಪರೆಯಿಂದ ಅವರು ಮಾಡಿಕೊಂಡಿರುವ ಬದಲಾವಣೆಗಳು ಎದ್ದು ತೋರುತ್ತವೆ. ಕುತೂಹಲಕ್ಕೆ ಪಟ್ಟಿ ಮಾಡುವುದಾದರೆ—ಲಕ್ಷ್ಮಣ ಭರತನಿಗಿಂತ ಹಿರಿಯ, ರಾಮನನ್ನು ಕಾಡಿಗೆ ಕಳಿಸುವ ಮೊದಲೂ ಭರತನಿಗೆ ತಾಯಿಯ ಬಗ್ಗೆ ಅಸಮಾಧಾನವಿತ್ತು, ಸುಮಂತ್ರನಿಗೊಬ್ಬ ಮೊಮ್ಮಗನಿದ್ದ, ರಾಮ ಕಾಡಿಗೆ ಹೊರ ಟಾಗ ಹುಟ್ಟಿದವನು, ರಾಮ ಹಿಂದಿರುಗಿ ಹದಿನಾಲ್ಕು ವರ್ಷದ ಹುಡುಗನಿಗೆ ನಾನಾ

ಕರಣ ಮಾಡಿದ. ಹನುಮಂತ ಮೊದಲಾದವರು ಕಪಿಗಳಲ್ಲ, ಕಪಿಧ್ವಜರು ; ಖರನೊಂದಿಗೆ ಬಂದವರು ಹದಿನಾಲ್ಕೆಜನ, ಹದಿನಾಲ್ಕು ಸಾವಿರವಲ್ಲ. ಜಟಾಯು, ಜಾಂಬವಂತ, ಕಬಂಧ—ಇವರೆಲ್ಲಾ ಕೇವಲ ಮನುಷ್ಯರು, ದುಂದುಭಿಯ ದೇಹವನ್ನು ರಾಮನು ನೂರುಯೋಜನ ದೂರ ಹಾರಿಸಿದ್ದು ಸುಳ್ಳು. ಹಾರಿಸಿದ್ದರೂ ಯೋಜನ ಪದಕ್ಕೆ ಈಗಿರುವ ಅರ್ಥ ಬೇಡ, ಹನುಮಂತ ಸಮುದ್ರ ದಾಟಿದ್ದು ಹಾರಿಕೊಂಡಲ್ಲ ಈಜಿಕೊಂಡು, ಸೇತುವೆ ಕಟ್ಟಿದ್ದು, ಪಾಯಸ ಕೊಟ್ಟಿದ್ದು, ಸೀತೆ ಅಗ್ನಿ ಹೊಕ್ಕಿದ್ದು ಎಲ್ಲವೂ ಬರೀ ಕಲ್ಪನೆ. ಅಗ್ನಿ ಪ್ರವೇಶವೊಂದು ದಿವ್ಯ, ರಾಮ ಸೀತೆ ಹಿಂದಿರುಗಿದ್ದು ಪುಷ್ಪಕ ವಿಮಾನದಲ್ಲಿ ಅಲ್ಲ, ನಡೆದುಕೊಂಡು ಇತ್ಯಾದಿ ಇತ್ಯಾದಿ "ನಾನು ನಂಬುವ ಸಂಗತಿಗಳನ್ನು ಇಟ್ಟುಕೊಂಡು ನಂಬದ ಸಂಗತಿಗಳನ್ನು ಬಿಟ್ಟು ರಚಿಸುವ ಕಾವ್ಯ ಕೆಲವರಿಗೆ ಇಷ್ಟವಾಗಬಹುದು, ಕೆಲವರಿಗೆ ಆಗದಿರಬಹುದು" ಎಂದು ಮುನ್ನುಡಿಯಲ್ಲೇ ಹೇಳಿಕೊಂಡಿರುವ ಮಾಸ್ತಿಯವರು ಸ್ಪಷ್ಟವಾಗಿ ದೈವತ್ವದ ಕಲ್ಪನೆಯನ್ನೂ, ದೇವತೆಗಳ ಮಧ್ಯ ಪ್ರವೇಶವನ್ನೂ, ಪವಾಡಗಳನ್ನೂ, ಅಸಹಜ ಘಟನೆಗಳನ್ನೂ ಕೈ ಬಿಟ್ಟಿದ್ದಾರೆ. "ಸನಾತನ ಧರ್ಮದಲ್ಲಿ ದೇವರ ಕಲ್ಪನೆ ಹೋರಟೆಯಾಗಿ ಅನರ್ಥವಾಗಿದೆ. ಧರ್ಮದ ಜೀವಂತ ಸೂತ್ರ ಕಾಣೆಯಾಗಿದೆ. ಹೀಗೆ ಕಾಣುವ ದಾರಿಯಲ್ಲಿ ಈ ವಿನಮ್ರ ಪ್ರಯತ್ನ" ಎನ್ನುವ ಮಾಸ್ತಿಯವರಿಗೆ ಈಗಿರುವ ರಾಮಾಯಣ ವಾಲ್ಮೀಕಿ ಬರೆದ ರೂಪದಲ್ಲಿಲ್ಲ ಎಂಬ ಕಾಳಜಿಯಿದೆ. ವಾಲ್ಮೀಕಿಯ ಕತೆಗೊಂದು ಹೊಸ ರೂಪ ಕೊಡುವ ಈ ಪ್ರಯತ್ನ 'ಕುವೆಂಪು' ಅವರ ಕಾವ್ಯಕ್ಕೆ ಸರಿಗಟ್ಟಲಿಲ್ಲವೇಕೆ ಎಂಬುದು ಯೋಚಿಸಬೇಕಾದ ವಿಷಯವಾಗಿದೆ.

ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ" ಬಗೆಗೆ ಬಂದಿರುವಷ್ಟು ವಿಮರ್ಶೆ ಅವರ ಉಳಿದ ಯಾವ ಕೃತಿಯ ಬಗ್ಗೆಯೂ ಬಂದಿಲ್ಲ, ಅಷ್ಟೇ ಏಕೆ ? ಹೊಸಗನ್ನಡ ಸಾಹಿತ್ಯದ ಯಾವ ಗ್ರಂಥದ ಬಗ್ಗೆಯೂ ಇಷ್ಟು ವಿಪುಲವಾದ, ವೈವಿಧ್ಯಮಯವಾದ ಲೇಖನ ರಾಶಿ ಬಂದಿರುವುದು ನನ್ನ ಗಮನದಲ್ಲಿಲ್ಲ. ಮಹಾಕಾವ್ಯಗಳ ಕಾಲ ಮುಗಿಯಿತು ಎನ್ನುವರ ಮಾತನ್ನು ಸುಳ್ಳು ಮಾಡಿ ಬಂದ ಮೊದಲ ಕಾವ್ಯ, ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ, ಮೊದಲ ಪಂಪ ಪ್ರಶಸ್ತಿ ತಂದಿತ್ತ ಕಾವ್ಯ ವಾಲ್ಮೀಕಿಯ ಕತೆಗೆ "ಮರು ಹುಟ್ಟು ಪಡೆವಂತೆ" ಆಧುನಿಕ ಚಿಂತನೆಯ ಕೊಡುಗೆ ಕೊಡಿಸಿದ ಕಾವ್ಯ, ಇದು ಬರೀ ರಾಮಾಯಣವಲ್ಲ, ರಾಮಾಯಣ ದರ್ಶನ, ಕುವೆಂಪು ಅವರ ದರ್ಶನ. ವಿಶ್ವಪ್ರೇಮವನ್ನು ಸಾರಿದ ಕವಿ, ತಮ್ಮ ಬದುಕು, ಮಲೆನಾಡು, ಅಭ್ಯಾಸ, ಅಧ್ಯಯನ, ರಾಮಕೃಷ್ಣಾಶ್ರಮದ ಒಡನಾಟ ಮತ್ತು ಪಾಶ್ಚಾತ್ಯ ಚಿಂತನ- ಇವೆಲ್ಲವನ್ನೂ ಮೇಳೈಸಿ ಎರಕ ಹೊಯ್ದ ಕೃತಿ. ಇಲ್ಲಿ ರಾವಣ ಬರೀ ಸಾಯುವುದಿಲ್ಲ. ರಾವಣತ್ವವೂ ರಾಮತ್ವದೊಡನೆ ಒಂದಾಗುತ್ತದೆ. ಇಲ್ಲಿ ಅಗ್ನಿಪರೀಕ್ಷೆ ಬರೀ ಸೀತೆಗಲ್ಲ,

ರಾಮನಿಗೂ. ಇಲ್ಲಿ ಮಂಥರೆ ಕೆಟ್ಟವಳಲ್ಲ, ಧೈರ್ಯಲಕ್ಷ್ಮಿ, ಇಲ್ಲಿ ಊರ್ಮಿಳೆ ತಿರಸ್ಕೃತಳಲ್ಲ, ತಪಸ್ವಿನಿ ಕವಿಯ ಯುದ್ಧ ವಿರೋಧಿ ಮನೋಭಾವವು ಯುದ್ಧಕಾಂಡದ ಪಕ್ಕಿರನ್ನರ ಸಂಭಾಷಣೆಯಲ್ಲಿ ಸೊಗಸಾಗಿ ವ್ಯಕ್ತವಾಗಿದೆ. "ಪಾಪಿಗುಂ ಉದ್ಧಾರಮಿಹುದು ಸೃಷ್ಟಿಯ ಮಹತ್ ವ್ಯೂಹ ರಚನೆಯಲಿ" ಎಂಬ ಘೋಷಣೆಯೊಂದಿಗೆ ಹೊರಟ ಕವಿಯ ಪಾವನ ಮನೋಗಂಗೆಯಲ್ಲಿ ಎಲ್ಲ ಪಾತ್ರಗಳೂ ಉದ್ಧಾರವಾಗಿವೆ. ಹೋಮರಗೆ, ವರ್ಜಿಲಗೆ, ಡಾಂಟೆ ಮೇಣ್ ಮಿಲ್ಟನಗೆ, ಪಿರ್ದೂಸಿ ಕಾಳಿದಾಸಾದ್ಯರಿಗೆ.... ಮಣಿಯುವ ಕವಿ ಇಡೀ ವಿಶ್ವ ಸಾಹಿತ್ಯದಿಂದ ಸ್ಫೂರ್ತಿ ಪಡೆದಿದ್ದಾರೆ. ಉತ್ತರಕಾಂಡದ ಸೀತಾ ಪರಿತ್ಯಾಗದ ಕತೆ ಇಲ್ಲದಿರುವುದೂ ಈ ಕಾವ್ಯದ ಒಂದು "ಕೊರತೆ" ಏಕೆಂದರೆ ಆ ಕತೆಯಲ್ಲಿ ರಾಮನನ್ನು ವೈಭವೀಕರಿಸುವುದು ಯಾರಿಗೂ ಸಾಧ್ಯವಿಲ್ಲ. ಇತ್ತೀಚೆಗೆ "ಕನ್ನಡ ಮತ್ತು ಸಂಸ್ಕೃತಿ ಇಲಾಖೆ"ಯು ಶ್ರೀ ರಾಮಾಯಣ ದರ್ಶನಂ ಹಸ್ತಪ್ರತಿ ಆವೃತ್ತಿಯನ್ನು ಬಿಡುಗಡೆ ಮಾಡಿದೆ. ಗ್ರಂಥ ರಚನೆಯ ಕಾಲಕ್ಕೆ (೧೯೩೮) ನಡೆಯುತ್ತಿದ್ದ ಸಾಮಾಜಿಕ ರಾಜಕೀಯ ಚಟವಟಿಕೆಗಳನ್ನು ಕುವೆಂಪು ತಮ್ಮ ಪದ್ಯದ ಸಾಲುಗಳ ಎಡ ಬಲಕ್ಕೆ ಟಿಪ್ಪಣಿಯಂತೆ ಬರೆದಿದ್ದು ಈ ಪ್ರಕಟಣೆಯು ಒಂದು ಕುತೂಹಲದ ಓದಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ "ಶ್ರೀ ರಾಮಾಯಣ ದರ್ಶನಂ" ಒಂದು ಅಪೂರ್ವ ಕೃತಿ. ಇಲ್ಲಿಯೂ ದೋಷಗಳಿಲ್ಲವೆಂದಲ್ಲ, ಹಾಗೆ ನೋಡಿದರೆ ಯಾವುದು ಪರಿಪೂರ್ಣ ? ನನ್ನ ಅಭಿಪ್ರಾಯದಲ್ಲಿ ಕುವೆಂಪು ಇದನ್ನು ಬರೆದ ಮೇಲೆ ಇನ್ನು ಯಾರೂ ಹೊಸಗನ್ನಡದಲ್ಲಿ, ಯಾವ ಪ್ರಕಾರದಲ್ಲಿಯಾಗಲೀ ಮತ್ತೆ ರಾಮಾಯಣವನ್ನು ಬರೆಯಬೇಕಾದ ಅಗತ್ಯವಿಲ್ಲ, ನಾನು ಹೀಗೆ ಬರೆಯುತ್ತಿರುವಾಗಲೇ ಕಾನಾಡಿ ನಾರಾಯಣ ಎಂಬವರು 'ಕಾಂಡ' ಎಂಬ ಕಾದಂಬರಿ ಬರೆದಿದ್ದು ಇದು ರಾಮಾಯಣವನ್ನು ಬರೀ ತಮಾಷೆಯಾಗಿ ನೋಡುವ ಪ್ರಯತ್ನದ್ದಾಗಿದೆ ಎಂದು ತಿಳಿಯಿತು. ಉದಾಹರಣೆಗೆ ಜನಕನು ಉಳಿದವರು ಬಿಲ್ಲೆತ್ತುವಾಗ ಕೆಳಗೆ ಆಯಸ್ಕಾಂತವನ್ನಿಟ್ಟದ್ದು ರಾಮನು ಎತ್ತುವಾಗ ಅದನ್ನು ತೆಗೆದು ಬಿಡುತ್ತಾನಂತೆ ! ಡಿ.ವಿ.ಜಿ.ಯವರ 'ಶ್ರೀ' 'ರಾಮಪರೀಕ್ಷಣಂ' ನಲ್ಲಿ ಅಹಲ್ಯೆ, ಮಂಡೋದರಿ, ತಾರೆ, ಸೀತಾ, ಹನುಮಂತ ಮತ್ತು ಅಯೋಧ್ಯೆಯ ಜನ ರಾಮನನ್ನು ಪ್ರಶ್ನಿಸುವ ರೂಪಕಗಳಿವೆ. ಇದು ರಾಮಾಯಣದ ವಿಮರ್ಶೆಯಲ್ಲ, ಪರಿ ಈಕ್ಷಣಂ, ಸರಿಯಾಗಿ ನೋಡಿಕೊಳ್ಳುವುದು ಎಂದು ಜಿ. ಪಿ. ರಾಜರತ್ನಂ ರಾಮನ ಉತ್ತರಗಳನ್ನು ಸಮರ್ಥಿಸಿದ್ದಾರೆ.

ಮುಳಿಯ ತಿಮ್ಮಪ್ಪಯ್ಯನವರ 'ನವನೀತ ರಾಮಾಯಣ' ಹೆಳವನ ಕಟ್ಟೆ ಗಿರಿಯಮ್ಮನ 'ಸೀತಾಕಲ್ಯಾಣ' ಸೋಸಲೆ ಅಯ್ಯಾಶಾಸ್ತ್ರಿಗಳ 'ಶೇಷ ರಾಮಾಯಣ' ಹೆಚ್. ವಿ. ಸಾವಿತ್ರಮ್ಮನವರ 'ರಾಮ ಸೀತೆ ರಾವಣ' ಮತ್ತು 'ವಿಮುಕ್ತೆ' ; ಸಿ.ಎನ್. ಜಯಲಕ್ಷ್ಮೀದೇವಿಯವರ 'ದಶರಥ', ಕಾಶಿ ವಿಶ್ವನಾಥ ಶೆಟ್ಟರ 'ದೇವಿ ಕೈಕೇಯಿ' ಹೀಗೆ ಹೆಸರಿಸಿ ಮುಗಿಸಲಾಗದ ಕಾವ್ಯಗಳು ಹುಟ್ಟಿವೆ. ಹುಟ್ಟುತ್ತಲೇ ಇರುತ್ತವೆ. ಇವು

ವೈದಿಕ ಪರಂಪರೆಗೆ ನೀಡಿದ ನೀಡುತ್ತಿರುವ ಕೊಡುಗೆ ಗಮನಾರ್ಹ. ಹಾಗೆಯೇ ಸೃಜನಶೀಲ ಕೃತಿಗಳಲ್ಲದಿದ್ದರೂ ಕನ್ನಡಕ್ಕೆ ಅನುವಾದವಾಗಿರುವ ವಾಲ್ಮೀಕಿ ರಾಮಾಯಣದ ಜೊತೆ ಜೊತೆಗೇ ಹುಟ್ಟಿದ ಅದ್ಭುತ ರಾಮಾಯಣ, ಶಾಕ್ತ ರಾಮಾಯಣ, ಆನಂದ ರಾಮಾಯಣ, ಅಧ್ಯಾತ್ಮ ರಾಮಾಯಣ—ಇವು ರಾಮ, ಸೀತೆ, ರಾವಣರನ್ನು ಸಂಕೇತದಂತೆಭಾವಿಸಿ. ಹೊಸ ಹೊಸ ಅರ್ಥ ಹೊರಡಿಸುವುದನ್ನು ಓದಿಯೇ ಅನುಭವಿಸಬೇಕು !

ಜಾನಪದ ಮೂಲದಿಂದಲೇ ವೈದಿಕ ಪರಂಪರೆಯ ಜೊತೆ ಜೊತೆಗೆ ಕವಲೊಡೆದು ಬೆಳೆದುವು ಜೈನ ಪರಂಪರೆ ಮತ್ತು ಬೌದ್ಧ ಪರಂಪರೆಯ ರಾಮಾಯಣಗಳು. ಜೈನ ಪರಂಪರೆಯಲ್ಲಿಯೇ ಗುಣಭದ್ರನ ಕತೆ (ಸಂಸ್ಕೃತ) ಮತ್ತು ವಿಮಲ ಸೂರಿಯ ಕತೆ (ಪ್ರಾಕೃತ) ಎಂದು ಎರಡು ಭಾಗವಿದೆ. ಗುಣಭದ್ರನ ಕಥೆ ವಾಲ್ಮೀಕಿ ಕತೆಗೆ ಹತ್ತಿರವಾಗಿದ್ದು ಹೀಗಿದೆ—ರತ್ನಪುರದ ರಾಜನ ಮಗ ಚಂದ್ರಚೂಳ ಮತ್ತು ಮಂತ್ರಿಯ ಮಗ ವಿಜಯ—ಇವರು ಕುಬೇರನ ಮಗಳನ್ನು ಮೋಹಿಸಿದ ತಪ್ಪಿಗೆ ದೇಶಭ್ರಷ್ಟರಾಗಿ ಮಹಾಬಲನೆಂಬ ಋಷಿಯಿಂದ ದೀಕ್ಷೆ ಪಡೆದು ಮೂರು ಜನ್ಮ ಕಳೆದ ಬಳಿಕ ದಶರಥನಿಗೆ ರಾಮ ಲಕ್ಷ್ಮಣರಾಗಿ ಹುಟ್ಟುತ್ತಾರೆ. ಅನಂತರ ಭರತ ಶತ್ರುಘ್ನರ ಜನನ, ಇತ್ತ ಮಿಥಿಲೆಯ ಜನಕ ಮತ್ತು ವಸುಧಾ ದೇವಿಗೆ ಸೀತೆಯ ಜನನ. ಲಂಕಾಧಿಪತಿ ರಾವಣ ಮಣಿ ಮತಿಯನ್ನು ಮೋಹಿಸಲು ಅವಳು ಸಂಕಲ್ಪಿಸಿ ಸತ್ತು ಮಂಡೋದರಿಯ ಮಗಳಾಗಿ ಹುಟ್ಟುತ್ತಾಳೆ. ಅಪಶಕುನಗಳಿಗೆ ಹೆದರಿ ಮಗುವನ್ನು ಪೆಟ್ಟಿಗೆಯಲ್ಲಿಟ್ಟು ಅದು ಜನಕನಿಗೆ ದೊರೆಯುತ್ತದೆ. (ಇಲ್ಲಿ ಗೊಂದಲವಿದೆ) ರಾಮ ಸೀತೆಯರ ವಿವಾಹವಾಗುತ್ತದೆ. ನಾರದರಿಂದ ಪ್ರಚೋದಿತನಾದ ರಾವಣ ಶೂರ್ಪನಖಿಯನ್ನು ಮುದುಕಿಯ ವೇಷದಲ್ಲಿ ಸೀತೆಯ ಬಳಿ ಕಳಿಸುತ್ತಾನೆ. ಅದರಿಂದ ಪ್ರಯೋಜನವಾಗದಿರಲು ಮಾರೀಚನನ್ನು ಮಣಿಹರಣ ಪೋತವನ್ನಾಗಿ ಮಾಡಿ ಸುಳಿಸುತ್ತಾನೆ. ರಾಮನು ಅದನ್ನಟ್ಟಿ ಹೋದಾಗ ರಾವಣನು ಮಾಯಾ ವಿದ್ಯೆಯಿಂದ ರಾಮನ ಆಕಾರದಲ್ಲಿ ಸೀತೆಯ ಬಳಿ ಬಂದು ಪುಷ್ಪಕ ವಿಮಾನವನ್ನೇ ಪಲ್ಲಕ್ಕಿಯಾಗಿಸಿ ಕರೆದೊಯ್ಯುತ್ತಾನೆ. ಅನಂತರ ನಿಜ ವಿಷಯ ತಿಳಿಸಿ ಸೀತೆಯ ಪ್ರೇಮ ಯಾಚಿಸುತ್ತಾನೆ. ಅವಳು ಒಪ್ಪದೇ ನಿರಶನ ವ್ರತ ಹಿಡಿಯುತ್ತಾಳೆ. ರಾಮ ಲಕ್ಷ್ಮಣರು ಸುಗ್ರೀವ ಹನುಮಂತರ ಸಖ್ಯ ಬೆಳಸಿ ವಾಲಿಯನ್ನು ಲಕ್ಷ್ಮಣ ಕೊಂದು ಹನುಮಂತನು ಸೀತೆಯನ್ನು ಹುಡುಕಿ ಅನಂತರ ಲಂಕಾ ದಹನ. ರಾವಣನಿಂದ ಸೀತೆಯ ಮಾಯಾ ಶಿರಸ್ಸಿನ ಹನನ, ರಾಮನ ವ್ಯಥೆ, ಲಕ್ಷ್ಮಣನಿಂದ ರಾವಣನ ಸಾವು, ವಾರಣಾಸಿಗೆ ಹಿಂದಿರುಗಿದ ರಾಮ ಸೀತೆಯರು ತಪಸ್ಸಿಗೆ ಹೋದರೆ ಲಕ್ಷ್ಮಣ ಪಂಕ ಪ್ರಭೆ ಎಂಬ ನರಕಕ್ಕೆ ಹೋಗುತ್ತಾನೆ. ಗುಣಭದ್ರನ ಕತೆಯನ್ನನುಸರಿಸಿ ಕನ್ನಡದಲ್ಲಿ ಚಾವುಂಡರಾಯನು "ತ್ರಿಸಷ್ಟಿ ಲಕ್ಷಣ ಮಹಾ ಪುರಾಣ"ವನ್ನೂ ನಾಗರಾಜನು "ಪುಣ್ಯಾಸ್ರವ"ವನ್ನೂ ಬರೆದಿದ್ದಾರೆ. ವಿಮಲಸೂರಿಯ ಕತೆ

ಇದಕ್ಕಿಂತ ಭಿನ್ನವಾಗಿದ್ದು ಹೀಗಿದೆ—ಇಲ್ಲಿ ದಶರಥನಿಗೆ ನಾಲ್ವರು ಹೆಂಡಿರು ಅಪರಾಜಿತೆ, (ಕೌಸಲ್ಯೆ) ಸುಮಿತ್ರೆ, (ಲಕ್ಷ್ಮಣನ ತಾಯಿ) ಸುಪ್ರಭೆ, (ಶತ್ರುಘ್ನನ ತಾಯಿ) ಮತ್ತು ಕೈಕೆ. ದಶರಥನಿಗೆ ಪಾಯಸ ದೊರೆತುದರಿಂದ ಮಕ್ಕಳಾಗುವುದಿಲ್ಲ, ಸಹಜವಾಗಿಯೇ ಆಗುತ್ತವೆ. ಸೀತೆ ನೇಗಿಲಿನಲ್ಲಿ ಸಿಕ್ಕಿದವಳಲ್ಲ, ಜನಕನ ಮಗಳು, ಅವಳಿಗೆ ಪ್ರಭಾಮಂಡಲನೆಂಬ ಅಣ್ಣನಿದ್ದ ಹುಟ್ಟಿದಾಗಲೇ ಅವನನ್ನು ರಥನೂಪುರ ಚಕ್ರವಾಳಪುರದ ಅರಸು ಅಪಹರಿಸಿದ್ದ. ಕಪಿಗಳ್ಯಾರೂ ವಾಸ್ತವವಾಗಿ ಕಪಿಗಳಲ್ಲ, ಕಪಿಧ್ವಜರು ಅಷ್ಟೇ. ರಾವಣನಿಗೆ ಹತ್ತು ತಲೆ ಇಲ್ಲ, ಹುಟ್ಟಿದ ಮಗುವಿನ ಮುಂದೆ ಒಂಭತ್ತು ಮುಖದ ರತ್ನ ಹಿಡಿದಾಗ ಪ್ರತಿಬಿಂಬಿಸಿ ಹಾಗೆ ಹೆಸರಾಯಿತು, ಮಾರೀಚನಿಲ್ಲ, ಚಿನ್ನದ ಜಿಂಕೆಯಿಲ್ಲ. ಅದಕ್ಕೆ ಬದಲಾಗಿ ರಾವಣನ ತಂಗಿ ಚಂದ್ರನಖಿಯ ಮಗನಾದ ಶಂಭುಕನು ಸೂರ್ಯಹಾಸ ಎಂಬ ಖಡ್ಗಕ್ಕಾಗಿ ತಪಸ್ಸು ಮಾಡುತ್ತಿದ್ದಾಗ ಅವನ ಸುತ್ತಲೂ ಹುತ್ತ ಬೆಳೆಯುತ್ತದೆ. ದೇವತೆಗಳು ಖಡ್ಗವನ್ನು ಹುತ್ತದ ಮೇಲಿಟ್ಟು ಹೋಗುತ್ತಾರೆ. ಅಲ್ಲಿಗೆ ಬಂದ ಲಕ್ಷ್ಮಣನಿಗೆ ಇದು ತಿಳಿಯದೇ ಅವನು ಖಡ್ಗವನ್ನೆತ್ತಿ ಬೀಸಿದಾಗ ಹುತ್ತದೊಳಗಿದ್ದ ಶಂಭುಕನ ತಲೆ ಕತ್ತರಿಸಿ ಬೀಳುತ್ತದೆ. ಇದರಿಂದ ಕೋಪಗೊಂಡ ಚಂದ್ರನಖಿ ಸೀತೆಯನ್ನು ಅಪಹರಿಸುವಂತೆ ರಾವಣನನ್ನು ಕಳಿಸುತ್ತಾಳೆ. ಈ ಮಧ್ಯೆ ಖರದೂಷಣರೊಂದಿಗೆ ಯುದ್ಧಕ್ಕೆ ಹೋಗಿರುವ ಲಕ್ಷ್ಮಣನು ತನ್ನ ಕೈ ಸೋತರೆ ಸಿಂಹನಾದ ಮಾಡುವೆನೆಂದೂ, ಸಹಾಯಕ್ಕೆ ಬರಬೇಕೆಂದೂ ರಾಮನಿಗೆ ತಿಳಿಸಿ ಹೋಗಿರುವುದನ್ನು ಅವಲೋಕಿನಿ ಎಂಬ ವಿದ್ಯೆಯಿಂದ ತಿಳಿದ ರಾವಣನು ಸಿಂಹನಾದ ಮಾಡುವಂತೆ ಅವಲೋಕಿನಿಗೆ ಹೇಳಿ, ಅದನ್ನು ಕೇಳಿ ರಾಮನು ಹೋದ ನಂತರ ಸೀತೆಯನ್ನಪಹರಿಸುತ್ತಾನೆ. ರಾಮನು ಚರಮ ದೇಹಿಯಾದ್ದರಿಂದ ಹಿಂಸೆ ಮಾಡುವಂತಿಲ್ಲ, ಲಕ್ಷ್ಮಣನೇ ರಾವಣನನ್ನು ಕೊಲ್ಲಬೇಕು, ಅಲ್ಲದೇ ರಾಮ ಲಕ್ಷ್ಮಣ ರಾವಣರು ೨೦ನೇ ತೀರ್ಥಂಕರನಾದ ಮುನಿಸುವ್ರತನ ಕಾಲದ ೮ನೇ ಬಲದೇವ, ವಾಸುದೇವ, ಪ್ರತಿ ವಾಸುದೇವರಾಗಿದ್ದು ತ್ರಿಷಷ್ಠಿ ಶಲಾಕಾ ಪುರುಷರಲ್ಲಿ ಇವರು ಸೇರುತ್ತಾರೆ. ಅಷ್ಟೇ ಅಲ್ಲ. ಕಾಡಿಗೆ ಹೊರಟ ರಾಮ ಲಕ್ಷ್ಮಣರು ದಾರಿಯುದ್ದಕ್ಕೂ ಅನೇಕ ಮದುವೆ ಮಾಡಿಕೊಳ್ಳುತ್ತಾರೆ. ಸ್ವತಃ ಹನುಮಂತನೇ ನೂರಾರು ಹುಡುಗಿಯರನ್ನು ಮದುವೆಯಾಗುತ್ತಾನೆ ! ಇದನ್ನನುಸರಿಸಿ ಕನ್ನಡದಲ್ಲಿ ನಾಗಚಂದ್ರ, ಕುಮುದೇಂದು, ದೇವಪ್ಪಕವಿ, ದೇವಚಂದ್ರ, ಚಂದ್ರಸಾಗರವರ್ಣಿ, ಶಿಶುಮಾಯಣ—ಇವರು ಕಾವ್ಯ ರಚಿಸಿದ್ದಾರೆ. ಬೌದ್ಧ ಪರಂಪರೆಯ ಕತೆಯೂ ಒಂದಿದೆ–ದಶರಥ ಜಾತಕ'ದ ಪ್ರಕಾರ ರಾಮ ಲಕ್ಷ್ಮಣ ಸೀತೆಯರು ಅಣ್ಣ ತಂಗಿಯರು, ತನ್ನ ಹೆಂಡತಿ ಕೈಕೆಗೆ ಎಂದೋ ಕೊಟ್ಟಿದ್ದ ವರದಿಂದಾಗಿ ರಾಮ ಲಕ್ಷ್ಮಣ ಸೀತೆಯರನ್ನು ದಶರಥ ಕಾಡಿಗೆ ಕಳಿಸುತ್ತಾನೆ. ಅವಧಿ ಮುಗಿಸಿ ಕಾಡಿನಿಂದ ಹಿಂದಿರುಗಿದ ರಾಮ, ಸೀತೆಯನ್ನು ಮದುವೆಯಾಗಿ ಪಟ್ಟಾಭಿಷಿಕ್ತನಾಗುತ್ತಾನೆ. ಆದರೆ 'ಸಂಬುಲ ಜಾತಕ'ದಲ್ಲಿ ಶೂರ್ಪನಖಿ ರಾಮನನ್ನು ಮೋಹಿಸಿ ಕಿವಿ ಮೂಗು ಕಳೆದುಕೊಂಡ ಕತೆಯಿದೆ.

ಹೀಗೆ ಈ ಜಾತಕ ಕತೆಗಳು ಪರಸ್ಪರ ಭಿನ್ನವಾಗಿವೆ. ಕನ್ನಡದಲ್ಲಂತೂ ಬೌದ್ಧ ಪರಂಪರೆಯ ಕತೆಯನ್ನೊಳಗೊಂಡ ರಾಮಾಯಣ ಕಾವ್ಯ ಬಂದಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಅಡಿ ಟಿಪ್ಪಣಿ (ಓದುಗರ ಅವಗಾಹನೆಗಾಗಿ)

ವಿಮಲಸೂರಿಯನ್ನನುಸರಿಸಿ ಕಾವ್ಯ ರಚನೆ ಮಾಡಿದ ಕವಿಗಳ ಪಟ್ಟಿಯಲ್ಲಿ ದೇವಪ್ಪ ಕವಿಯ ಹೆಸರು ಬಂದಿರುವುದು ತಪ್ಪು. ಪ್ರೊ|| ಡಿ. ಎಲ್. ಎನ್. ಮುಂತಾದವರು ಆ ಕಾವ್ಯವನ್ನು ನೋಡದೆ, ಊಹೆಯ ಮೇರೆಗೆ ಮಾಡಿರುವ ತಪ್ಪನ್ನೇ ಡಾ|| ಎಸ್. ವಿ. ಪ್ರಭಾವತಿಯವರು ಈ ಲೇಖನದಲ್ಲಿ ವ್ಯಕ್ತ ಪಡಿಸಿದ್ದಾರೆ. ದೇವಪ್ಪ ಕವಿ ಕೃತ 'ರಾಮವಿಜಯ 'ಎಂಬ ಸಾಂಗತ್ಯದ ಮಹಾಕಾವ್ಯ. ಪ್ರೊ|| ಟಿ. ಕೇಶವಭಟ್ಟ ಅವರಿಂದ ಸಂಪಾದಿತವಾಗಿ, 1969ರಲ್ಲಿ ಭಾರತೀಯ ಜ್ಞಾನಪೀಠದ ಮೂರ್ತಿದೇವೀ ಗ್ರಂಥ ಮಾಲೆಯ ಕನ್ನಡದ ಪ್ರಥಮ ಗ್ರಂಥವಾಗಿ ಪ್ರಕಾಶಿತವಾಗಿದೆ. ಇದು ಗುಣಭದ್ರಾಚಾರ್ಯರ ಪರಂಪರೆಗೆ ಸೇರಿದ್ದು ಕಥಾವಸ್ತು ವ್ಯತ್ಯಾಸಗಳಿಂದ ಕೂಡಿರುತ್ತದೆ.

—ಸಂ.

ಟೀಕೆ ಟಿಪ್ಪಣಿ

ಶ್ರೀ ವೈಷ್ಣವ ಕೀರ್ತನಕಾರ ವೆಂಕಟವರದಾರ್ಯ ಸರಗೂರು ಅವರನ್ನು ಕುರಿತು

ಜಿ. ಅಶ್ವತ್ಥನಾರಾಯಣ

ಶ್ರೀ ನಾ. ಗೀತಾಚಾರ್ಯರು ವಿಶಿಷ್ಟಾದ್ವೈತದ ಕೀರ್ತನ ಪರಂಪರೆಯನ್ನು ಕುರಿತು ಹಲವಾರು ಲೇಖನ—ಪುಸ್ತಕಗಳನ್ನು ಪ್ರಕಟಿಸಿದ್ದು ದಾಸಸಾಹಿತ್ಯದ ಇನ್ನೊಂದು ಮುಖದ ಪರಿಚಯನ್ನು ಜನತೆಗೆ ನೀಡಿದ್ದಾರೆ. ಈ ಬಗ್ಗೆ ಇತಿಹಾಸ ದರ್ಶನ ಸಂಪುಟ 14/1999 (ಪುಟ 205) ಗ್ರಂಥದಲ್ಲಿ ಕೀರ್ತನ ಸಾಹಿತ್ಯದಲ್ಲಿ ಶ್ರೀ ವೈಷ್ಣವ ಪರಂಪರೆ ಹೊಸ ಶೋಧ ಎಂಬ ಸಮೀಕ್ಷಾ ಲೇಖನನನ್ನು ಬರೆದಿದ್ದಾರೆ. ಅದರಲ್ಲಿ "ವೆಂಕಟ ವರದಾರ್ಯ ಸರಗೂರು (ಕ್ರಿ.ಶ.ಸು. 1890) ಅವರ ಬಗ್ಗೆ ಬರೆಯುತ್ತಾ "ಇವರ ಹೆಸರಿನಲ್ಲಿ ಶ್ರೀನಿವಾಸ ಸಂಕೀರ್ತನಂ" ಎಂಬ ಒಂದು ಗ್ರಂಥದ ಉಲ್ಲೇಖವಿದ್ದು ಇದರಲ್ಲಿ 102 ಕೀರ್ತನೆಗಳಿವೆ. 1924ರಲ್ಲಿ ನಂಜನಗೂಡಿನ ಸನ್ಮಾರ್ಗದರ್ಶಿ ಕಾರ್ಯಾಲಯದಲ್ಲಿ ಇದು ಮುದ್ರಿತವಾಗಿದೆ ಎಂದು ತಿಳಿದು ಬರುತ್ತದೆ. ಇವರೂ ಶ್ರೀ ವೈಷ್ಣವ ಕೀರ್ತನಕಾರರೇ ಆಗಿದ್ದು ಇವರ ಬಗ್ಗೆ ಹೆಚ್ಚಿನ ಮಾಹಿತಿಗಳು ಸದ್ಯಕ್ಕೆ ಲಭ್ಯವಾಗಿಲ್ಲ. ಇವರ ಕೃತಿಗಳ ಅಂಕಿತವೂ ಗೋಚರವಾಗಿಲ್ಲ" ಎಂದಿದ್ದಾರೆ. ಈ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸುವುದು ಈ ಟಿಪ್ಪಣಿಯ ಉದ್ದೇಶವಾಗಿದೆ.

"1923 ಜುಲೈ—ಡಿಸೆಂಬರ್ (ಸಂಪುಟ—1 ಸಂಚಿಕೆ 13) ಸನ್ಮಾರ್ಗದರ್ಶಿ ಮಾಸ ಪತ್ರಿಕೆಯಲ್ಲಿ (ನಂಜನಗೂಡು ತಿರುಮಲಾಂಬಾ ಅವರು ನಂಜನಗೂಡಿನಿಂದ ಸತೀ ಹಿತೈಷಿಣೀ ಗ್ರಂಥಮಾಲೆ ಅಂಗವಾಗಿ ಈ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು) ಇದರಲ್ಲಿ ಗ್ರಂಥಮಾಲಿಕಾ ಸಂಖ್ಯೆ-6 ಎಂದು ಶ್ರೀನಿವಾಸ ಸಂಕೀರ್ತನಂ (ಪೂರ್ವಭಾಗ) ದಿವಂಗತ ಸರಗೂರು ವೆಂಕಟವರದಾರ್ಯ ಕೃತ (೧ನೇ ಮುದ್ರಣ) ಎಂದಿದೆ. ಈ ರಕ್ಷಾಪತ್ರದ ಹಿಂಭಾಗದಲ್ಲಿ ಲೇಖಕರು ಸುಮಾರು 30 ವರುಷಗಳ ಮೇಲಾಗಿರಬಹುದು ಕಾಲವಾಗಿ ಎಂದಿದ್ದಾರೆ.

ಇದರಂತೆ ಸುಮಾರು 1893ರಲ್ಲಿ ವರದಾರ್ಯರು ನಿಧನರಾದರೆಂದು ಊಹಿಸ ಬಹುದು. ಕನಿಷ್ಟಪಕ್ಷ 40 ವರ್ಷ ಬದುಕಿದ್ದರು ಎಂದು ಊಹಿಸಿದ್ದು 19ನೇ ಶತ

ಮಾನದ ಉತ್ತರಾರ್ಧದಲ್ಲಿ ಇದ್ದ ಪ್ರಮುಖ ಸಾಹಿತಿಗಳಾಗಿದ್ದರು ಎನ್ನಬಹುದು. ಲೇಖಕರ ಸ್ಥಳ ಚಾಮರಾಜನಗರದ ತಾಲ್ಲೂಕು ಸರಗೂರು ಗ್ರಾಮ. ಇವರು ಕವಿಗಳೂ ಭಗವದ್ಭಕ್ತರೂ ಸರಸಿಗಳೂ ಆಗಿದ್ದರು ಇವರಿಗೆ ಔರಸ ಸಂತತಿಯಿಲ್ಲ. ದತ್ತು ಪುತ್ರ ಸಂತತಿಯವರು—ಎಂದರೆ ಇವರ ದತ್ತಪುತ್ರರ ಪುತ್ರ (ಪೌತ್ರ)ರೂ ಅವರ ಪತ್ನೀ ಪುತ್ರ ಪುತ್ರಿಯರೂ ಇರುವರು. ಭಾಗವತಾದ ಶ್ರೀಕೃಷ್ಣಲೀಲಾ (ನಂದಿನಿ ಮಾಸಪತ್ರಿಕೆಯಲ್ಲಿ ಪ್ರಕಟಿತ) ಕೃತಿ ರಚಿಸಿದ ಶ್ರೀ ರಾಮಾನುಜಾಚಾರ್ಯ ಎಂಬವರು ಇವರ ಸೋದರರಾಗಿದ್ದರು. ಇವರು ಇಂತಹ ಕೀರ್ತನೆಗಳನ್ನು ಸುಮಾರು 500ಕ್ಕೆ ಮೇಲೆ ಮಾಡಿರಬಹುದೆಂದು ಗೊತ್ತಾಗಿದೆ. ಆದರೆ ನಮಗೆ ಆ ಗ್ರಾಮದ ಮಹಾ ಜನರ ಶ್ರೀ ವರದಾರ್ಯರ ಶಿಷ್ಯ ಪ್ರಶಿಷ್ಯ ವರ್ಗಕ್ಕೆ ಸೇರಿದ ಅಭಿಮಾನಿಗಳ ಕಡೆಯಿಂದ ದೊರೆತಿರುವಷ್ಟನ್ನು ಮಾತ್ರ ಈಗ ಪ್ರಕಟಿಸಲಾಗಿದೆ ಎಂದು ಹೇಳಲಾಗಿದೆ. ಈಗಲೂ ಪ್ರಯತ್ನಿಸಿದರೆ ಸರಗೂರು ಸುತ್ತಮುತ್ತಲ ಪ್ರದೇಶದಲ್ಲಿ ಕೆಲವು ಕೀರ್ತನೆಗಳು ಸಿಗಬಹುದು. 1. ಗೋಪಿಕಾಗೀತೆ, 2. ತಪತೀ ಕಲ್ಯಾಣ, 3. ವ್ಯಾಘ್ರಾಚಲ ಮಹಾತ್ಮೆ, 4. ರಾಧಾಕೃಷ್ಣ ವಿಲಾಸ ಎಂಬ ಯಕ್ಷಗಾನಗಳನ್ನು ಪ್ರಬಂಧಗಳನ್ನು ಲೇಖಕರು ಬರೆದಿದ್ದಾರೆ. ಅದನ್ನು ಪ್ರಕಟಿಸುವ ಸಂಕಲ್ಪವಿದೆ ಎಂದು ಪ್ರಕಾಶಕಿ ತಿರುಮಲಾಂಬಾ ಹೇಳಿದ್ದಾರೆ.

ದೊರೆತ 102 ಕೀರ್ತನೆಗಳು ಪ್ರಕಟವಾಗಿದ್ದು ಅವುಗಳಲ್ಲಿ 'ವರದ ವಿಠಲ' ಅಂಕಿತವಿದೆ. ಆದ್ದರಿಂದ ಅಂಕಿತ ತಿಳಿಯದು ಎಂಬ ಪ್ರಶ್ನೆಗೆ ಉತ್ತರ ದೊರೆತಂತಾಗಿದೆ.

ಕೀರ್ತನೆಗಳನ್ನು ಸ್ಥೂಲವಾಗಿ ಗಮನಿಸಿದಾಗ ಲೇಖಕರು ದಾಸ ಸಾಹಿತ್ಯವನ್ನು ಸ್ಥೂಲವಾಗಿ ಗಮನಿಸಿದಾಗ, ಲೇಖಕರು ದಾಸ ಸಾಹಿತ್ಯವನ್ನು ಪುರಂದರ ಇತ್ಯಾದಿ ಹರಿದಾಸರ ಕೀರ್ತನೆಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆಂದು ತಿಳಿಯುತ್ತದೆ. ಉದಾಹರಣೆಗೆ ಕಂಡೆನಾ ಕನಸಿನಲಿ ಗೋವಿಂದನಾ ಎಂಬ ಕೀರ್ತನೆಯ ಅನುಕರಣವಾಗಿ ಕನಸಿನಲಿ ಕಂಡೆನಾ—ಶ್ರೀನಿವಾಸನಾ ಎಂಬ ಕೀರ್ತನೆ ರಚಿಸಿದ್ದಾರೆ. ಸಂಸ್ಕೃತದಲ್ಲಿ ಅದ್ವಿತೀಯ ಪಾಂಡಿತ್ಯವಿದ್ದುದರಿಂದ ಸಂಪೂರ್ಣ ಸಂಸ್ಕೃತಮಯ ಕೀರ್ತನೆಗಳನ್ನು ರಚಿಸಿದ್ದಾರೆ ಮಾಮವ ಮೃಗರಿಪು ಗಿರಿರಮಣ-ಮಹಿತ ಗುಣಾಭರಣ ಕೀರ್ತನೆಯನ್ನು ಗಮನಿಸಬಹುದು. ಒಟ್ಟಿನಲ್ಲಿ ಶ್ರೀ ವೈಷ್ಣವದಾಸರ ಕೀರ್ತನ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿ ವಿಶಿಷ್ಟ ಸ್ಥಾನ ಗಳಿಸಿರುವ ವರದಾರ್ಯರ ಬಗ್ಗೆ ವಿಶೇಷ ಅಧ್ಯಯನ ನಡೆಯಬೇಕಾಗಿದೆ.

ಸನ್ಮಾರ್ಗದರ್ಶಿ ಮಾಸ ಪತ್ರಿಕೆಯ ಸಂಚಿಕೆಗಳನ್ನು ದೊರಕಿಸಿಕೊಟ್ಟ ಬೆಂಗಳೂರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಶ್ರೀ ವೆಂಕಟರಮಣನ್ ಮತ್ತು ಸುಬ್ಬರಾವ್ ಅವರಿಗೆ ಕೃತಜ್ಞನಾಗಿದ್ದೇನೆ.

ತಳಂಗರೆಯ ಶಾಸನ-ಒಂದು ಮರು ಚಿಂತನೆ

ಡಾ|| ಉಪ್ಪಂಗಳ ರಾಮ ಭಟ್ಟ

ಕಾಲದ ಹೊಡೆತಕ್ಕೆ ಸಿಕ್ಕಿ ಕರ್ನಾಟಕದಿಂದ ಹೊರಕ್ಕೆ ತಳ್ಳಲ್ಪಟ್ಟ ಕಾಸರಗೋಡು ಇಂದಿಗೂ ಕನ್ನಡದ ಗಂಡುಮೆಟ್ಟಿನ ನೆಲವೆಂಬುದನ್ನು ಸಾಬೀತುಪಡಿಸುವ ಅಳಿಯಲಾರದ ದಾಖಲೆ ಅಲ್ಲಿನ ತಳಂಗರೆ ಶಾಸನ. ಚಂದ್ರಗಿರಿ ನದಿಯ ತೀರದಲ್ಲಿ ಕಾಸರಗೋಡು ಪಟ್ಟಣದ ಅಂಚಿನಲ್ಲಿ ಕನ್ನಡ ಭಾಷೆ ಲಿಪಿಗಳಲ್ಲಿ ಸುಮಾರು ಹತ್ತನೆಯ ಶತಮಾನದ ಈ ಶಾಸನ ನೆಲೆಗೊಂಡಿದೆ. ಕೇರಳೀಯ ಭಾಷೆ ಸಂಸ್ಕೃತಿಗಳ ಆಕ್ರಮಣವಾಗುತ್ತಿದ್ದರೂ ನಾನು ಕದಲಲಾರೆನೆಂಬ ದಿಟ್ಟತನದಿಂದ ನೆಟ್ಟಗೆ ನಿಂತಿದೆ ಈ ಶಿಲಾಶಾಸನವಿಲ್ಲಿ.

ಆರಂಭದಲ್ಲಿ ಸಂಸ್ಕೃತ ಶ್ಲೋಕಗಳಲ್ಲಿ ಜಯಸಿಂಹ ದೊರೆಯ ಪೂರ್ವಜರನ್ನು ಹೆಸರಿಸಿ ಆವನನ್ನು "ಕ್ಷತ್ರೈಕ ಚೂಡಾಮಣಿ" ಎಂದು ಹೊಗಳಲಾಗಿದೆ. ಮೋಚಬ್ಬರಸಿಗೆ ಕನ್ಯಾಶುಲ್ಕವಾಗಿ ಪುತ್ತೂರಿನ ಮುರಕಲ್ಲಿನ ನೆಲವನ್ನು ದಾನವಾಗಿತ್ತುದಲ್ಲದೆ ಇದಕ್ಕೆ ಜೋಗವ್ವೆಯ ಹೆಣ್ಣು ಮಕ್ಕಳ ಸಂತಾನವೇ ಉತ್ತರಾಧಿಕಾರಿ ಎಂದೂ ಹೆಣ್ಣು ಮಕ್ಕಳಿಲ್ಲದಿದ್ದರೆ ಗಂಡು ಮಕ್ಕಳಿಗೆ ಹೋಗಬಹುದೆಂದೂ ವಿಧಿಸುತ್ತದೆ. ಶ್ರೀ ಎನ್. ಲಕ್ಷ್ಮೀನಾರಾಯಣ ರಾವ್ ಮತ್ತು ಡಿ. ಎಲ್. ನರಸಿಂಹಾಚಾರ್ ಅವರು ಸಂಪಾದಿಸಿದ ಈ ಶಾಸನವು ಎ. ಆರ್. ಐ. ಇಯ 1952-53ರ ವರದಿಯಲ್ಲಿ ಪ್ರಕಟವಾಗಿದೆ. ಇದನ್ನು ಡಾ|| ಕೆ. ವಿ. ರಮೇಶ ಮತ್ತು ಎಂ. ಜಯರಾಮ ಶರ್ಮಾ ಅವರು "ತುಳುನಾಡಿನ ಶಾಸನಗಳು" ಗ್ರಂಥದಲ್ಲೂ ಪ್ರಕಟಿಸಿದ್ದಾರೆ.

ಈ ಶಾಸನದ ಮುಖ್ಯ ಮೂರು ವಿಚಾರಗಳು ಇಲ್ಲಿ ಪರಿಶೀಲನಾರ್ಹವಾಗಿವೆ.

1. ಜಯಸಿಂಹ ಯಾರೆಂಬುದನ್ನು ಗುರುತಿಸುವುದು.
2. ದಾನವಾಗಿತ್ತ ಭೂಮಿ ಯಾವುದು ?
3. ಮಾತೃಪ್ರಧಾನ ಕುಟುಂಬ ಪದ್ಧತಿ.

ಜಯಸಿಂಹ—ಇವನು ಈ ಪ್ರದೇಶದ ಆಳರಸನಾಗಿದ್ದು ಆತನ ಕುಟುಂಬಸ್ಥರು ಈ ತಳಂಗರೆಯಲ್ಲಿ ವಾಸಿಸುತ್ತಿದ್ದಿರಬೇಕು. ರಾಜನ ಪ್ರಧಾನ ವಸತಿ ಕುಂಬಳೆಯಾದರೂ

ಇಲ್ಲಿ ಒಂದು ಶಾಖೆ ಇದ್ದಿರಬಹುದೆಂದು ತೋರುತ್ತದೆ. ಈಗಲೂ ಭೂತದ ಗುಡಿಯಿದ್ದು ದೇವಸ್ಥಾನವಿದ್ದ ಸೂಚನೆಯೂ ಇದೆ. "ಕುಂಬಳೆಯ ಧರ್ಮಸಿಂಹಾಸನ"ವೆಂದು ಬೇರೆಡೆಗಳಲ್ಲಿ ಉಲ್ಲೇಖವಿರುವುದರಿಂದ ಕುಂಬಳೆಯೇ ರಾಜಧಾನಿಯಾಗಿತ್ತು. ಜಯಸಿಂಹ ಎಂಬ ಹೆಸರು ತಳಂಗರೆಯ, ಹತ್ತನೆಯ ಶತಮಾನದ ಶಾಸನದಲ್ಲಿ ಮಾತ್ರವಲ್ಲದೆ ಅನಂತಪುರದ ಸುಮಾರು ಹದಿನೈದನೆಯ ಶತಮಾನದ ತುಳು ಶಾಸನದಲ್ಲೂ ಕಂಡುಬರುತ್ತದೆ. ಕಾಸರಗೋಡಿನಿಂದ ಸುಮಾರು ಎಂಟು ಮೈಲು ಉತ್ತರಕ್ಕೆ ಅನಂತಪುರ ಕ್ಷೇತ್ರವಿದ್ದು ಈ ರಾಜಮನೆತನದ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿತ್ತು. ಡಾ|| ಕೆ. ವಿ. ರಮೇಶ ಅವರು ಈ ಶಾಸನವನ್ನು ಸಂಪಾದಿಸಿದ್ದಾರೆ. ಇದರಲ್ಲಿ ತುಳು ಭಾಷೆಯಲ್ಲಿ ಗೌರವದಿಂದ ರಾಜನನ್ನು "ಜಯಸಿಂಹದೇವೇರ್" ಜಯಸಿಂಹದೇವರು ಎಂದು ಕರೆಯಲಾಗಿದೆ. ಈ ಎರಡು ದಾಖಲೆಗಳಲ್ಲಿ ಮಾತ್ರ 'ಜಯಸಿಂಹ' ಎಂಬ ಹೆಸರು ಕಂಡುಬರುತ್ತದೆ. ಬೇರೆ ಬೇರೆ ಸಮಯದ ಬೇರೆ ಬೇರೆ ದಾಖಲೆಗಳಲ್ಲೆಲ್ಲಾ "ಕವಿಸಿಂಹ" ಎಂಬ ಹೆಸರೇ ಕಂಡುಬರುತ್ತದೆ. ಕೆಲವೊಮ್ಮೆ ಪ್ರಧಾನ ಹೆಸರಾಗಿ ಕೆಲವೊಮ್ಮೆ ಪ್ರಧಾನ ಹೆಸರಿನ ಕೊನೆಯಲ್ಲಿ ವಂಶನಾಮ (Dynastic name) ವಾಗಿ ಕಂಡು ಬರುತ್ತದೆ. ಉದಾಹರಣೆ "ಬನವಾಸೆ ಪುರವರಾಧೀಶ್ವರ ಸೂರ್ಯ ಕುಲತಿಲಕ ಸಾಹಸದ ಸಂಜಯ ಸತ್ಯ ರತ್ನಾಕರ ಸರಸ್ವತೀ ಕರ್ಣಕುಂಡಲಾಭರಣ ಶ್ರೀ ಮದನೇಶ್ವರ ಪಾದಪದ್ಮಾರಾಧಕರುಮಪ್ಪ ವೀರ ಪ್ರತಾಪರಾದ ಕುಂಬಳೆ ಧರ್ಮಸಿಂಹಾಸನದ ಸೋಮನಾಥರ್ಯರಾದ ಕವಿಸಿಂಹರ್ಯರು" (ಗಣಪತಿರಾವ್ ಐಗಳ್-"ಮಂಜೇಶ್ವರ" ಪುಟ 23, 1924, 1708 ಕ್ರಿ.ಶ.ದ ಶಾಸನದ ಆಧಾರದಿಂದ). ಬನವಾಸಿಯ ಕದಂಬರಾಜ ವಂಶಕ್ಕೆ ಸೇರಿದವನಾಗಿ ಕುಂಬಳೆ ರಾಜನನ್ನು ಇಲ್ಲಿ ಹೇಳಲಾಗಿದೆ. ಸ್ಕಾಂದ ಪುರಾಣದ ಖಂಡವ ಭಾಗವೆಂದು ಹೇಳಲಾದ 'ವೇಲಾಪುರ ಮಾಹಾತ್ಮ್ಯ'ದಲ್ಲಿ ಕವಿಸಿಂಹನ ಕಥೆಯನ್ನು ಹೇಳಲಾಗಿದೆ. ಪುರಾಣೋಕ್ತವಾದ ಚಂದ್ರಾಂಗದ, ಸುಶೀಲೆ ಮೊದಲಾದ ಹೆಸರುಗಳು ಇತಿಹಾಸದಲ್ಲಿ ಕಂಡುಬರುವುದಿಲ್ಲ. ಇಲ್ಲಿ ಹೇಳಿರುವ ಕಥೆ ಸುಮಾರು 5, 6ನೇ ಕ್ರಿ.ಶಕಕ್ಕೆ ಸಂಬಂಧಿಸಿದ್ದಾಗಿರಬಹುದೆಂದು ಊಹಿಸಲಾಗಿದೆ. ('ಗಡಿನಾಡು'-ಡಾ|| ಉಪ್ಪಂಗಳ ರಾಮಭಟ್ಟ, 1994,) ಕ್ರಿಸ್ತಶಕ ಹದಿಮೂರನೆಯ ಶತಮಾನದ ನಾರಾಯಣ ಪಂಡಿತನು ಬರೆದ 'ಸುಮಧ್ವ ವಿಜಯ'ವೆಂಬ ಸಂಸ್ಕೃತ ಕಾವ್ಯದಲ್ಲಿ 'ಕವಿಸಿಂಹ' ಎಂಬ ಹೆಸರನ್ನು 'ಕಬೆಸಿಂಹ' ಎಂದು ಪರಿವರ್ತಿಸಿ ಸಂಸ್ಕೃತದಲ್ಲಿ 'ಸ್ತಂಭವಿಶಿಷ್ಟಸಿಂಹ' ಎಂದು ಅನುವಾದಿಸಲಾಗಿದೆ. (ಕಬೆ-ತುಳು, ಕಂಬ, ಸಂಸ್ಕೃತ-ಸ್ತಂಭ) ಈ ಅರಸು ಮನೆತನದ ವಂಶಸ್ಥರು ಇನ್ನೂ ಕುಂಬಳೆ ಸಮೀಪದ 'ಕೊಡ್ಯಮ್ಮೆ' ಎಂಬಲ್ಲಿ ನೆಲಸಿದ್ದಾರೆ. ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ, ಶ್ರೀ ಕೃಷ್ಣಯ್ಯ ಬಲ್ಲಾಳ (69 ವ.) ಎಂಬವರನ್ನು ಕೇಳಿದಾಗ (4-5-1986) ಅವರ ಹಿಂದಿನವರು ಶಿವವರ್ಮರಾಜ ಕವಿಸಿಂಹರ್ಯರಾಗಿದ್ದು ಮೊದಲಿನ

ಎಲ್ಲಾ ಬಿರುದುಗಳನ್ನೂ ಧರಿಸಿದ್ದು, ತೊಂಬತ್ತು ವರ್ಷಕಾಲ ಬದುಕಿದ್ದರೆಂದು ತಿಳಿಸಿದರು.

ಇದರಿಂದ ತಿಳಿದು ಬರುವುದೇನೆಂದರೆ ರಾಜರಿಗೆ ಅವರದೇ ವ್ಯಕ್ತಿನಾಮವಿದ್ದು ಅದರ ಕೊನೆಯಲ್ಲಿ ಕುಲನಾಮವಾಗಿ 'ಕವಿಸಿಂಹ' ಎಂಬ ಹೆಸರನ್ನು ಸೇರಿಸುತ್ತಿದ್ದರು. ಕೆಲವೊಮ್ಮೆ ವ್ಯಕ್ತಿನಾಮವನ್ನು ಮಾತ್ರ, ಕೆಲವೊಮ್ಮೆ ಕುಲನಾಮವನ್ನು ಮಾತ್ರ ಹೇಳುವುದಿತ್ತು. ಮೇಲಿನ ಎರಡು ಶಾಸನಗಳಲ್ಲಿ ವ್ಯಕ್ತಿನಾಮವನ್ನು ಮಾತ್ರ ಹೇಳಿ ಕುಲನಾಮವನ್ನು ಕೈಬಿಡಲಾಗಿದೆ. ಜಯಸಿಂಹ ಕವಿಸಿಂಹ ಹೆಸರುಗಳಲ್ಲಿ 'ಸಿಂಹ' ಪುನರಾವರ್ತಿತವಾಗುವುದರಿಂದ ಹೀಗಾಗಿರಲೂಬಹುದು.

ಸ್ಥಳ : ದಾನವಾಗಿತ್ತ ಸ್ಥಳ ಪುತ್ತೂರು, ಕಾಸರಗೋಡಿನಿಂದ ಮೈಲು ನಾಲ್ಕೈದು ಉತ್ತರಕ್ಕಿರುವ ಮೊಗ್ರಾಲು ಗ್ರಾಮದಲ್ಲಿರುವ ಪುತ್ತೂರಲ್ಲದೆ ಬೇರೆ ಅಲ್ಲ. ಶಾಸನದಲ್ಲಿ ಹೇಳಿರುವ ವಿವರಗಳು ಈ ಸ್ಥಳಕ್ಕೆ ಸರಿಯಾಗಿ ಹೊಂದುತ್ತವೆ. ಮುರಕಲ್ಲಿನಿಂದ ಕೂಡಿದ ಈ ನೆಲವನ್ನು 'ಕಲ್ಮಾಡಬೆಟ್ಟ'ವೆಂದು ಕರೆದುದು ಸರಿಯೆನಿಸುತ್ತದೆ. ಸ್ಥಳೀಯ ಜನರು ಮೋಚಬ್ಬರಸಿಯು ಅಗೆಸಿದ ಕೆರೆಯನ್ನೀಗಲೂ ತೋರಿಸುತ್ತಾರೆ. ಅಲ್ಲೇ ಒಂದು ತೋಡು ಹರಿಯುತ್ತಿದ್ದು ಮೊಗ್ರಾಲು ಹೊಳೆಯಿಂದ ಇದಕ್ಕೆ ಉಪ್ಪು ನೀರು (ಬಿವಳ ನೀರು) ಬಾರದಂತೆ ಕಟ್ಟೆ ಕಟ್ಟಿ, ಕೃಷಿಗೆ ಅಯೋಗ್ಯವಾದ ನೆಲವನ್ನು ಕೃಷಿಗೆ ಯೋಗ್ಯವಾಗಿ ಮಾಡಿದುದನ್ನು ಶಾಸನದಲ್ಲಿ ಹೊಗಳಲಾಗಿದೆ. ಈ ನೆಲವನ್ನು 'ಬಿವಟ ನೆಲ'ವೆಂದೇ ಕರೆಯಲಾಗಿದೆ. ಸಮುದ್ರದಿಂದ ಉಪ್ಪು ನೀರು ಬೇಸಗೆಯಲ್ಲಿ ಹೊಳೆಯ ಮೂಲಕ ಇತ್ತ ಬರುವುದು ಸಹಜ. ಈ ನೀರನ್ನು ತಡೆಗಟ್ಟಿ, ನೆಲವನ್ನು 'ಸಮತಳ' ಮಾಡಿ, ಕೆರೆ ಕಟ್ಟಿಸಿ ನಂದನವನ ಮಾಡಿದ್ದನ್ನು ಶಾಸನವು ಮುಕ್ತವಾಗಿ ಹೊಗಳುತ್ತದೆ. ಭೂಲಕ್ಷಣವು ಇಲ್ಲಿಗೆ ಸರಿಯಾಗಿ ಹೊಂದುವುದಲ್ಲದೆ ಜನರೂ ಈ ಜಾಗವನ್ನು ತೋರಿಸಿ ಹೇಳುತ್ತಾರೆ. ಆದ್ದರಿಂದ ದಾನವಾಗಿ ಕೊಟ್ಟ ಭೂಮಿ ಮೊಗ್ರಾಲ್ ಗ್ರಾಮದ ಈ ಪುತ್ತೂರೇ ಅಲ್ಲದೆ ದಕ್ಷಿಣ ಕನ್ನಡ (ಈಗಿನ) ಜಿಲ್ಲೆಯಲ್ಲಿರುವ, ಡಾ|| ಶಿವರಾಮ ಕಾರಂತರು ವಾಸಿಸಿದ್ದ ಪುತ್ತೂರಲ್ಲ. ಆ ಪುತ್ತೂರೆಂದು ಒಬ್ಬಿಬ್ಬರು ಸಂಶೋಧಕರು ಭಾವಿಸಿದ್ದನ್ನು ಈ ಹಿಂದೆಯೇ ಈ ಲೇಖಕನಿಂದ ಅಲ್ಲಗಳೆಯಲಾಗಿತ್ತು. ಆ ಪುತ್ತೂರು ಈ ರಾಜನ ಆಡಳಿತದಿಂದ ಹೊರಪಟ್ಟ ಪ್ರದೇಶವಾದ್ದರಿಂದ ಈ ಭೂ ಲಕ್ಷಣಗಳು ಅಲ್ಲಿಲ್ಲದಿರುವುದರಿಂದ ಇದಕ್ಕೆ ಹೆಚ್ಚು ಸಮರ್ಥನೆ ಬೇಕಾಗಿಲ್ಲ.

ದಾನವಾಗಿತ್ತ ಭೂಮಿಯ ಒಡೆತನವು "ಜೋಗವ್ವೆಯ ಪೆಣ್ಗೂಸುಗಳಿಗಲ್ಲದೆ ಗಂಡು ಗೂಸುಗಳಿಗಲ್ಲ, ಪೆಣ್ಣುಸುಗಳಿಲ್ಲದೊಡೆ ಗಂಡು ಮಕ್ಕಳ್ಗೆಸಲ್ಗುಂ" ಎಂದು ವಿಧಿಸಿರುವುದರಿಂದ 'ಅಳಿಯಕಟ್ಟ'ನ ಪದ್ಧತಿಯನ್ನು ಇದು ಸೂಚಿಸುತ್ತದೆ. ಈ

ಊರಿನ ಕೆಲ ವರ್ಗಗಳ ಜನರಲ್ಲಿ ಅಳಿಯ ಕಟ್ಟಿನ ಕ್ರಮ ಈಗಲೂ ನಡೆಯುತ್ತಿದೆ. ಪಕ್ಕದ ಕೇರಳದಲ್ಲಿ "ಮರುಮಕ್ಕತ್ತಾಯಂ" ಎಂಬ ಇದೇ ಸಂಪ್ರದಾಯ ಅಲ್ಲಿನ ಕೆಲ ವರ್ಗಗಳ ಜನರಲ್ಲಿ ರೂಢಿಯಲ್ಲಿದೆ, ಕರಾವಳಿ ಪ್ರದೇಶದಲ್ಲ ಈ ಸಂಪ್ರದಾಯ ಸಮಾನ ವಾಗಿ ಕಂಡು ಬರುತ್ತದೆ. ಭೂತಾಳ ಪಾಂಡ್ಯನ ಕಥೆ ಅಳಿಯ ಕಟ್ಟಿನ ಆರಂಭವನ್ನು ಹೇಳುವಂತಿದ್ದರೂ ಈ ಕಥಾವಸ್ತು ನಡೆದ ಕಾಲ ಇನ್ನೂ ಅಜ್ಞಾತವಾಗಿಯೇ ಇದೆ. ಅಳಿಯ ಕಟ್ಟಿನ ಪ್ರಥಮ ದಾಖಲೆ ಈ ಶಾಸನವೆಂದು ಹೇಳಬಹುದೆನಿಸುತ್ತದೆ.

ಆರಂಭದಲ್ಲಿ ಗೌತಮ, ಶರದ್ವತ್, ಕೃಪ, ಶಂತನು ಮೊದಲಾದವರನ್ನು ಜಯಸಿಂಹನ ಪೂರ್ವಿಕರನ್ನಾಗಿ ಹೊಗಳುವ ಶ್ಲೋಕ, ಮತ್ತೆ ಕಂದ, ಉತ್ಸಾಹ ವೃತ್ತ, ವಚನ, ಮತ್ತೆ ಕಂದ, ಕೊನೆಯಲ್ಲಿ ವಚನ ಇವುಗಳಿಂದ ಕೂಡಿದ ಈ ಶಾಸನದ ಭಾಷೆ ಸಾಹಿತ್ಯಕವಾಗಿ ಪ್ರೌಢವಾಗಿದೆ. ಭಾಷೆಯು ಅಚ್ಚಗನ್ನಡ ಶಬ್ದಗಳಿಂದಲೇ ಕೂಡಿದ್ದು ಸಂಸ್ಕೃತ ಶಬ್ದಗಳು ಕಡಿಮೆಯಾಗಿವೆ.

ಇಂತಹ ಪ್ರಾಚೀನ ಕನ್ನಡ ಶಾಸನದಿಂದ ಈ ನೆಲದ ಕನ್ನಡದ ಸಂಬಂಧವು ಆ ದಾನದಂತೆ 'ಆಚಂದ್ರಾರ್ಕ'ವೆನಿಸುತ್ತದೆ.

ಗ್ರಂಥಾವಲೋಕನ

ಭಕ್ತಿ—ನೀತಿ ಗಮಕ ಕೃತಿಗಳು*

ಪ್ರೊ|| ಟಿ. ಕೇಶವ ಭಟ್ಟರ ಮೂವತ್ತಐದನೆಯ ಕೃತಿ ಪುಷ್ಪವಾಗಿ ಈ ಕೃತಿಯು ಹೊರಬಂದಿದೆ. ಕನ್ನಡ ಸಾಹಿತ್ಯ ಹಾಗೂ ವಿವಿಧ ಮತ-ಧರ್ಮಗಳ ಆಳವಾದ ಅಧ್ಯಯನ ಅನುಭವ ಹೊಂದಿರುವ ಶ್ರೀ ಕೇಶವ ಭಟ್ಟರು ಈ ಕೃತಿಯಲ್ಲಿ ವೈದಿಕ, ಜೈನ ಹಾಗೂ ವೀರಶೈವ ಧರ್ಮಗಳಲ್ಲಿ ಅಪೂರ್ವವಾದ ವಿವಿಧ ಸ್ತುತಿ-ಭಕ್ತಿ ಗೀತೆಗಳಲ್ಲಿ-ಕೀರ್ತನೆಗಳ ಮಧುರ ಸಂಗಮವನ್ನೇ ಕಲೆ ಹಾಕಿದ್ದಾರೆ. ತಾವು ಸಂಗ್ರಹಿಸಿದ ಯಾವುದೇ ಸಾಹಿತ್ಯವನ್ನು ಅಚ್ಚುಕಟ್ಟಾಗಿ ಶುದ್ಧ ಪ್ರತಿಗೊಳಿಸಿ, ಮುಖ್ಯವಾದ ಶಬ್ದಾರ್ಥಗಳು ಹಾಗೂ ಅಡಿ ಟಿಪ್ಪಣಿಗಳನ್ನು ಕೊಡುವುದನ್ನು ಶ್ರೀಭಟ್ಟರ ಯಾವುದೇ ಕೃತಿಗಳನ್ನು ಓದಿದವರಿಗೆ ತಿಳಿದಿರುವ ಸಂಗತಿ. ಅಂತೆಯೇ ಈ ಕೃತಿಯಲ್ಲೂ ಸತ್ಯನಿಷ್ಠವಾದ ಹಾಗೂ ಅಮೂಲ್ಯವಾದ ಸಂಗತಿಗಳನ್ನು ತಿಳಿಯಪಡಿಸಿದ್ದಾರೆ. ಕೃತಿಗೆ ಮುನ್ನುಡಿಯನ್ನು ಶ್ರೀಷ್ಠ ಗಮಕಿ ಶ್ರೀ ಎಂ. ರಾಘವೇಂದ್ರರಾಯರು ಬರೆದಿದ್ದಾರೆ. ಈ ಕೃತಿಯು ಬರೀ ಸಂಪಾದನೆಯದ್ದಾಗಿರದೆ, ಬಸವಣ್ಣನವರ ಜನಪ್ರಿಯ 108 ವಚನಗಳನ್ನು ಖ್ಯಾತ ಕರ್ಣಾಟಕ ವೃತ್ತಗಳಲ್ಲೂ ರಚಿಸಿ, ಸೃಜನಶೀಲ ಕೃತಿಯೂ ಆಗಿದೆ.

ಹಿಂದೆ ತಮ್ಮ ಯೌವನ ಕಾಲದಲ್ಲಿ ಹಲವು ವರ್ಷಗಳ ಕಾಲ ದೇಶಸೇವೆಯಲ್ಲಿ ತೊಡಗಿದ್ದ ಶ್ರೀಭಟ್ಟರ ಮನೋಧರ್ಮದಂತೆ ಪ್ರಥಮದಲ್ಲಿ ದೇಶಭಕ್ತಿಸ್ತುತಿ ಹಾಗೂ ಪರಬ್ರಹ್ಮಸ್ತುತಿಗಳ ಪ್ರಾತಃ ಸ್ಮರಣೆಗಳನ್ನು ಪ್ರಕಟಿಸಿದ್ದಾರೆ. ಎಲ್ಲರೂ ಇದನ್ನು ಕಲಿತು, ನಿತ್ಯ ಪಠಿಸಬೇಕೆಂಬುದೇ ಕವಿಗಳ ಆಶಯವಾಗಿದೆ. ಅನಂತರ ಯಕ್ಷಗಾನದ ಶ್ರೇಷ್ಠ ಕವಿ ಪಾರ್ತಿಸುಬ್ಬನ ಆಡುಂಬೊಲವಾಗಿದ್ದ ಕುಂಬಳೆಯ (ಈಗ ಕೇರಳದ ಕಾಸರಗೋಡು ಜಿಲ್ಲೆಗೆ ಸೇರಿದೆ) ಶ್ರೀಕೃಷ್ಣನ ಸ್ತುತಿ "ಕೃಷ್ಣ ಸಿಕ್ಕುವನೇ" ಎಂಬ ಕೀರ್ತನೆ ಭಜನೆಗೆ ಹೇಳಿ ಮಾಡಿಸಿದುದು ಆಗಿದೆ. ಅನಂತರ ವಾರ್ಧಕ ಷಟ್ಪದಿಯಲ್ಲಿ 11 ಪದ್ಯಗಳಿಂದ ಕೂಡಿದ "ಗಜೇಂದ್ರ ಮೋಕ್ಷ" ಹಾಗೂ "ದ್ರೌಪದೀ ವಸ್ತ್ರಾಪಹರಣ"ವೆಂಬ 32 ಪದ್ಯಗಳಿಂದ ಕೂಡಿದ ಉದಯರಾಗ ಅಜ್ಞಾತ ಕವಿಯದೆಂದು ಶ್ರೀಭಟ್ಟರು ಬರೆದಿದ್ದರೂ, ಅವೆರಡೂ ಪುರಂದರದಾಸರ ಪದಗಳೆಂದು ಮುನ್ನುಡಿಯಲ್ಲಿ ಶ್ರೀ ಎಂ. ರಾಘವೇಂದ್ರರಾಯರು ಸಾರಿದ್ದಾರೆ. ಆದರೂ ಸಹ ಈ ಕುರಿತು 'ಹರಿದಾಸ ಸಾಹಿತ್ಯ ಪ್ರತಿ

* ಲೇಖಕರು : ಪ್ರೊ|| ಟಿ. ಕೇಶವ ಭಟ್ಟ
ಆಕೃತಿ ಡೆಮ್ಮಿ $\frac{1}{8}$, ಪುಟಗಳು : 100, ಬೆಲೆ : ರೂ. 30-00, ಪ್ರ. ಮು. 1998
ಚಿರ ಸಾಹಿತ್ಯ ಪ್ರಕಾಶನ, ನಂ. 754, 15ನೇ ಮುಖ್ಯ ರಸ್ತೆ,
ಬನಶಂಕರಿ 2ನೇ ಹಂತ, ಬೆಂಗಳೂರು - 560 070.

ಷ್ಮಾನ್'ವೇ ಮೊದಲಾದವರು ಇನ್ನು ಹೆಚ್ಚಿನ ಸಂಶೋಧನೆಯನ್ನು ನಡೆಸಬಹುದಾಗಿದೆ. ಯಾಕೆಂದರೆ ಕೇಶವ ಭಟ್ಟರ ಷಟ್ಪದಿಯಲ್ಲಿ "ಮುದ್ದು ವಿಟ್ಠಲ"ವೆಂಬ ನಾಮಾಂಕಿತವಿದೆ. ಮುಂದಿನ ಷಟ್ಪದಿ ಕುತೂಹಲಕರವಾದ "ವಿಭೂತಿ ದಂಡ". ಇದರ ಹೆಸರೇ ಸೋಜಿಗದ್ದಾಗಿದ್ದು 30 ಪದ್ಯಗಳಿಂದಲೂ ಕೂಡಿದ್ದು, ವೈರಾಗ್ಯ–ಭಕ್ತಿಪ್ರದವಾಗಿದೆ. ಇದರ ಮೂಲ ಯಾವುದೋ ಸಂಸ್ಕೃತ ಶ್ಲೋಕಗಳಾಗಿರಬೇಕು ಎಂದು ಅನಿಸುತ್ತದಾದರೂ ಪ್ರಾಸಬದ್ಧವಾಗಿದ್ದು, ಹಾಡಲು ಅನುಕೂಲವಾಗಿದೆ.

"ನವಗ್ರಹಶತಕ"ವೆಂಬ 18 ಪದ್ಯಗಳ ಭಾಮಿನೀ ಷಟ್ಪದಿಯು ಹೆಚ್ಚು ಮನ ಸೆಳೆವ ಭಾಗವಾಗಿದೆ. ನವಗ್ರಹಗಳ ಸ್ತುತಿಯನ್ನು ಅತಿರಮ್ಯವಾಗಿ ಶುದ್ಧ ಕನ್ನಡದಲ್ಲಿ ಜ್ಯೋತಿಷ್ಯರೀತ್ಯಾ ರಚಿಸಲಾಗಿದೆ. ಶ್ರೀಯುತ ಕೇಶವ ಭಟ್ಟರ ಹುಟ್ಟೂರಿನವರಾದ ದಿ|| ನೀರ್ಚಾಲು ರಾಮಕೃಷ್ಣ ಭಟ್ಟರ ಕೃತಿ ಇದಾಗಿದ್ದು, ಕಾಲಗರ್ಭದಲ್ಲಿ ಖಿಲವಾಗಬಹುದಾಗಿದ್ದ ಇದನ್ನು ಪ್ರಕಾಶಿಸಿ ಶ್ರೀಯುತರು ಮಹದುಪಕಾರ ಮಾಡಿದ್ದಾರೆ. ಇದರ "ನಿಜ ಬೆಲೆ ಕಟ್ಟಲು ಜ್ಯೋತಿಷಿಯಾಗಿದ್ದು, ಕವಿತಾಜ್ಞಾನವಿರುವವರಿಂದ ಮಾತ್ರ ಸಾಧ್ಯ". ಮೈಸೂರಿನ ಶ್ರೀಪಾರ್ಶ್ವನಾಥಜಿನಾಲಯದಲ್ಲಿದ್ದ ಅತಿ ಪ್ರಾಚೀನವಾದ ದಪ್ಪ ಕಾಗದದ ಹಸ್ತಪ್ರತಿಯಲ್ಲಿದ್ದ "ಅನಂತಸ್ವಾಮಿ ಪಂಚಕಲ್ಯಾಣ ಪದಗಳು ಹಾಗೂ ಶ್ರೀ ಗೋಮಟೇಶ್ವರ ಪೂಜೆಯ ಪದಗಳೂ" ಸರಳವಾಗಿದ್ದು, ಭಾವಪೂರಿತವಾಗಿವೆ. ಅದೇ ಹಸ್ತಪ್ರತಿಯಲ್ಲಿ "ರುದ್ರ" ಹಾಗೂ "ಚಂದನೆ"ಯೆಂಬ ಅಮೂಲ್ಯವಾದ ಯಕ್ಷಗಾನ ಪ್ರಸಂಗಗಳೂ ಇದ್ದು, ಭಗೀರಥ ಯತ್ನ ನಡೆಸಿದರೆ ಅವನ್ನೂ ಸಂಗ್ರಹಿಸಿ ಪ್ರಕಟಿಸಬಹುದು. ಯಾಕೆಂದರೆ ಅವು ತ್ರುಟಿತ ಸ್ಥಿತಿಯಲ್ಲಿವೆ.

ಕಡೆಯದಾದ ಖ್ಯಾತ ಕರ್ಣಾಟಕ ವೃತ್ತಗಳಲ್ಲಿರುವ 108 ಪದ್ಯಗಳಿಂದ ಕೂಡಿದ "ಕೂಡಲ ಸಂಗಮಶತಕ"ವು ಶ್ರೀಯುತ ಭಟ್ಟರ ಸ್ವಂತ ರಚನೆಗಳಾಗಿದ್ದು, ಬಸವಣ್ಣನವರ ವಚನಗಳ ಅನುವಾದವಾಗಿದೆ. 'ವರ್ತಮಾನದಿಂದ ಭೂತಕಾಲಕ್ಕೆ ಸರಿಯುವ ಯತ್ನ' ಎಂದು ಕೆಲವರು ಮೂಗೆಳೆಯಬಹುದಾದರೂ, ಸಂಸ್ಕೃತಭೂಯಿಷ್ಠವಾದ, ಛಂದೋಬದ್ಧ ರಚನೆಗಳ ಕಾಲದಲ್ಲಿ ಬಸವಣ್ಣನವರು ಸರಳ ಕನ್ನಡದಲ್ಲಿ ವಚನಗಳನ್ನು ರಚಿಸಿ, ಜನ ಸಾಮಾನ್ಯರಿಗೆ ಎಷ್ಟು ಮಹದುಪಕಾರವನ್ನು ಮಾಡಿದರು ಎಂಬುದನ್ನು ಅರಿತುಕೊಳ್ಳಲಿಕ್ಕಾದರೂ ಖಂಡಿತವಾಗಿ ಇವನ್ನು ಓದಲೇಬೇಕು. ಅಲ್ಲದೆ ಕರ್ನಾಟಕ ವೃತ್ತಗಳಲ್ಲಿ ಎಷ್ಟು ಸೊಗಸಾಗಿ ಕೇಶವ ಭಟ್ಟರ ಕೈಯಲ್ಲಿ ಇದು ತಸಿ ಪಡೆದಿದೆ ಎಂಬುದಕ್ಕೆ ಈ ಕೆಳಗಿನ ಒಂದು ಉದಾಹರಣೆ ಸಾಕು. 'ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ' ಎಂಬ ವಚನ ಮತ್ತೇಭ ವಿಕ್ರೀಡಿತ ವೃತ್ತದಲ್ಲಿ ಈ ರೀತಿ ಮೂಡಿ ಬಂದಿದೆ—ಸುರಲೋಕಂ ನರಲೋಕವೆಂಬಿವುಭಯಂ ಬೇರಿಲ್ಲ, ಸತ್ಯೋಕ್ತಿಯೀ । ಸುರಲೋಕಂ ಪುಸಿವೇಳ್ವುದೇ ನರರ ಲೋಕಂ ಕಾಣಿರಾಚಾರಮೇ । ಸುರಲೋಕಂ

ನರಕಾಖ್ಯ ಲೋಕವದನಾಚಾರಂ ದಲಿಂತೊಪ್ಪುವೀ | ವರವಾಕ್ಯಕ್ಕೆ ಪ್ರಮಾಣ ದೇವನೆಸೆವಂ ಶ್ರೀ ಕೂಡಲಾ ಸಂಗಮಂ || ಆದರೆ, ಒಂದನೇ ಹಾಗೂ 47ನೇ ರಚನೆಗಳು ಒಂದೇ ವಚನದ್ದಾದರೂ ಸಹ (ಹಾಲತೊರೆಗೆ ಬೆಲ್ಲದ ಕೆಸರು) ಭಟ್ಟರ ರಚನಾ ವೈವಿಧ್ಯವನ್ನು ಇದರಲ್ಲಿ ಕಾಣಬಹುದು.

ಒಟ್ಟಾರೆಯಾಗಿ, ಈ ಕೃತಿಯು ಭಕ್ತಿ-ನೀತಿ-ಗನುಕಗಳು ಸಂಶೋಧನೆ-ಸಂಪಾದನೆ-ವಿದ್ವತ್ತ್ವಗಳ ತ್ರಿಕೂಟ ಸಂಗನುವಾಗಿದೆ. ಅಲ್ಲದೆ ಈ ಶ್ರೇಷ್ಠ ಕೃತಿಗೆ ಬೆಂಗಳೂರಿನ ಅತ್ತಿಮಬ್ಬೆ ಪ್ರತಿಷ್ಠಾನದ ಮಾನ್ಯತೆಯೂ ಲಭಿಸಿದೆ.

ಕೆ. ಪಿ. ರಾಜಗೋಪಾಲ್ ಎಂ.ಎ.

ಸಂಶೋಧನರಂಗ*

ನಮ್ಮಲ್ಲಿಂದು ಸಂಶೋಧನೆ ಎಂಬ ಪದ ಬಹಳ ಹಗುರವಾಗಿ ಬಿಟ್ಟಿದೆ. ಅದರ ಗಂಭೀರತೆ ಹೊರಟು ಹೋಗುತ್ತಿದೆ. ಅದು ಬಹುಮಟ್ಟಿಗೆ ಕ್ಲೀಷೆಯೂ ಆಗಿದೆ. ನಮ್ಮಲ್ಲಿ ಸಂಶೋಧಕರೆಂದು ಹೇಳಿಕೊಳ್ಳುವ ನೂರಕ್ಕೆ ತೊಂಭತ್ತರಷ್ಟು ಜನರು (ವಿದ್ವಾಂಸರು ?) ಪಿ.ಎಚ್.ಡಿ. ಪದವಿ ಪಡೆದ ಅನಂತರ ಸಂಶೋಧನೆಗೆ ಬೆನ್ನು ಹಾಕಿದವರೇ. ಪಿಎಚ್.ಡಿ ಮಹಾ ಪ್ರಬಂಧದ ರಚನೆಯೇ ಮಹಾನ್ ಸಾಧನೆ ಎಂದು ಗ್ರಹಿಸಿವರೆ ಅದಕ್ಕಿಂತ ದೊಡ್ಡ ದುರಂತ ಮತ್ತೊಂದಿಲ್ಲ. ಪಿಎಚ್.ಡಿ. ಎಂಬುದು ಸಂಶೋಧಕನಾಗುವುದಕ್ಕೆ, ಸಂಶೋಧನ ರಂಗದ ಪ್ರವೇಶಕ್ಕೆ ಒಂದು ತೋರುದಾರಿಯಿದ್ದಂತೆ ಎಂಬುದನ್ನು ಯಾರೂ ಮರೆಯಕೂಡದು. "ಸಂಶೋಧನೆ ಎನ್ನುವುದು ನಿರಂತರವಾದ ಒಂದು ಪ್ರಕ್ರಿಯೆ" ಎಂಬ ಮುಖ್ಯ ಮಾತು ಇಂದು ಮೂಲೆ ಪಾಲಾಗಿದೆ "ಸಂಶೋಧನೆಯೆನ್ನುವುದು ಬಹಳಷ್ಟು ಸಲ ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ" ಎಂಬ ಡಾ|| ಎಂ. ಎಂ. ಕಲಬುರ್ಗಿ ಅವರ ಮಾತನ್ನು ನಾವಿಂದು ಗಂಭೀರವಾಗಿ ಪರಿಗಣಿಸಬೇಕಾಗಿದೆ.

---

* ಸಂಶೋಧನ ರಂಗ ಡಾ|| ತಾಳ್ತಜೆ ವಸಂತಕುಮಾರ್, ಮುಂಬಯಿ ವಿಶ್ವವಿದ್ಯಾಲಯ ಮುಂಬಯಿ 1996. ಡೆಮಿ $\frac{1}{8}$, ಪು. 114, ಬೆಲೆ ರೂ. 75-00.

ಸಂಶೋಧನೆ ಎಂದರೇನು ? ಸಂಶೋಧನೆಯ ವಿಧಿ ವಿಧಾನಗಳು ಹೇಗಿರಬೇಕು ಬೇಕು ಎಂಬುದನ್ನು ತಿಳಿಸಿ ಕೊಡುವ ಕೆಲವೇ ಕೆಲವು ಉತ್ತಮ ಕೃತಿಗಳು ಕನ್ನಡದಲ್ಲಿ ಬಂದಿವೆ. ಆ ಸಾಲಿಗೆ ಡಾ|| ತಾಳ್ತಜೆ ವಸಂತಕುಮಾರ ಅವರ ಸಂಶೋಧನ ರಂಗ ಕೃತಿಯೂ ಸೇರ್ಪಡೆಯಾಗಿದೆ. ಸಂಶೋಧನ ವಿಧಿ ವಿಧಾನಗಳನ್ನು ತಿಳಿಸುವ, ಈ ದಶಕದಲ್ಲಿ ನಾವು ಗುರುತಿಸಬಹುದಾದ, ಹಾಗೆಯೇ ಒಟ್ಟು ಕನ್ನಡ ಸಂಶೋಧನ ಕ್ಷೇತ್ರದ ವಸ್ತುನಿಷ್ಠ ಮೌಲ್ಯಮಾಪನ, ಮುನ್ನೋಟಗಳನ್ನು ಪ್ರಸ್ತುತ ಕೃತಿ ಒಳಗೊಂಡಿದೆ. ಸಂಶೋಧನೆ ಎಂದರೇನು ? ಎಂಬಾದಿಯಾದ ಪ್ರಾಥಮಿಕ ವಿಚಾರಗಳ ವಿವರಣೆ ಇಲ್ಲಿಲ್ಲ. ಈ ಕೃತಿಯ ಮುಖ್ಯ ಆಶಯವನ್ನು ಲೇಖಕರೇ ಆರಂಭದಲ್ಲಿ ಹೇಳಿಕೊಂಡಿದ್ದಾರೆ. "ಸಂಶೋಧನೆ ಎನ್ನುವುದರಲ್ಲಿ ಬುದ್ಧಿಭಾವಗಳ ಹದವಾದ ಮೇಳನ ಇದ್ದೇ ಇರಬೇಕು. ಹೊಸದಾದುದನ್ನು ಕಾಣುವ ಮತ್ತು ಕಾಣಿಸುವ ಆತುರದಲ್ಲಿ ಅನಪೇಕ್ಷಿತ ಆವೇಶ ಇರಕೂಡದು. ಹಾಗೆಂದು ಹೇಳಲೇಬೇಕಾದ ವಿಚಾರಗಳಲ್ಲಿ ಶುಷ್ಕವಾದ ಹುಬ್ಬುಗಂಟಿನ ಕೃತಕತೆಯೂ ಇರಬಾರದು. ಅನಗತ್ಯವಾದ ಗಾಂಭೀರ್ಯ ಮತ್ತು ಅನಪೇಕ್ಷಣೀಯ ಭಾವಾವೇಶಗಳನ್ನು ತೊರೆದಾಗಲೇ ವಸ್ತುನಿಷ್ಠ ಸಂಶೋಧನೆಯು ಸಾಧ್ಯವೆಂಬುದು ನನ್ನ ನಂಬಿಕೆ. ಕನ್ನಡದಲ್ಲಿ ಈ ಕ್ಷೇತ್ರಕ್ಕೆ ತುರ್ತಾಗಿ ಶಸ್ತ್ರಚಿಕಿತ್ಸೆ ಆಗಬೇಕಾಗಿದೆಯೆಂದೆನಿಸುತ್ತದೆ. ಕನ್ನಡ ಸಂಶೋಧನ ಕ್ಷೇತ್ರವು ವಸ್ತುನಿಷ್ಠತೆ, ಪ್ರಾಮಾಣಿಕತೆ ಮತ್ತು ವಿನೂತನತೆಗಳನ್ನು ಕಳೆದುಕೊಳ್ಳಬಾರದು" ಎಂಬ ಕೇಂದ್ರ ಕಾಳಜಿ ಪ್ರಸ್ತುತ ಕೃತಿಯ ಉದ್ದಕ್ಕೂ ಕಂಡು ಬರುತ್ತದೆ.

ಸಂಶೋಧನೆಯಲ್ಲಿ ತೊಡಗಿರುವವರು ಕಟ್ಟಿಕೊಂಡಿರುವ ಅನೇಕ ಹುಸಿ ಭ್ರಮೆಗಳನ್ನು ಲೇಖಕರು ಆರಂಭದಲ್ಲೇ ಮುರಿದು ಹಾಕಿದ್ದಾರೆ. "ಸಂಶೋಧನೆಯು ಯಾವ ದೃಷ್ಟಿಯಿಂದಲೂ ಹೊಸ ಸೃಷ್ಟಿಯಲ್ಲ. ಅದು ಸೃಷ್ಟಿಯಲ್ಲಿರುವ, ಬೆಳಕಿಗೆ ಬಾರದ ಹೊಸ ಅಂಶಗಳನ್ನು ಗುರುತಿಸುವ ಪ್ರಯತ್ನ. ಅವುಗಳ ಹರಹನ್ನು ವಿಸ್ತರಿಸುವ ಪ್ರಯೋಗ ಹಾಗೂ ಉಪಯುಕ್ತತೆಯನ್ನು ನಿಶ್ಚಿತಗೊಳಿಸುವ ಕ್ರಿಯೆಯಾಗಿದೆ" (ಪುಟ 3) ಎಂಬುದನ್ನು ಲೇಖಕರು ಆರಂಭದಲ್ಲೇ ಬಯಲುಗೊಳಿಸಿದ್ದಾರೆ. ಇಂದಿನ ಸಂಶೋಧನೆಯು ನಿರೀಕ್ಷಿತ ಫಲಿತಾಂಶಗಳನ್ನು ಪಡೆಯುವ ಮಾಧ್ಯಮವಾಗಿ ಹೆಚ್ಚಿನ ಸಂದರ್ಭದಲ್ಲಿ ಬಳಕೆಯಾಗುತ್ತಿದೆ (ಅದೇ ಪುಟ. 3) ಎಂಬ ಸೂಕ್ಷ್ಮ ಮೌಲ್ಯಮಾಪನವನ್ನೂ ನಡೆಸಿದ್ದಾರೆ. ಸಂಶೋಧನೆಯ ಪ್ರಮುಖ ನೆಲೆಗಳು, ಕನ್ನಡದಲ್ಲಿ ನಡೆದಿರುವ ಸಂಶೋಧನೆಯ ಸ್ವರೂಪ ಹಾಗೂ ನಮ್ಮ ಸಂಶೋಧನ ಕ್ಷೇತ್ರದಲ್ಲಿನ ಮುಖ್ಯ ಕೊರತೆಗಳನ್ನೂ ಗುರುತಿಸಿದ್ದಾರೆ. ಇದು ಇಂದಿನ ಅನಿವಾರ್ಯವೂ ಹೌದು. ಇಲ್ಲಿ ಪಟ್ಟಿ ಮಾಡಿರುವ ಕೊರತೆಗಳು ನಮ್ಮ ಸಂಶೋಧನ ಕ್ಷೇತ್ರದ ಹಿನ್ನಡೆಗೆ, ಅಪಮೌಲ್ಯಕ್ಕೆ, ನಿರುತ್ಸಾಹಕ್ಕೆ ಕಾರಣಗಳನ್ನು ಕಂಡುಕೊಳ್ಳಲು ಸಹಾಯಕವಾಗಿವೆ. ಒಳ್ಳೆಯ ಸಂಶೋಧನೆಗೆ, ಸಂಶೋಧಕನಿಗೆ ಬೇಕಾದ ವಾತಾವರಣ ಎಂಥದಿರಬೇಕು

ಜಿಕ ಸಂಶೋಧನೆ' ಎಂಬ ಪದಗಳು ಜೊತೆ ಜೊತೆಗೆ ಬಂದಿವೆ. ಸಾಂಸ್ಕೃತಿಕ ಸಾಮಾಜಿಕ ಸಂಶೋಧನೆ (ಪುಟ. 12) ಇವೆರಡೂ ಬೇರೆ ಬೇರೆಯೋ ಒಂದೆಯೋ ಎಂಬ ಗೊಂದಲವನ್ನು ಹುಟ್ಟಿಸುತ್ತದೆ. ಇಲ್ಲೆಲ್ಲ ಹೆಚ್ಚಿನ ವಿವರಣೆ ಅಗತ್ಯವಿದೆ ಎನಿಸುತ್ತದೆ.

ಕ್ಷೇತ್ರ ಕಾರ್ಯಕ್ಕೆ ಸಂಬಂಧಿಸಿದಂತೆ, ಸಾಂಸ್ಕೃತಿಕ ಅಧ್ಯಯನದ ನಿಖರತೆಗೆ ಸಮಾಜ ವಿಜ್ಞಾನ ನೆರವಾಗಬಹುದೆಂಬುದನ್ನು ದ್ವಿಧ್ರುವಗಳಂತಹ ಪರಿಕಲ್ಪನೆಯಿಂದ ಅರ್ಥೈಸಿದಂತೆ (ಪುಟ 18) ಸಾಂಸ್ಕೃತಿಕ ಅಧ್ಯಯನ ಮತ್ತು ಸಮಾಜಶಾಸ್ತ್ರ ಇವೆರಡನ್ನು ಸಂಶೋಧಕ ದುಡಿಸಿಕೊಳ್ಳಬೇಕಾದ ರೀತಿಯನ್ನು ವಿವರಿಸಿದ್ದರೆ, ಇಲ್ಲಿ ಸಂಶೋಧಕ (ಸಾಹಿತ್ಯದ ವಿದ್ಯಾರ್ಥಿ) ವಹಿಸಬೇಕಾದ ಎಚ್ಚರಿಕೆಗಳನ್ನು ಚರ್ಚಿಸಿದ್ದರೆ ಇನ್ನಷ್ಟು ಅನುಕೂಲವಾಗುತ್ತಿತ್ತು. ಸಾಮಾಜಿಕ ಸಾಂಸ್ಕೃತಿಕ ಸಂಶೋಧನೆಯು ಒಂದು ಸಾವಯವ ಸಂಪೂರ್ಣ ಘಟಕ (organic whole unit) (ಪುಟ. 21) ಎಂಬುದನ್ನು ಒಪ್ಪಿಕೊಂಡಾಗ ಮೇಲಿನ ಸಂದೇಹಗಳಿಗೆ ಕೆಲ ಮಟ್ಟಿನ ಪರಿಹಾರ ಸಿಗುತ್ತದಾದರೂ ಅದನ್ನು ವಿಶಾಲ ಛತ್ರಛಾಯೆಯಲ್ಲಿ ಬರುವ ಹಾಗೆ ಸಾಂಸ್ಕೃತಿಕ ಎಂದು ಕರೆದರೆ ಸಾಲದೆ ? ಎಂಬ ಸಂಶಯ ಓದುಗರಲ್ಲಿ ಮೂಡುತ್ತದೆ. ಲೇಖಕರೇ ಒಂದೆಡೆ "ಸಂಸ್ಕೃತಿ ಪದ ಬಹಳ ವ್ಯಾಪಕವಾದ ಅರ್ಥವನ್ನು ಒಳಗೊಳ್ಳುತ್ತದೆ. ಶಾಬ್ದಿಕ ನೆಲೆಯಲ್ಲಿ ಎಲ್ಲಾ ಸಾಮಾಜಿಕ, ಜಾನಾಂಗಿಕ ಜನಪದೀಯ ಅಧ್ಯಯನಗಳೂ ಇದರ ಛತ್ರಛಾಯೆಯಲ್ಲಿ ಅಪಗತವಾಗುತ್ತವೆ (ಪುಟ 14) ಸಾಂಸ್ಕೃತಿಕ ಅಧ್ಯಯನದ ಸ್ವರೂಪವು ಮೂಲತಃ ಅಂತರಶಿಸ್ತೀಯವಾದುದು" (ಪುಟ 30) ಎಂದಿರುವಾಗ ಮತ್ತೆ ಸಾಮಾಜಿಕ ಸಾಂಸ್ಕೃತಿಕ ಸಂಶೋಧನೆ ಎಂದು ಕರೆಯುವ ಅಗತ್ಯವಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಪಾರಿಭಾಷಿಕ ಸೂಚಿಯನ್ನು ಅನುಬಂಧದಲ್ಲಾದರೂ ಕೊಡಬೇಕಾಗಿತ್ತು. ಕನ್ನಡದಲ್ಲಿ ಈವರೆಗೆ ಬಂದಿರುವ ಸಂಶೋಧನ ಶಾಸ್ತ್ರದ ಬಗೆಗಿನ ಪುಸ್ತಕಗಳಲ್ಲಿ ಪಾರಿಭಾಷಿಕ ಪದಗಳನ್ನು ಬೇರೆ ಬೇರೆ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ.

ಸಂಶೋಧನ ವಿಧಿ ವಿಧಾನಕ್ಕೆ ಸಂಬಂಧಿಸಿದಂತೆ ಈವರೆಗೆ ಕನ್ನಡದಲ್ಲಿ ಬಂದಿರುವ ಕೃತಿಗಳಲ್ಲಿ ಹೆಚ್ಚು ಚರ್ಚೆಗೆ ಒಳಗಾಗದೆ ಇರುವ ಒಂದು ಅಧ್ಯಾಯ ಪ್ರಸ್ತುತ ಪುಸ್ತಕದಲ್ಲಿದೆ. ಅದು ಸಂಶೋಧನ ಮೌಲ್ಯಮಾಪನಕ್ಕೆ ಸಂಬಂಧಿಸಿದ್ದು. ಈ ಕುರಿತು ಕೃತಿಕಾರರೇ ಆರಂಭದಲ್ಲಿ "ಇಂದಿನ ಕನ್ನಡ ಅಧ್ಯಯನದ ಎಲ್ಲಾ ಕ್ಷೇತ್ರಗಳಿಗೂ ತೀವ್ರವಾದ ಕಾಯಕಲ್ಪವು ನಡೆಯಬೇಕಾದ ಅಗತ್ಯವಿದೆ. ಅವುಗಳ ಪರಿಮಾಣ ಮತ್ತು ಗುಣ ಮಟ್ಟಗಳ ರಕ್ಷಣೆಯ ಬಗೆಗೆ ಗಂಭೀರವಾಗಿ ಚಿಂತಿಸಬೇಕಾದ ಕಾಲ ಬಂದಿದೆ. ಸಮರ್ಪಕವಾದ ಗುಣಮಟ್ಟನಿಯಂತ್ರಣವ್ಯವಸ್ಥೆ Quality Control Measure)ಯ ಅಭಾವವು ಒಟ್ಟಾರೆಯಾದ ಕನ್ನಡದ ಅಪಮೌಲ್ಯೀಕರಣದಲ್ಲಿ

ಪರಿಣಾಮಿಸಿರುವುದನ್ನೂ ಕಾಣಬಹುದಾಗಿದೆ. ಈ ಮಾತಿಗೆ ಕನ್ನಡ ಸಂಶೋಧನೆಯ ಪರಿಸರವೂ ಹೊರತಾಗಿಲ್ಲ" (ಪುಟ 86) ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸಂಶೋಧನ ರಂಗದಲ್ಲಿನ ಒಳವಿನ್ಯಾಸಗಳು, ಅದರಿಂದಾಗುವ ತೊಂದರೆಗಳ ವಿಚಾರ ವಿಮರ್ಶೆಯೂ ಇಲ್ಲಿ ಬಂದಿದೆ. ಸಂಶೋಧಕನಿಗೆ ಪದವಿಯ ಮೇಲೆಯೇ ಕಣ್ಣು, ಮಾರ್ಗದರ್ಶಕ ಇಂತಿಷ್ಟು ವಿದ್ಯಾರ್ಥಿಗಳಿಗೆ ಯಶಸ್ವಿಯಾಗಿ ಮಾರ್ಗದರ್ಶನ ಮಾಡಿದ್ದೇನೆ ಎನ್ನುವ ಹೆಗ್ಗಳಿಕೆ, ಯಾಂತ್ರಿಕವಾಗಿ ಬಿಡುವ ಮೌಲ್ಯಮಾಪನ ಇವೆಲ್ಲವುಗಳಿಂದ ಒಟ್ಟು ವಿನ್ಯಾಸವೇ ಹಾಳಾಗುತ್ತದೆ. ಆದ್ದರಿಂದ ಮೌಲ್ಯಮಾಪನದ ಸಂದರ್ಭದಲ್ಲಿ ಹೆಚ್ಚು ಕಾಳಜಿಯನ್ನು ವಹಿಸಬೇಕೆಂಬ ಲೇಖಕರ ಮಾತು ನಿಜವೇ ಆಗಿದೆ. "ಮೌಲ್ಯಮಾಪನ ವಿಧಾನವು ಸಂಶೋಧನ ಶಾಸ್ತ್ರದ ಮಹತ್ವದ ಪರಿಕರಗಳಲ್ಲಿ ಒಂದಾಗಿದೆ." (ಪುಟ 88) ಎಂದಿದ್ದಾರಲ್ಲದೇ ಆ ಮೂಲಕ ಸಂಶೋಧನ ಪ್ರಬಂಧಗಳ ಮೌಲ್ಯಮಾಪನವನ್ನು ಶಾಸ್ತ್ರೀಯಗೊಳಿಸುವ ಬಗೆಯನ್ನು ಸೂಚಿಸಿದ್ದಾರೆ. ಒಂದು ಉತ್ತಮ ಮಹಾಪ್ರಬಂಧ ಹೇಗಿರಬೇಕು ಎಂಬುದನ್ನು ಈ ಅಧ್ಯಾಯ ಸಂಶೋಧಕ, ಮಾರ್ಗದರ್ಶಕ, ಮೌಲ್ಯಮಾಪಕ, ಓದುಗ ಇವರೆಲ್ಲರಿಗೂ ತಿಳಿಸಿಕೊಡುತ್ತದೆ. ಇಲ್ಲಿ ಎಲ್ಲರ ಜವಾಬ್ದಾರಿಯೂ ಮಹತ್ವದ್ದೆಂಬುದನ್ನು ಡಾ|| ತಾಳ್ತಜೆ ಅವರು ಪುನರುಚ್ಚರಿಸಿದ್ದಾರೆ.

"ಸಂಶೋಧನೆಯು ಕೇವಲ ಶೈಕ್ಷಣಿಕ ಕ್ರಿಯೆ ಆಗಬಾರದು." ವಿಷಯದ ಆಯ್ಕೆಯನ್ನು ವೈಯಕ್ತಿಕ ನಿರ್ಣಯಗಳಿಗೆ ಬಿಡುವುದರ ಬದಲಿಗೆ ಆಯಾ ಕ್ಷೇತ್ರದ ತಜ್ಞರ ಮಾರ್ಗದರ್ಶನವನ್ನು ಪಡೆದುಕೊಳ್ಳುವುದು, ಹಾಗೆಯೇ ಅಭಿರುಚಿಗೆ ಯೋಗ್ಯ ವಿಷಯದ ಆಯ್ಕೆಯ ಕಡೆಗೂ ಲೇಖಕರು ಗಮನಹರಿಸಿದ್ದಾರೆ. ನಮ್ಮ ಸಂಶೋಧನ ಕ್ಷೇತ್ರದ ಮಿತಿಯನ್ನು ಬೊಟ್ಟು ಮಾಡಿ ತೋರಿಸುವುದು ಇಲ್ಲಿ ಅವರಿಗೆ ಸಾಧ್ಯವಾಗಿದೆ. 'ಇಂದಿನ ಸಂಶೋಧನೆ ಮೂಲತಃ ಸರ್ವೇಕ್ಷಣೆ, ಪರಿವೀಕ್ಷಣೆ ಮತ್ತು ಸ್ವಲ್ಪ ಮಟ್ಟಿನ ಚಾರಿತ್ರಿಕ ದಾಖಲೆಗಳ ಮೇಲೆ ಆಧರಿಸಿದೆ.' ಈ ನಿಟ್ಟಿನಿಂದಲೂ ನಾವು ಹೊಸತನ ರೂಢಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ಇಲ್ಲಿ ಒತ್ತಿ ಹೇಳಲಾಗಿದೆ.

ಸಂಶೋಧನರಂಗದಲ್ಲಿ ಎದ್ದು ಕಾಣುವುದು ಅರ್ಥಪೂರ್ಣ ರೇಖಾಚಿತ್ರಗಳು. ಪುಟಗಟ್ಟಲೆ ವಿವರಣೆಯಿಂದಲೂ ಮನದಟ್ಟಾಗದ ವಿಚಾರಗಳನ್ನು ಈ ರೇಖಾಚಿತ್ರಗಳಿಂದ ತಿಳಿದುಕೊಳ್ಳಲು ಸಾಧ್ಯವಿದೆ ಎಂಬುದನ್ನು ಇಲ್ಲಿ ಲೇಖಕರು ಕಂಡುಕೊಂಡಿದ್ದಾರೆ. ಇಲ್ಲಿ ಕೃತಿಕಾರರ ವೈಜ್ಞಾನಿಕ ಹಾಗೂ ಶಾಸ್ತ್ರೀಯ ದೃಷ್ಟಿಕೋನ ಮತ್ತಷ್ಟು ಖಚಿತವಾಗುತ್ತದೆ. ಇದು ಸಂಶೋಧನ ಶಾಸ್ತ್ರಕ್ಕೆ ತಾಳ್ತಜೆ ಅವರ ಕೊಡುಗೆಯೂ ಹೌದು. ಸಂಶೋಧನ ಶಾಸ್ತ್ರವನ್ನು ವಿವರಿಸುವ ಸಂದರ್ಭದಲ್ಲಿ ವಿದ್ವಾಂಸರು ರೇಖಾಚಿತ್ರವನ್ನು ಬಳಸಿಕೊಂಡದ್ದು ಇಲ್ಲವೇ ಇಲ್ಲ ಎನ್ನಬಹುದು.

ಕ್ಷೇತ್ರಕಾರ್ಯವನ್ನು ಆಧರಿಸಿ ಸಂಶೋಧನೆಯಲ್ಲಿ ತೊಡಗುವವರಿಗೆ ಬೇಕಾದ ಅನೇಕ ಹೊಸ ವಿಚಾರಗಳನ್ನು 'ಅಸಂಪ್ರದಾಯಿಕ ಮಾಹಿತಿ ಮೂಲ' ಎಂಬ ಅಧ್ಯಾಯದಲ್ಲಿ ವಿವರಿಸಲಾಗಿದೆ. ಡಾ|| ತಾಳ್ತಜೆ ಅವರ ಮೂರು ದಶಕಗಳ ಸಾಹಿತ್ಯ ಬೋಧನಾನುಭವ, ಹತ್ತಾರು ವರ್ಷಗಳ ಸಂಶೋಧನ ಮಾರ್ಗಕ್ರಮಣ, ವಿವಿಧ ಕ್ಷೇತ್ರಗಳಲ್ಲಿ ತಜ್ಞರಾಗಿರುವವರ ಸಂಪರ್ಕ, ವಿಚಾರ ವಿನಿಮಯಗಳ ಹಿನ್ನೆಲೆ, ಸೂಕ್ಷ್ಮ ದೃಷ್ಟಿಕೋನ, ವಸ್ತುನಿಷ್ಠತೆ ಹಾಗೂ ಅನ್ವಯಿಕತೆ ಈ ಕೃತಿಯಲ್ಲಿ ಎದ್ದು ಕಾಣುವ ಅಂಶ. ಇದೆಲ್ಲ ಈ ಕೃತಿಯ ಧನಾತ್ಮಕ ಅಂಶಗಳೂ ಹೌದು. ಸಂಶೋಧನ ರಂಗ ಎದುರಿಸುತ್ತಿರುವ ಅನೇಕ ಬಿಕ್ಕಟ್ಟುಗಳನ್ನು ಬಿಡಿಸಲು ಇಲ್ಲಿನ ಸಲಹೆ ಸೂಚನೆಗಳು ಮಾರ್ಗದರ್ಶಿಯಾಗಿವೆ. ಒಟ್ಟಿನಲ್ಲಿ ಕನ್ನಡ ಸಂಶೋಧನ ರಂಗದ ಸ್ಥಿತಿಗತಿ, ಅಲ್ಲಿ ಆದದ್ದೇನು ? ಆಗಬೇಕಾದದ್ದೇನು ? ಅದು ಭವಿಷ್ಯದಲ್ಲಿ ಪಡೆದುಕೊಳ್ಳಬೇಕಾದ ರೂಪುರೇಷೆ, ದಿಕ್ಕು ದಿಸೆಗಳನ್ನು ತೋರಿಸಿಕೊಡುವಲ್ಲಿ ಡಾ|| ತಾಳ್ತಜೆ ಅವರು ಬಹು ಮಟ್ಟಿಗೆ ಯಶಸ್ವಿಯಾಗಿದ್ದಾರೆ. ಸಂಶೋಧನ ರಂಗದಲ್ಲಿ ತೊಡಗಿಕೊಂಡವರಿಗೆ, ತೊಡಗಿಸಿಕೊಳ್ಳುವವರಿಗೆ, ಆ ಕ್ಷೇತ್ರದಲ್ಲಿ ಆಸಕ್ತಿ ಇರುವವರೆಲ್ಲ ಓದಲೇ ಬೇಕಾದ ಕೃತಿಯಿದು.

ಡಾ|| ಜಿ. ಎನ್. ಉಪಾಧ್ಯ

ತುಮಕೂರು ಜಿಲ್ಲೆಯ ಮೂವರು ಕೀರ್ತನಕಾರರು*

ಇದೊಂದು ಕಿರು ಪಿ.ಎಚ್.ಡಿ. ಪ್ರಬಂಧವಾಗಿದೆ. ಅದೇಕೆ ? ಕಿಂಚಿತ್ ಹಿಗ್ಗಿಸಿದರೆ ಪಿಎಚ್‌ಡಿ ಪ್ರಬಂಧವೇ ಹೌದು. ಹರಿದಾಸ ಸಾಹಿತ್ಯ ಎಂಬ ವಾಹಿನಿಯಲ್ಲಿ ಪರಮಾತ್ಮ ತತ್ತ್ವದ ಸ್ವರೂಪದಲ್ಲಿರುವ ತುಂಬ ವಿಶಾಲ ಮನೋಭಾವನೆಯನ್ನು ಇದರೊಳಗಿನ ಎಲ್ಲ ಪ್ರಬಂಧಗಳು ಸೂಚಿಸಲು ಪ್ರಯತ್ನಿಸಿವೆ. ಅಷ್ಟೇ ಅಲ್ಲ ಭಕ್ತಿ ಪರಂಪರೆಯಲ್ಲಿ 'ದಾಸ' ಕ್ಷೇತ್ರದ ಒಳನಾಡಿಯನ್ನು ಸ್ಪಂದಿಸಿ, ಅದರ ಮೂಲಕ ಭಾಗವತ ಧರ್ಮದ ತಂಬೂರಿಯನ್ನು ಮೀಟಿದೆ. ಹಲವು ನಾಮಗಳಿಗೆ "ಹೂಂ"ಗುಡುವ ದೇವನೊಬ್ಬ. ಆತನನ್ನು ಪಡೆಯುವ ಭಕ್ತಿಮಾರ್ಗದ ಸ್ವರೂಪ ಹೊರಗಣ್ಣಿಗೆ ಬೇರೆ ಎನಿಸಿದರೂ ಒಳಬೆಳಗು ಒಂದೇ ಬಗೆಯದು. ಹೀಗಾಗಿ ನಾರದನ ಭಕ್ತಿ ಸೂತ್ರದ ಒಳಬೆಳಗನ್ನು ವಿಸ್ತರಿಸಿ ದಿಗಂಬರಗೊಳಿಸುವ ಪ್ರಯತ್ನದ ಸೆಳಕುಗಳು ಈ ಪ್ರಬಂಧಗಳಲ್ಲಿ ಸುವರ್ಣದ ರೇಖೆಗಳಾಗಿ ಬಿಂಬಿಸಿವೆ. ಶ್ರೀ ವೈಷ್ಣವ ದಾಸರ

---

* ತುಮಕೂರು ಜಿಲ್ಲೆಯ ಮೂವರು ಕೀರ್ತನಕಾರರು–ಲೇಖಕರು : ನಾ. ಗೀತಾಚಾರ್ಯ ಪ್ರ : ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬಿ. ವೀರಭದ್ರಯ್ಯ (ಅಧ್ಯಕ್ಷರು), ವಿನೋಬನಗರ, ತುಮಕೂರು–572 101, 1998, ಕ್ರೌನ್ ಅಷ್ಟದಳ, ಪುಟ 65, ರೂ. 25–00.

ಕೊಡುಗೆಗಳನ್ನು ಕುರಿತು, ಅದ್ವೈತ ದಾಸರನ್ನು ಕುರಿತು ಹೊಸ ಶೋಧಗಳಿಗೆ ಚಿಂತನೆಯನ್ನು ಒದಗಿಸಿದೆ. ಮುಂದಿನ ಅಂಚು ವಿಶ್ವದ ಭಕ್ತಿ ಸಾಹಿತ್ಯದ ಮೂಲ ನೆಲೆಯ ಸೆಲೆಗೆ ಸ್ಪಂದನ ನೀಡುವತ್ತ ಸಾಧ್ಯವಾಗಬಹುದು. ಸೂಫಿ ಸಂತರು, ಏಸು ದಾಸರು–ಎಲ್ಲರೂ ಈ ವಾಹಿನಿಗೆ ಬಂದು ಸೇರುವ ದೆಸೆ ಒಳ್ಳೆಯದೇ ಆಗಿದೆ.

ಈ ದಾಸ ಪರಂಪರೆಯಲ್ಲಿ ಬರುವ ದಾಸರ ಗುರು-ದೇವ ಯಾರೇ ಇರಲಿ ಅವರೆಲ್ಲ ಭಕ್ತಿಯ ಸಹಜ ಮಾರ್ಗದಿಂದ ಮಾನವನ ಬದುಕಿಗೆ ದೈವತ್ವದ ಸಂಜೀವಿನಿಯನ್ನೇ ಒದಗಿಸಲು ಪ್ರಯತ್ನಿಸಿದವರು ಅದೇ ರೀತಿ ಶ್ರೀ ವೈಷ್ಣವ ದಾಸರು ಅದ್ವೈತ ದಾಸರು ಈ ಕ್ರಮದಿಂದ ಹೊರಗಿನವರಲ್ಲ. ಏಕೆಂದರೆ ಅವರೂ ಕೂಡ ಹರಿದಾಸರಂತೆ ಮಾನವನ ಹಿತದ ಬದುಕಿಗಾಗಿ ಹಾಲೆರೆದವರು. ಆದಕ್ಕಾಗಿ ವಿಶ್ವದಾದ್ಯಂತ ಇವರನ್ನೆಲ್ಲ ಒಂದೇ ಗುಂಪಿಗೆ ಸೇರಿಸಿ 'ದಾಸ'ರೆಂದು ಕರೆದರೆ ಸಾಕು ಎನ್ನಿಸುತ್ತದೆ.

ಕಲ್ಲೂರು ಸುಬ್ಬಣ್ಣದಾಸರ ಕುರಿತು ಒಂದೆರಡು ವಿಷಯ : ರಾಯಚೂರು ಜಿಲ್ಲೆಯ ಕಲ್ಲೂರಿನಲ್ಲಿ ಸುಬ್ಬಣ್ಣದಾಸರ ಮನೆಯನ್ನು ತೋರಿಸುತ್ತಾರೆ. ಆ ಮನೆಯು ಕಲ್ಲೂರಿನ ಲಕ್ಷ್ಮೀದೇವಿಯ ಮಂದಿರಕ್ಕೆ ಹತ್ತಿರದಲ್ಲಿದೆ. ಇವರ ಕಾರ್ಯಕ್ಷೇತ್ರ ಹರಿದಾಸ ಸಾಹಿತ್ಯದ ಅಡುಂಬೊಲವಾದ ರಾಯಚೂರು ಜಿಲ್ಲೆ. ಈ ಪುಸ್ತಕದ ಪುಟ 4ರಲ್ಲಿ ಉಲ್ಲೇಖಿಸಿದ 'ವ್ಯಾಸವಿಟ್ಠಲ'ರು ಅವರೇ ಆಗಿದ್ದಲ್ಲಿ ಮಾಹಿತಿಯನ್ನು ಪರಿಷ್ಕರಿಸಬೇಕು.

ಒಟ್ಟಾರೆ "ತುಮಕೂರು ಜಿಲ್ಲೆಯ ಮೂವರು ಕೀರ್ತನಕಾರರು" ಪುಸ್ತಕವು ಶೋಧನೆ ಪ್ರತಿಶೋಧನೆಗಳಿಗೆ ಹೊಸ ದಿಸೆಯನ್ನು ಒದಗಿಸಿದೆ. ಜೊತೆಗೆ ಲೇಖನಗಳು ಹೊಸ ಚಿಂತನೆಗಳಿಂದ ಕೂಡಿವೆ. ಇಂತಹ ಪ್ರಬುದ್ಧ ಲೇಖನಗಳನ್ನು ನೀಡಿದ ನಾ. ಗೀತಾಚಾರ್ಯರು ಅಭಿನಂದನಾರ್ಹರು.

ಪ್ರೊ|| ವಸಂತ ಕುಷ್ಟಗಿ

'ಸಾದರ ಸ್ವೀಕಾರ'

ಈ ಸಂಚಿಕೆಯಿಂದ ಈ ಅಂಕಣವನ್ನು ಪ್ರಾರಂಭಿಸಲಾಗಿದೆ. ಗ್ರಂಥಾವಲೋಕನದ ಜೊತೆಗೆ ಸಾದರ ಸ್ವೀಕಾರವೂ ಇರುತ್ತದೆ. ಆಸಕ್ತರು ತಮ್ಮ ಹೊಸ ಪ್ರಕಟನೆಗಳನ್ನು ಕಳುಹಿಸಿ ಕೊಟ್ಟಲ್ಲಿ ಇಲ್ಲಿ ದಾಖಲಿಸಲಾಗುವುದು.

ಲೋಚನ ಸಂಶೋಧನಾತ್ಮಕ ಚಟುವಟಿಕೆಗಳಿಗೆ ಮೀಸಲಾದ ಪತ್ರಿಕೆಯಾದುದರಿಂದ ಸಂಶೋಧನ–ಪಾಂಡಿತ್ಯ ಪ್ರಧಾನವಾದ ಕೃತಿಗಳನ್ನು ಮಾತ್ರ ವಿಮರ್ಶೆ ಮಾಡಲಾಗುವುದು. ವಿಮರ್ಶೆಗಾಗಿ ಎರಡು ಪ್ರತಿಗಳನ್ನು ಕಳುಹಿಸಬೇಕು.

—ಸಂಪಾದಕರು

ವಸ್ತು ಸಂಗ್ರಹ

1. ಕನ್ನಡ ಸಾಹಿತ್ಯ ಸಮ್ಮೇಳನ

ಕನಕಪುರದಲ್ಲಿ ಫೆಬ್ರುವರಿ 24 ರಿಂದ 25ರ ವರೆಗೆ ನಡೆದ 67ನೇ ಕನ್ನಡ ಸಾಹಿತ್ಯ ಸಮ್ಮೇಳನ ಎಂದಿಗಿಂತ ಅದ್ದೂರಿಯಾಗಿ ಜರುಗಿತು. ಸ್ವಾಗತ ಸಮಿತಿ ತನ್ನೆಲ್ಲ ಶಕ್ತಿ ಮೀರಿ ಅತ್ಯುತ್ತಮ ರೀತಿಯಲ್ಲಿ ಸಮ್ಮೇಳನವನ್ನು ವ್ಯವಸ್ಥೆ ಮಾಡಿತ್ತು. ಸಮ್ಮೇಳನದಿಂದ ಸಮ್ಮೇಳನಕ್ಕೆ ಸಿದ್ಧತೆಗಳ-ವ್ಯವಸ್ಥೆ-ಅದ್ದೂರಿಯ ಸ್ವರೂಪ ಮತ್ತು ವೆಚ್ಚ ದುಪ್ಪಟ್ಟುಗೊಳ್ಳುತ್ತಿರುವುದು ಅಭಿನಂದನೀಯವಾದರೂ ಆತಂಕಕಾರಿಯಾದುದು ಎಂಬುದನ್ನು ಮರೆಯುವಂತಿಲ್ಲ. ಕನ್ನಡನಾಡು-ನುಡಿಯ ಸಾರ್ವಭೌಮತೆಯನ್ನು ಮೆರೆಸುವ ಇಂತಹ ಸಮಾರಂಭಗಳು ಎಷ್ಟೆಷ್ಟು ಸುಂದರವಾಗಿ ಅದ್ದೂರಿಯಾಗಿ ನಡೆಯುತ್ತವೆ ಅಷ್ಟಷ್ಟು ಕನ್ನಡ-ಕನ್ನಡಿಗ-ಕರ್ನಾಟಕದ ಘನತೆ-ಗೌರವ ಅಧಿಕಗೊಳ್ಳುತ್ತದೆ. ಕನ್ನಡದ ಅಸ್ತಿತ್ವ ಬಲಗೊಳ್ಳುತ್ತದೆ ಆದರೆ ಈ ಭಾರೀ ವ್ಯವಸ್ಥೆ-ವೆಚ್ಚ ಮುಂದಿನ ಸಮ್ಮೇಳನ ನಡೆಸುವವರನ್ನು ನಡುಗಿಸುವ, ಸವಾಲಾಗುವ, ಸಾರ್ವಜನಿಕ ವಲಯದಲ್ಲಿ ವ್ಯರ್ಥವೆನಿಸುವ, ಅನಗತ್ಯ ಟೀಕೆ-ಟಿಪ್ಪಣಿಗಳಿಗೆ ಆಸ್ಪದವೀಯುವ ಆತಂಕವನ್ನೂ ಹುಟ್ಟಿಸುತ್ತದೆ. ಆದ್ದರಿಂದ ಮುಂದಿನ ಸಮ್ಮೇಳನಗಳಲ್ಲಿ ಈ ಬಾಹ್ಯ ವ್ಯವಸ್ಥೆಗೆ ಒಂದು ಮಿತಿಯನ್ನು ರೂಪಿಸುವತ್ತ ಈಗಿನಿಂದಲೇ ಆಲೋಚಿಸುವುದೊಳಿತು. ಇಲ್ಲದಿದ್ದಲ್ಲಿ ನಾವು ಹಿಂದಿನಿಂದ ಹೇಳಿಕೊಂಡು ಬರುತ್ತಿರು[illegible]ರ್ಷಕ್ಕೊಮ್ಮೆ-ಒಬ್ಬ ಅಧ್ಯಕ್ಷರ ಅವಧಿಯಲ್ಲಿ ಒಂದು ಎಂಬಂತೆ-ಸಮ್ಮೇಳನ ನಡೆಸುವ ಬಗ್ಗೆ ಚಿಂತನೆ ರೂಪಗೊಳ್ಳುವುದಕ್ಕೆ ಇವೆಲ್ಲ ಸಹಕಾರಿಯಾಗುತ್ತವೆ. ಸಾಮಾನ್ಯವಾಗಿ ಎಲ್ಲ ಸಮ್ಮೇಳನಗಳಲ್ಲೂ ವ್ಯವಸ್ಥೆಯಲ್ಲಾಗುವ ಏರುಪೇರುಗಳಿಂದಲೇ ಟೀಕೆ ಟಿಪ್ಪಣಿಗಳು ಉದ್ಭವವಾದರೆ ಈ ಸಮ್ಮೇಳನ ಅದಕ್ಕೆ ತದ್ವಿರುದ್ಧವಾದದ್ದು ಒಂದು ವಿಚಿತ್ರ. ಸ್ವಾಗತ ಸಮಿತಿಯ ಆತಿಥ್ಯ-ವ್ಯವಸ್ಥೆಗಳಲ್ಲಿ ಎರಡು ಮಾತಿಲ್ಲ. ಎಲ್ಲರೂ ಸಮೂಹ ಮಾಧ್ಯಮಗಳೂ-ಮುಕ್ತವಾಗಿ ಹೊಗಳಿದ್ದಾರೆ. ಆದರೆ ಸಮ್ಮೇಳನದ ಗೋಷ್ಠಿಗಳಲ್ಲಿ ಅವುಗಳಿಗೆ ಆಯ್ಕೆ ಮಾಡಿದ್ದ ಉಪನ್ಯಾಸಕ-ಕವಿಗಳಲ್ಲಿ ಎದ್ದು ಕಾಣುವ ತಾರತಮ್ಯವಿದ್ದುದನ್ನು ಎಲ್ಲರೂ ಆಕ್ಷೇಪಿಸಿದ್ದಾರೆ. ಅಖಿಲ ಭಾರತ ಮಟ್ಟದ ಸಮ್ಮೇಳನವೆಂದು ಹೇಳುತ್ತ ಅದಕ್ಕೆ ಅನುಗುಣವಾಗಿ ಗೋಷ್ಠಿಗಳು ಘನತೆ ಗೌರವಗಳನ್ನು ಕಾಯ್ದುಕೊಳ್ಳದೆ ಹೋದಲ್ಲಿ ಸಮ್ಮೇಳನ ತನ್ನ ಅರ್ಥವನ್ನೇ ಕಳೆದುಕೊಂಡು ಬಿಡುತ್ತದೆ. ವಿಷಯಗಳ ಆಯ್ಕೆ ಮತ್ತು ಉಪನ್ಯಾಸಕ-ಕವಿಗಳ ಆಯ್ಕೆಯಲ್ಲಿ ರಾಜ್ಯಮಟ್ಟದಲ್ಲಿ ಪ್ರತಿನಿಧಿಸು

ಪಂಡಿತರನ್ನೇ ಆಯ್ಕೆ ಮಾಡಬೇಕಾಗುತ್ತದೆ. ಈ ಬಾರಿ ಹಾಗಾಗದೆ ಪರಿಷತ್ತು ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸದೆ ಇರುವುದು ಒಂದು ಶಾಶ್ವತದೋಷವಾಗಿ ದಾಖಲಾಗಿದೆ.

ಸಮ್ಮೇಳನಾಧ್ಯಕ್ಷರ ಆಯ್ಕೆ ಅತ್ಯಂತ ಸೂಕ್ತವಾದದ್ದಾಗಿದೆ. ಡಾ|| ಎಸ್. ಎಲ್. ಭೈರಪ್ಪನವರು ತುಂಬ ನಿಕೃಷ್ಟವಾದ ಅಧ್ಯಕ್ಷ ಭಾಷಣವನ್ನೇ ನೀಡಿದ್ದಾರೆ. ಅವರ ಭಾಷಣದ ಕೆಲವು ಅಂಶಗಳ ಬಗ್ಗೆ ಪಾರಂಪರಿಕ ಮೌಲ್ಯಗಳ ಹಿನ್ನೆಲೆಯಲ್ಲಿ ಗ್ರಹಿಸಿದ ಕಾರಣದಿಂದ ಜಾತಿ ಬಣ್ಣಕ್ಕೆ ತಿರುಗಿ ತೀವ್ರವಾದ ಪ್ರತಿಭಟನೆ ನಡೆಯಿತಾದರೂ ಅದು ಸಭ್ಯತೆಯ ಮತ್ತು ಸಂಯಮದ ಎಲ್ಲೆಯನ್ನು ಮೀರಿ ಆವೇಶದ ಕೈಗೆ ಬುದ್ಧಿಯನ್ನು ಕೊಟ್ಟ ದುಡುಕುತನವೇ ವಿನಾ ಸಾತ್ವಿಕ ಪ್ರತಿಭಟನೆಯಾಗಲಿಲ್ಲ. ಸಾಹಿತ್ಯದಲ್ಲಿ ಸಾತ್ವಿಕ ಪ್ರತಿಭಟನೆ, ವಸ್ತುನಿಷ್ಠ ವಿಮರ್ಶೆ, ಕ್ರಾಂತಿಕಾರಿ ಚಿಂತನೆಯನ್ನು ಸಾಹಿತ್ಯದ ಮೌಲ್ಯವನ್ನು ಇನ್ನಷ್ಟು ವಿಸ್ತರಿಸುತ್ತದೆ. ಇದು ಇಂತಹ ಮೌಲಿಕ ಪ್ರತಿರೋಧವಾಗದೆ ಕೇವಲ ತೋರಿಕೆಯ ವಿರೋಧವಾದದ್ದು ವಿಪರ್ಯಾಸ.

ನಮ್ಮ ಪ್ರತಿಷ್ಠಾನದ ಅಧ್ಯಕ್ಷರಾಗಿಯೂ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದ ಎನ್. ಬಸವಾರಾಧ್ಯರ ಸಾರಥ್ಯದಲ್ಲಿ ನಡೆದ ಈ ಪ್ರಥಮ ಸಮ್ಮೇಳನ ಒಟ್ಟಾರೆಯಾಗಿ ಯಶಸ್ವಿಯಾಯಿತು.

2. ಶತಾಯುಷಿ ಎ. ಎನ್. ಮೂರ್ತಿರಾವ್ :

ಈ ಶತಮಾನದ ಹಿರಿಯರೂ ಶ್ರೇಷ್ಠ ಚಿಂತಕರೂ. ಪಂಪ ಪ್ರಶಸ್ತಿ ವಿಜೇತ ಸಾಹಿತಿಗಳೂ ನಮ್ಮ ಪ್ರತಿಷ್ಠಾನದ ಗೌರವ ಸದಸ್ಯರೂ ಆದ ಪ್ರೊ|| ಎ. ಎನ್. ಮೂರ್ತಿರಾವ್ ಅವರು 1999 ಜನವರಿಯಂದು ನೂರನೇ ವರ್ಷಕ್ಕೆ ಪದಾರ್ಪಣ ಮಾಡುವುದರ ಮೂಲಕ ಶತಾಯುಷಿಗಳೆನಿಸಿದರು ಕನ್ನಡ ಸಾಹಿತ್ಯ ವಲಯದಲ್ಲಿ ಇದೊಂದು ಅಪೂರ್ವ ಸುಯೋಗ. ಹೆಸರಾಂತ ಸಾಹಿತಿಗಳಲ್ಲಿ ಶತಾಯುಷಿಗಳೆನಿಸಿಕೊಂಡವರಲ್ಲಿ ಶ್ರೀಯುತರೇ ಪ್ರಥಮರು. ನಾಡಿನ ಹಲವು ಸಂಘ ಸಂಸ್ಥೆಗಳೂ ಗಣ್ಯರೂ, ಸರ್ಕಾರವೂ ಮೂರ್ತಿರಾಯರಿಗೆ ಅಭಿನಂದನೆಯ ಮಳೆಗರೆದರು. ಪ್ರತಿಷ್ಠಾನವೂ ಈ ಸಂದರ್ಭದಲ್ಲಿ ವಿಶೇಷವಾಗಿ ಅಭಿನಂದಿಸಿ ಅವರಿಗೆ ಇನ್ನೂ ಹೆಚ್ಚಿನ ಆಯುಷ್ಯ ಆರೋಗ್ಯ ಭಾಗ್ಯ ಲಭಿಸಲೆಂದು ಆಶಿಸುತ್ತದೆ.

3. ಪ್ರತಿಷ್ಠಾನದ ದ್ವಿದಶಮಾನೋತ್ಸವ :

ಇದೇ ಮೇ 6ಕ್ಕೆ ಪ್ರತಿಷ್ಠಾನ ೨೦ನೇ ವರ್ಷಕ್ಕೆ ಅಡಿಯಿಟ್ಟಿದ್ದು ಈ ವರ್ಷ ದ್ವಿದಶಮಾನೋತ್ಸವ ಕಾರ್ಯಕ್ರಮ ನಡೆಸಬೇಕಾಗಿದೆ. ಪ್ರತಿಷ್ಠಾನದ ಕಟ್ಟಡ

ನಿರ್ಮಾಣ ಹಂತದಲ್ಲಿ ಆರ್ಕಿಟೆಕ್ಟ ಗಣೇಶಬಾಬು ಅವರ ಮೇಲ್ವಿಚಾರಣೆಯಲ್ಲಿ ಕಂಟ್ರಾಕ್ಟರ್ ವಿ. ಲಕ್ಷ್ಮೀನಾರಾಯಣ ಅವರು ನಿರ್ಮಿಸುತ್ತಿದ್ದಾರೆ. ನೆಲಮಹಡಿ ನವೆಂಬರ್ ವೇಳೆಗೆ ಸಿದ್ಧವಾಗುವ ಅಂದಾಜಿದ್ದು ಕೂಡಲೆ ಕಚೇರಿಯನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು. ನಮ್ಮ ನಿರೀಕ್ಷೆಯಂತೆ ಕಟ್ಟಡ ನಿಧಿ ಸಂಗ್ರಹ ವಾಗುತ್ತಿಲ್ಲದಿರುವುದರಿಂದ ನಿರ್ಮಾಣ ಕಾರ್ಯವೂ ನಿಧಾನವಾಗುವ ಸಾಧ್ಯತೆಯಿದೆ. ಈ ಕಟ್ಟಡ ನಿರ್ಮಾಣವನ್ನೂ ಒಳಗೊಂಡಂತೆ ಸಾಹಿತ್ಯೋಪಾಸಕರು ಮಾಲೆಯ ೨೦ ಪುಸ್ತಕಗಳ ಪ್ರಕಟನೆ, ಸಂಶೋಧನೆ ಮತ್ತು ಇತರ ಸಾಹಿತ್ಯಶಾಸ್ತ್ರಗಳ ಸಮೀಕ್ಷೆಯ ನ್ನೊಳಗೊಂಡ ಒಂದೆರಡು ವಿಚಾರಗೋಷ್ಠಿಗಳನ್ನೂ ಈ ಸಂದರ್ಭದಲ್ಲಿ ನಡೆಸುವ ಯೋಚನೆಯಿದೆ.

೮ ಕಾರಲ್ ಉರಿಗಳ್ ಸಿಡಿ ಬಾಂಬುಗಳಿಂ
ತೂರಲ್ ಚರೆಗಳ್ ಜಡಿಕೋವಿಗಳಿಂ
ಸಾರಿತ್ತೆನಲಾ ಬಳಿ ಸಾವೆನುವೊಲ್
ಕಾರ್ಗಿಲ್ ರಣದೊಳ್ ಗಡಿ ಸೈನಿಕನೇಂ
ಸೋರುತ್ತಿರೆ ನೆತ್ತರು ಗಾಯಗಳಿಂ
ಮೂರ್ಛಾಗತನಾದಡೆಯುಂ ಬೆರಗೇಂ
ಬರ್ದುಂಕಿದನೆಯ್ ಮೃತ್ಯುವಿನಿಂ
ಆರುಂ ಕೊಲಲಾರ್ಪರೆ ಸಾಯದರಂ ?

ಬಿ. ರಾಜಶೇಖರಪ್ಪ

ಮುಂದಿನ ಸಂಚಿಕೆಗಾಗಿ ಸಮಸ್ಯಾಪೂರಣ ವಾಕ್ಯ—
"ಭಾವಿಪೊಡೆ ಸಾರಮೀ ಸಂಸಾರಂ"

ಪ್ರತಿಷ್ಠಾನ ವಾರ್ತೆ

ದತ್ತಿ ಕಾರ್ಯಕ್ರಮಗಳು

1. ಡಾ॥ ಆ. ನೇ. ಉಪಾಧ್ಯೆ ಪ್ರಥಮ ದತ್ತಿ ಉಪನ್ಯಾಸ :

6.2.99 ರಂದು ನಡೆದ ಈ ಕಾರ್ಯಕ್ರಮವನ್ನು ಶ್ರೀ ಎಸ್. ಬಿ. ವಸಂತ ರಾಜಯ್ಯ ಅವರು ಉದ್ಘಾಟಿಸಿದರು. "ಡಾ॥ ಆ. ನೇ. ಉಪಾಧ್ಯೆ ಅವರ ವ್ಯಕ್ತಿತ್ವ ಮತ್ತು ಸಾಧನೆ" ಕುರಿತು ಶ್ರೀಮತಿ ವಿಮಲ ವಸಂತಕುಮಾರ್ ಉಪನ್ಯಾಸ ನೀಡಿದರು.

2. ಡಾ॥ ಡಿ. ಎಲ್. ನರಸಿಂಹಾಚಾರ್ ಪ್ರಥಮ ದತ್ತಿ ಉಪನ್ಯಾಸ :

10-4-99 ರಂದು ಡಾ॥ ಕೆ. ಎಲ್ ಗೋಪಾಲಕೃಷ್ಣಯ್ಯ ಅವರ ಅಧ್ಯಕ್ಷತೆಯಲ್ಲಿ "ಡಾ॥ ಡಿ. ಎಲ್.ಎನ್. ಅವರ ಬದುಕು ಬರಹ" ವಿಷಯ ಕುರಿತು ಶ್ರೀ ಬಿ ವಿ. ವೈಕುಂಠರಾಜು ಅವರಿಂದ ಪ್ರಥಮ ಉಪನ್ಯಾಸ ಜರುಗಿತು.

ಈ ಎರಡೂ ದತ್ತಿ ನಿಧಿಗಳನ್ನು ತಲಾ 5000-00 ರೂ.ಗಳಂತೆ ದಿವಂಗತ ಕಟ್ಟೆ ನಾಗರಾಜು ಅವರು ಪ್ರತಿಷ್ಠಾನದಲ್ಲಿ ಸ್ಥಾಪಿಸಿದ್ದಾರೆ. ಈ ಅವಧಿಯಲ್ಲಿ ಡಿ.ಎಲ್.ಎನ್. ದತ್ತಿನಿಧಿಗೆ ಪ್ರೊ॥ ಎಂ. ಎಚ್. ಕೃಷ್ಣಯ್ಯ, ಶ್ರೀ ಎನ್. ಬಸವಾರಾಧ್ಯ ಮತ್ತು ಮತ್ತು ಮೈಸೂರಿನ ಶ್ರೀ ಜಿ. ಜಿ. ಮಂಜುನಾಥ್ ಅವರುಗಳು ತಮ್ಮ 1,000 ರೂ. ಗಳನ್ನು ನೀಡಿದ್ದಾರೆ.

ಸಾವಿತ್ರಮ್ಮ ದತ್ತಿ ನಿಧಿ ಸಾಹಿತ್ಯ ಪ್ರಶಸ್ತಿ, ರಾಸ ಸಾಹಿತ್ಯ ದತ್ತಿ ವಿಮರ್ಶ ಸ್ಪರ್ಧೆ ಬಹುಮಾನ ಮತ್ತು ಹಸ್ತಪ್ರತಿ ತರಗತಿ ವಿದ್ಯಾರ್ಥಿಗಳಿಗೆ ಅರ್ಹತಾ ಪತ್ರ ವಿತರಣೆ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರು ಇದೇ ಸಂದರ್ಭದಲ್ಲಿ ಇವುಗಳನ್ನೂ ವಿತರಣೆ ಮಾಡಿದರು. ಸಾವಿತ್ರಮ್ಮ ದತ್ತಿನಿಧಿ ಮಕ್ಕಳ ಮತ್ತು ಮಹಿಳಾ ಸಾಹಿತ್ಯ ಪ್ರಶಸ್ತಿಯು 1997ನೇ ಸಾಲಿಗೆ ಮೈಸೂರಿನ ಶ್ರೀಮತಿ ವೈ. ಸಿ. ಭಾನುಮತಿ ಅವರ 'ಗ್ರಂಥ ಸಂಪಾದನೆ ಕೆಲವು ಅಧ್ಯಯನ' ಎಂಬ ಕೃತಿಗೂ 1998ನೇ ಸಾಲಿನ ಮಕ್ಕಳ ಸಾಹಿತ್ಯ ಪ್ರಶಸ್ತಿಗೆ ಬಿಜಾಪುರದ ಶ್ರೀ ಸಿಸು ಸಂಗಮೇಶರ "ಸಿಸು ಸಂಗಮೇಶರ ಆಯ್ದ

ಮಕ್ಕಳ ಕಥೆಗಳು" ಎಂಬ ಕೃತಿಗೂ ದೊರೆತಿದ್ದು ಈ ಪ್ರಶಸ್ತಿಗಳ ಆಯ್ಕೆಗಾಗಿ ಡಾ|| ಪಿ. ವಿ. ನಾರಾಯಣ, ಎಂ. ಜಿ. ನಾಗರಾಜ್, ಡಾ|| ಹೆಚ್. ಎಸ್. ಗೋಪಾಲ ರಾವ್ ಮತ್ತು ಡಾ|| ವರದಾ ಶ್ರೀನಿವಾಸ್, ಜಯಮ್ಮ ಕರಿಯಣ್ಣ, ಇಂದಿರಾ ಹೆಗ್ಗಡೆ ಇವರುಗಳನ್ನೊಳಗೊಂಡ ಸಮಿತಿಗಳನ್ನು ರಚಿಸಲಾಗಿತ್ತು. ಮಕ್ಕಳ ಸಾಹಿತ್ಯಕ್ಕೆ 14 ಕೃತಿಗಳೂ ಮಹಿಳಾ ಸಾಹಿತ್ಯಕ್ಕೆ 12 ಗ್ರಂಥಗಳೂ ಬಂದಿದ್ದವು. ಸಂಸ್ಥಾಪಕ ದಿ|| ಎಂ. ವಿ. ಸೀತಾರಾಮಯ್ಯನವರು ಪ್ರತಿಷ್ಠಾನದಲ್ಲಿ ತಮ್ಮ ತಾಯಿ ಮತ್ತು ಶ್ರೀಮತಿ ಯವರ ಸ್ಮರಣೆಗಾಗಿ ಸ್ಥಾಪಿಸಿರುವ 12 ಸಾವಿರ ರೂ.ಗಳ ದತ್ತಿಯಿಂದ 1000 ರೂ. ಗಳನ್ನು ನೀಡಲಾಗುತ್ತದೆ.

ರಾಸ ಸಾಹಿತ್ಯ ದತ್ತಿನಿಧಿ ಬಹುಮಾನಕ್ಕೆ 1998ನೇ ಸಾಲಿಗೆ "ಈಸಬೇಕು" ಕೃತಿಯ ವಿಮರ್ಶೆ ಪ್ರಬಂಧಕ್ಕೆ ಮೈಸೂರಿನ ಶ್ರೀ ಪಿ. ಗೋಪಾಲಕೃಷ್ಣ ಅವರು ಬಹು ಮಾನ ಪಡೆದಿದ್ದಾರೆ. ಇದರೊಂದಿಗೆ 1997ನೇ ಸಾಲಿನಲ್ಲಿ "ತಲಕಾಡುಗೊಂಡ" ಕೃತಿ ವಿಮರ್ಶೆ ಲೇಖನಕ್ಕೆ ಬಹುಮಾನ ಗಳಿಸಿದ್ದ ನಾ. ವೆಂ. ಶ್ರೀನಾಥ್ ಅವರಿಗೂ ಬಹುಮಾನ ನೀಡಲಾಯಿತು. ಈ ವಿಮರ್ಶೆ ಸ್ಪರ್ಧೆ ಬಹುಮಾನದ ಆಯ್ಕೆಗೆ ಶ್ರೀ ಕೆ. ಎಂ. ಮುನಿಕೃಷ್ಣಪ್ಪ, ಹಾಗೂ ಹರಿಹರ ಪ್ರಿಯ ಅವರು ತೀರ್ಪುಗಾರರಾಗಿದ್ದರು. ಖ್ಯಾತ ಕಾದಂಬರಿಕಾರರೂ ಜನಪ್ರಿಯ ಸಾಹಿತಿಗಳೂ ಆದ ಸಮೇತನಹಳ್ಳಿ ರಾಮರಾಯರು ತಮ್ಮ ಪ್ರಕಾಶನ ಸಂಸ್ಥೆ 'ರಾಸ ಸಾಹಿತ್ಯ'ದ ಹೆಸರಿನಲ್ಲಿ ಸ್ಥಾಪಿಸಿರುವ 5000/- ರೂ.ಗಳ ದತ್ತಿಯಿಂದ 500 ರೂ.ಗಳ ಬಹುಮಾನವನ್ನು ನೀಡಲಾಗುತ್ತದೆ.

ಪ್ರತಿಷ್ಠಾನ ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ಬರುವ 'ಸರಸ್ವತೀ ಪೂಜಾ' ದಿನ ದಿಂದ ನಡೆಸುವ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪ್ರತೀಕರಣ, ದಾಖಲೀಕರಣ ಮತ್ತು ಸಂಪಾದನೆಯ ಕಲೆಯನ್ನು ಪುನರುಜ್ಜೀವನಗೊಳಿಸುವ ಉದ್ದೇಶದ 'ಹಸ್ತಪ್ರತಿ ಶಾಸ್ತ್ರ ತರಗತಿ'ಯ ವಿದ್ಯಾರ್ಥಿಗಳಿಗೂ ಇದೇ ಸಂದರ್ಭದಲ್ಲಿ ಅರ್ಹತಾ ಪತ್ರ ವಿತರಿಸಲಾಯಿತು.

ದಾನಗಳು :

1. ತಿಮ್ಮಪ್ಪದಾಸರ ಬಂಧುಗಳಾದ ವೆಂಕಟದಾಸರ ವಂಶಜರಾದ ಶ್ರೀಮತಿ ನಳಿನಿರಾವ್ ಅವರು 'ತಿಮ್ಮಪ್ಪದಾಸ ಪ್ರಕಾಶನ ನಿಧಿ'ಗಾಗಿ ರೂ. 100-00ಗಳನ್ನು ನೀಡಿದ್ದಾರೆ. ಇದರೊಂದಿಗೆ ಇವರು 1,000 ರೂ. ದಾನಿ ಸದಸ್ಯರೂ ಆಗಿದ್ದಾರೆ.

2. ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ ಅವರ ಪುತ್ರನಿಂದ "ಸೋಸಲೆ ಅಯ್ಯಾಶಾಸ್ತ್ರಿ" ಸ್ಮಾರಕ ದತ್ತಿನಿಧಿಗಾಗಿ ವಿದೇಶಗಳಲ್ಲಿರುವ ಅವರ ಬಂಧುಗಳಾದ

1.	ಹಂಸ ಪ್ರದೀಪರಾವ್ ಯು.ಎಸ್.ಎ.	100 ಡಾಲರ್	(4,160 00)
2.	ನಳಿನಿ ಎಸ್. ರಾಮಚಂದ್ರ ಯು.ಎಸ್.ಎ.	150 ಡಾಲರ್	(6,274 00)
3.	ಸಿ. ವಿ. ರವಿಶಂಕರ್ ಯು.ಎಸ್.ಎ.	300 ಡಾಲರ್	(12,649 00)
4.	ಸುಧೀರ್‌ಶಾಸ್ತ್ರಿ ಯು.ಎಸ್.ಎ.	50 ಡಾಲರ್	(2,025 00)
	ಅವರುಗಳಿಂದ ಒಟ್ಟು	600 ಡಾಲರ್	(25,108 00)

ರೂ. ಗಳನ್ನು ನೀಡಿದ್ದು ಹಿಂದಿನ 23,000-00 ರೂ. ಸೇರಿ ಈವರೆಗೆ ಒಟ್ಟು 48,108.00 ರೂ.ಗಳ ಈ ನಿಧಿಗಾಗಿ ಸಂಗ್ರಹವಾಗಿದೆ.

3 ಶ್ರೀ ಟಿ. ಎನ್. ಮಹದೇವಯ್ಯ ಸ್ಮಾರಕ ದತ್ತಿ ನಿಧಿಗಾಗಿ ತುಮಕೂರಿನ ಪ್ರೊ. ಬಿ. ವೀರಭದ್ರಯ್ಯ ಅವರ ಶ್ರದ್ಧಾಪೂರ್ವಕಪರಿಶ್ರಮದಿಂದ ಡಿಸೆಂಬರ್‌ವರೆಗೆ 3,350-00 ರೂ.ಗಳು ಸಂಗ್ರಹವಾಗಿದೆ ಈ ಸಾಲಿನಲ್ಲಿ.

1.	ಪ್ರೊ|| ಬಿ. ವೀರಭದ್ರಯ್ಯ ತುಮಕೂರು	5,000 00
2.	ಶ್ರೀಮತಿ ಟಿ. ಎಂ. ಅಮೃತಕುಮಾರಿ ತುಮಕೂರು	1,000 00
3.	ಪ್ರೊ|| ಎನ್. ಬಸವಾರಾಧ್ಯ, ಬೆಂಗಳೂರು	150 00
4.	ಶ್ರೀಮತಿ ಗಂಗಾಭವಾನಿ, ಬೆಂಗಳೂರು	2,000 00
	ಒಟ್ಟು	8,150 00

ರೂ. ಗಳನ್ನು ಅವರುಗಳು ದಾನ ಮಾಡಿದ್ದು ಒಟ್ಟು 11,500.00 ರೂ ಗಳು ಜೂನ್‌ವರೆಗೆ ಸಂಗ್ರಹವಾಗಿದೆ.

ಈ ಎಲ್ಲದಾನಿಗಳಿಗೆ ಪ್ರತಿಷ್ಠಾನ ಋಣಿಯಾಗಿರುತ್ತದೆ.

ಅಭಿನಂದನೆ

---

1. ಜ್ಞಾನಪೀಠ ಪ್ರಶಸ್ತಿ :

ಖ್ಯಾತ ನಾಟಕಕಾರ, ಚಿತ್ರನಿರ್ದೇಶಕ ಹಾಗೂ ನಟ ಶ್ರೀ ಗಿರೀಶ ಕಾರ್ನಾಡ್-ಅವರಿಗೆ 1998ನೆಯ ವರ್ಷದ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಕಾರ್ನಾಡರು ಜ್ಞಾನಪೀಠ ಪ್ರಶಸ್ತಿ ಪಾತ್ರರಲ್ಲಿ 34ನೆಯವರು ಹಾಗೂ ಕರ್ನಾಟಕ ರಾಜ್ಯದಲ್ಲಿ ಏಳನೆಯವರು. ಭಾರತದಲ್ಲೇ ಏಳು ಪ್ರಶಸ್ತಿಗಳನ್ನು ಪಡೆದಿರುವ ಏಕೈಕ ಭಾಷೆಯಾಗಿ ಕನ್ನಡ ತನ್ನ ಅಗ್ರಸ್ಥಾನ ಉಳಿಸಿಕೊಂಡಿದೆ. ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತರು, ಮಾಸ್ತಿಯವರು, ವಿ. ಕೃ. ಗೋಕಾಕರು, ಯು. ಆರ್. ಅನಂತ ಮೂರ್ತಿ ಇವರು ಇದೇ ಪ್ರಶಸ್ತಿಯನ್ನು ಪಡೆದ ಹಿಂದಣ ಕನ್ನಡಿಗರು. ಈ ಪ್ರಶಸ್ತಿ ಮೌಲ್ಯ ಐದು ಲಕ್ಷ ರೂ.ಗಳು, ಪ್ರಶಸ್ತಿ ಫಲಕ ಮತ್ತು ವಾಗ್ದೇವಿಯ ಕಂಚಿನ ಪ್ರತಿಮೆಯನ್ನುಳ್ಳದಾಗಿದೆ. 1938ರಲ್ಲಿ ಜನಿಸಿದ ಪ್ರತಿಭಾವಂತರಾದ ಇವರು ಆಕ್ಸ್‌ಫರ್ಡಿನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಇವರ ಅನೇಕ ನಾಟಕಗಳು ಅನೇಕ ಭಾಷೆಗಳಿಗೆ ಭಾಷಾಂತರಗೊಂಡಿವೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಅಧ್ಯಕ್ಷರೂ ಆಗಿದ್ದರು. ರಾಷ್ಟ್ರದಲ್ಲೇ ಶ್ರೇಷ್ಠ ಮಟ್ಟದ ನಾಟಕಕಾರರಾಗಿ ಕಲಾವಿದರಾಗಿ ಕಾರ್ನಾಡ್ ಜನಪ್ರಿಯರಾಗಿದ್ದಾರೆ. ರಾಜ್ಯದ, ದೇಶದ ಅನೇಕ ಪ್ರಶಸ್ತಿಗಳನ್ನು ಮಾತ್ರವಲ್ಲದೆ, ಅಂತಾರಾಷ್ಟ್ರೀಯ ಪುರಸ್ಕಾರಗಳೂ ಅವರಿಗೆ ಪ್ರಾಪ್ತವಾಗಿವೆ.

2. ಕನಕ-ಪುರಂದರ ಪ್ರಶಸ್ತಿ ಮತ್ತು ಜಾನಪದ ಪ್ರಶಸ್ತಿ :

ಕರ್ನಾಟಕ ಕೀರ್ತನ-ಸಂಗೀತ ಪಿತಾಮಹರಾದ ಪುರಂದರದಾಸ-ಕನಕದಾಸರ ಹೆಸರಿನಲ್ಲಿ ಕರ್ನಾಟಕ ಸರಕಾರ ಸ್ಥಾಪಿಸಿರುವ ಈ ಪ್ರತಿಷ್ಠಿತ ಪ್ರಶಸ್ತಿ-೧೯೯೮ನೆಯ ವರ್ಷದ ಕೊಡುಗೆಯಾಗಿ ರಾಜ್ಯದ ಶ್ರೇಷ್ಠ ಮೃದಂಗ ತಬಲಾವಾದಕರಾದ ಶ್ರೀ ಎಂ. ಎಸ್. ರಾಮಯ್ಯ ಅವರಿಗೆ ಕೊಡಲಾಗಿದೆ. ಹಾಗೆಯೇ ಜಾನಪದ ಕ್ಷೇತ್ರಕ್ಕೆ ಅಮೂಲ್ಯ ಸೇವೆ ಸಲ್ಲಿಸಿದವರಿಗಾಗಿ ಮುಡಿಪಾಗಿರುವ ಜಾನಪದ ಶ್ರೀ ಪ್ರಶಸ್ತಿಯನ್ನು ಶ್ರೇಷ್ಠ ಯಕ್ಷಗಾನ ಪಾತ್ರಧಾರಿಯೂ ಯಕ್ಷಗಾನ ಅಧ್ಯಾಪಕರೂ ಮದ್ದಳೆಯ ವಾದಕರೂ ಆಗಿ ಖ್ಯಾತರಾದ ಶ್ರೀ ಹಿರಿಯಡ್ಕ ಗೋಪಾಲರಾವ್ ಅವರಿಗೆ ನೀಡಲಾಗಿದೆ.

3. ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ :

೧೯೯೮ನೆಯ ವರ್ಷದ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗಳನ್ನು ಡಾ|| ಚೆನ್ನಣ್ಣ ವಾಲೀಕಾರ, ಪ್ರೊ|| ಬರಗೂರು ರಾಮಚಂದ್ರಪ್ಪ, ಡಾ|| ಪಿ. ಎಸ್. ರಾಮಾನುಜಂ, ಡಾ|| ವಿಜಯಾ ದಬ್ಬೆ ಮತ್ತು ಡಾ|| ಸಿದ್ಧಲಿಂಗ ಪಟ್ಟಣಶೆಟ್ಟಿ–ಈ ಐವರು ಪಡೆದಿದ್ದಾರೆ. ವಿವಿಧ ಸಾಹಿತ್ಯ ಪ್ರಕಾರದ ಕೃತಿಗಳಿಗಾಗಿ ೧೮ ಮಂದಿ ವಿದ್ವಾಂಸರಿಗೆ ೧೯೯೭ನೆಯ ವರ್ಷದ ಪುಸ್ತಕ ಬಹುಮಾನಗಳನ್ನು ನೀಡಲಾಗಿದೆ.

4. ಅತ್ತಿಮಬ್ಬೆ ಪ್ರಶಸ್ತಿ :

ದಾನಚಿಂತಾಮಣಿ ಅತ್ತಿಮಬ್ಬೆಯ ಹೆಸರಿನಲ್ಲಿ ಪ್ರತಿವರ್ಷ ಶ್ರೇಷ್ಠ ಲೇಖಕಿಯೊಬ್ಬರಿಗೆ ನೀಡುತ್ತಿರುವ ೧೯೯೮ನೆಯ ವರ್ಷದ ಪ್ರಶಸ್ತಿಗೆ ಡಾ|| ಕಮಲಾ ಹಂಪನಾ-ಅವರನ್ನು ಆಯ್ಕೆ ಮಾಡಲಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೌಲಿಕ ಕಾರ್ಯಗಳನ್ನೆಸಗಿ, ಸೃಜನಶೀಲ ಸಾಹಿತ್ಯ, ಗ್ರಂಥ ಸಂಪಾದನೆ, ಸಂಶೋಧನೆಗಳನ್ನೂ ಮಾಡಿರುವ, ಕಮಲಾ ಹಂಪನಾ ಅವರು ಮಹಿಳಾ ಜಾಗೃತಿ ಕ್ಷೇತ್ರದಲ್ಲಿಯೂ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ.

5. ವರ್ಧಮಾನ ಪ್ರಶಸ್ತಿ :

ಮೂಡುಬಿದರೆಯ ವರ್ಧಮಾನ ಪ್ರಶಸ್ತಿ ಪೀಠವು 1997–98ನೆಯ ವರ್ಷದ ವರ್ಧಮಾನ ಪ್ರಶಸ್ತಿಯನ್ನು ಪ್ರೊ|| ಟಿ. ಪಿ. ಅಶೋಕ ಅವರ 'ಪುಸ್ತಕಪ್ರೀತಿ' ಕೃತಿಗೂ ಉದಯೋನ್ಮುಖ ಲೇಖಕ ಪ್ರಶಸ್ತಿಯನ್ನು ಕತೆಗಾರ್ತಿ ಮುಂಬಯಿಯ ವೇಣುಗೋಪಾಲ್ ಅವರ 'ಮುಂಜಾವಿಗೆ ಕಾದವಳು' ಕೃತಿಗೂ ಕೊಡಲಾಗಿದೆ.

6. ಬಸವಶ್ರೀ ಸಾಹಿತ್ಯಶ್ರೀ ಮತ್ತು ಅ.ನ.ಕೃ. ಪ್ರಶಸ್ತಿ :

ಬಸವ ವೇದಿಕೆ ಪ್ರತಿ ವರ್ಷ ವಿತರಣೆ ಮಾಡುತ್ತಿರುವ 'ಬಸವಶ್ರೀ' ಪ್ರಶಸ್ತಿಯನ್ನು ಶ್ರೀ ಕೆ. ಎಂ. ಸಂಜಪ್ಪ ಅವರಿಗೂ "ಸಾಹಿತ್ಯಶ್ರೀ" ಪ್ರಶಸ್ತಿಯನ್ನು ಡಾ|| ಎಂ. ಚಿದಾನಂದ ಮೂರ್ತಿ ಅವರಿಗೂ ನೀಡಲಾಗಿದೆ. ಅ.ನ.ಕೃ. ಪ್ರತಿಷ್ಠಾನ ಅ.ನ.ಕೃ. ಅವರ ಹೆಸರಿನಲ್ಲಿ ಕನ್ನಡ ಧುರೀಣರಿಗೆ ನೀಡುವ 'ಅನಕೃ' ಪ್ರಶಸ್ತಿಯೂ ಡಾ|| ಮೂರ್ತಿ ಅವರಿಗೆ ಲಭಿಸಿದೆ. ಈ ಪ್ರಶಸ್ತಿಯ ಮೊತ್ತ ಹತ್ತು ಸಾವಿರ ರೂ. ನಗದು ಮತ್ತು ಪ್ರಶಸ್ತಿ ಫಲಕ.

7. ಚಿದಾನಂದ ಪ್ರಶಸ್ತಿ :

ಶ್ರೇಷ್ಠ ಸಂಶೋಧಕ ಡಾ|| ಚಿದಾನಂದಮೂರ್ತಿ ಅವರ ಹೆಸರಿನಲ್ಲಿ ನೀಡುವ ಚಿದಾನಂದ ಪ್ರಶಸ್ತಿಯನ್ನು ಹಿರಿಯ ಶಾಸನ ತಜ್ಞ, ಮೈಸೂರು ಪ್ರಾಚೀನ ಸಂಶೋಧನ ಕೇಂದ್ರದ ಗೌರವ ನಿರ್ದೇಶಕ ಡಾ|| ಕೆ. ವಿ. ರಮೇಶ ಅವರಿಗೆ ನೀಡಲಾಯಿತು. ಸಂಶೋಧನೆಯಲ್ಲಿ ವಿಶೇಷ ಸೇವೆ ಸಲ್ಲಿಸಿದವರಿಗೆ ಮುಡಿಪಾದ ಈ ಪ್ರಶಸ್ತಿ ಹತ್ತು ಸಾವಿರ ರೂ. ನಗದು, ಪ್ರಶಸ್ತಿ ಫಲಕ ಸಮೇತವಾದುದು.

8. ಅನುಪಮಾ ಪ್ರಶಸ್ತಿ :

ಕರ್ನಾಟಕ ಲೇಖಕಿಯರ ಸಂಘದ ಪ್ರತಿಷ್ಠಿತ 'ಅನುಪಮಾ ಪ್ರಶಸ್ತಿ' ಈ ಬಾರಿ ಖ್ಯಾತ ಲೇಖಕಿ ಶಾಂತಾದೇವಿ ಮಾಳವಾಡ ಅವರಿಗೆ ದೊರಕಿದೆ. "ಶೂರ ರಾಣಿ ಕೆಳದಿಯ ಚೆನ್ನಮ್ಮ" ಎಂಬ ಕೃತಿಗಾಗಿ ಇದು ದೊರೆಕಿದೆ. ಹತ್ತು ಸಾವಿರ ರೂ.ಗಳು ಮತ್ತು ಫಲಕವನ್ನೊಳಗೊಂಡ ಪ್ರಶಸ್ತಿಯಿದು. ಶ್ರೀಮತಿ ಮಾಳವಾಡರು ತಮಗೆ ದೊರೆತ ಪ್ರಶಸ್ತಿಯ ರೂ.ಗಳನ್ನು ಲೇಖಕಿಯರ ಸಂಘಕ್ಕೇ ಅದರ ಏಳಿಗೆಗಾಗಿ ನೀಡಿದುದಾಗಿ ತಿಳಿದು ಬಂದಿದೆ. ಇದೇ ಸಂದರ್ಭದಲ್ಲಿ ಇದೇ ಲೇಖಕಿಯರ ಸಂಘದಿಂದ ಗೀತಾ ದೇಸಾಯಿ ದತ್ತಿನಿಧಿ ಬಹುಮಾನವನ್ನು ಧರಣೀದೇವಿ ಮಾಲಗತ್ತಿ ಅವರಿಗೆ, ಅವರ "ಸ್ತ್ರೀವಾದ ಮತ್ತು ಭಾರತೀಯತೆ" ಎಂಬ ಕೃತಿಗೆ ಮತ್ತು ಎಚ್. ವಿ. ಸಾವಿತ್ರಮ್ಮ ದತ್ತಿನಿಧಿ ಬಹುಮಾನವನ್ನು ಸಾರಾ ಅಬೂಬಕರ್ ಅವರ "ಬಲಿ" ಕಾದಂಬರಿಗೂ ನೀಡಲಾಗಿದೆ. ಈ ಕಾದಂಬರಿ ಮಲಯಾಳದ 'ಮೋಫಿ' ಎಂಬುದರ ಕನ್ನಡ ಅನುವಾದವಾಗಿ ತಿಳಿದು ಬಂದಿದೆ.

ಈ ಪ್ರಶಸ್ತಿ ಪಾತ್ರರಾದ ಎಲ್ಲ ವಿದ್ವಾಂಸರಿಗೂ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಭಿನಂದನೆಗಳು.

ಶ್ರದ್ಧಾಂಜಲಿ

1. ಪ್ರೊ|| ನೇಗಿನಹಾಳ

ಬೆಳಗಾವಿಯ ಕಿತ್ತೂರು ಚೆನ್ನಮ್ಮ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದು ಕನ್ನಡದಲ್ಲಿ ಹಿರಿಯ ಸಂಶೋಧಕರೂ ಜಾನಪದ ವಿಚಕ್ಷಣರೂ ಆದ ಪ್ರೊ|| ಎಂ. ಬಿ. ನೇಗಿನಹಾಳ ಅವರು ಮೇ, 1999ರಲ್ಲಿ ದಿವಂಗತರಾಗಿದ್ದಾರೆ. ನೇಗಿನಹಾಳರು ಬರೆದ ಪ್ರಾಚೀನ ಕನ್ನಡ ಶಾಸನಗಳು, ಭಾಷಿಕ ಅಧ್ಯಯನ ಸಂಶೋಧನ ಪ್ರಬಂಧ ಶ್ರೇಷ್ಠ ಮಟ್ಟದ ಸಂಶೋಧನೆಯಾಗಿದೆ. ಶಾಸನ ಮತ್ತು ಶಾಸ್ತ್ರ ವಿಷಯಗಳ ಜೊತೆಗೆ ಜಾನಪದ ಕ್ಷೇತ್ರದಲ್ಲಿಯೂ ಅವರ ಸಾಧನೆಗಳಿವೆ. ಹದಿನಾಲ್ಕು ಸಂಶೋಧನ ಗ್ರಂಥಗಳನ್ನು ಪ್ರಕಟಿಸಿರುವ ಡಾ|| ನೇಗಿನಹಾಳ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

2. ಗಣಪತಿ ದಿವಾಣ

ಅನೇಕ ಕನ್ನಡ ಪತ್ರಿಕೆಗಳ ಅಂಕಣ ಬರಹಗಾರರಾಗಿ ಪತ್ರಕರ್ತರೂ ಕವಿಯೂ ಆದ ಗಣಪತಿ ದಿವಾಣ ಅವರು 19–1–1999ರಂದು ಮಂಗಳೂರಿನಲ್ಲಿ ದೀರ್ಘಶ್ವಾಸವನ್ನೆಳೆದರು. ಕಾಸರಗೋಡು ಪರಿಸರದಲ್ಲಿ ಕನ್ನಡಪರ ಪರನಾದ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡವರು ಅವರು. ಪತ್ರಕರ್ತರಾಗಿ ಜನಪ್ರಿಯರಾಗಿದ್ದರು.

ಈ ಸಂಚಿಕೆಯ ಲೇಖಕರು

1. ಬಿ. ರಾಮಸ್ವಾಮಿ
16-2-701/7, ಆನಂದನಗರ
ನ್ಯೂಮಾಲಕ್‌ಪೇಟೆ,
ಹೈದಾರಾಬಾದ್-500 036

2. ಜಿ. ಎನ್. ಉಪಾಧ್ಯ
ಉಪನ್ಯಾಸಕರು, ಕನ್ನಡ ವಿಭಾಗ
ಮುಂಬಯಿ ವಿಶ್ವವಿದ್ಯಾಲಯ
ವಿದ್ಯಾನಗರಿ,
ಮುಂಬಯಿ-400 098

3. ಹೀ. ಚಿ. ಶಾಂತವೀರಯ್ಯ
ಸಾಹಿತಿಗಳು, 9, ಮನುವನ,
ವಿಜಯನಗರ, ಬೆಂಗಳೂರು-40

4. ಡಾ॥ ಎಸ್. ವಿ. ಪ್ರಭಾವತಿ
ಭಾರತೀಯ ಸಂಸ್ಕೃತಿ ವಿದ್ಯಾಪೀಠ
ವಿಜಯನಗರ, ಬೆಂಗಳೂರು-40

5. ಜಿ. ಅಶ್ವತ್ಥನಾರಾಯಣ
95, (ಮಹಡಿ) 34ನೇ ಬಿ ಕ್ರಾಸ್
16ನೇ ಮೈನ್, 4ನೇ 'ಟಿ' ಬ್ಲಾಕ್
ಜಯನಗರ, ಬೆಂಗಳೂರು-11

6. ಡಾ॥ ಉಪ್ಪಂಗಳ ರಾಮಭಟ್ಟ
"ಪರಾಶರ" 8-1-6429
ಸುಧೀಂದ್ರ ತೀರ್ಥಮಾರ್ಗ
ಕುಂಜಿಬೆಟ್ಟು, ಉಡುಪಿ-576 102

7. ಕೆ. ಪಿ. ರಾಜಗೋಪಾಲ್
754, 15ನೇ ಮುಖ್ಯರಸ್ತೆ,
ಬಿ.ಎಸ್.ಕೆ. 2ನೇ ಹಂತ,
ಬೆಂಗಳೂರು-70

8. ವಸಂತ ಕುಷ್ಟಗಿ
26, ಆದರ್ಶನಗರ, ಕಲಬುರ್ಗಿ-1

9. ಆರ್. ಶಂಕರನಾರಾಯಣ್
ಸತ್ಯಶ್ರೀ ನಂ. 67, ಐ.ಟಿ.ಐ.
ಲೇಔಟ್, ವಿದ್ಯಾಪೀಠ,
ಬೆಂಗಳೂರು.85

10. ಎಂ. ಆರ್. ಅನಂತರಾಮಯ್ಯ
ನಂ. 14, ಇಂಚರ, ಐ.ಡಿ.
ಮುಖ್ಯರಸ್ತೆಯ ತುದಿ, (ಆರ್ಚಿನ್
ಪಬ್ಲಿಕ್ ಸ್ಕೂಲ್ ಹಿಂಭಾಗ)
ಗಿರಿನಗರ, 2ನೇ ಫೇಸ್,
ಬೆಂಗಳೂರು-85

11. ವಿದ್ವಾನ್ ತಾಳ್ತಜೆ ಕೃಷ್ಣಭಟ್ಟ
ಪಂಜಳ ಮನೆ ಅಂಚೆ ಉಪ್ಪಿನಂಗಡಿ
574 241-ದಕ್ಷಿಣ ಕನ್ನಡ ಜಿಲ್ಲೆ

12. ಟಿ. ಕೇಶವಭಟ್ಟ
754, 15ನೇ ಮೈನ್, 2ನೇ
ಹಂತ ಬನಶಂಕರಿ, ಬೆಂಗಳೂರು-70

13. ತಲೆಂಗಳ ರಾಮಕೃಷ್ಣ ಭಟ್ಟ
ಅಂಚೆ ಬಾಯಾರು-671 348
ವಯಾ-ಪೈವಳಿಕೆ,
ಕಾಸರಗೋಡು ಜಿಲ್ಲೆ

14. ನಾ. ಗೀತಾಚಾರ್ಯ
ಬಿ.ಎಂ.ಶ್ರೀ, ಸ್ಮಾರಕ ಪ್ರತಿಷ್ಠಾನ,
ಗೋಖಲೆ ಸಾರ್ವಜನಿಕ ಸಂಸ್ಥೆ
ಆವರಣ, ಬಸವನಗುಡಿ,
ಬೆಂಗಳೂರು-7

15. ಬಿ. ರಾಜಶೇಖರಪ್ಪ
2ನೇ ಕ್ರಾಸ್, ಜೆ.ಸಿ.ಆರ್
ಬಡಾವಣೆ, ಚಿತ್ರದುರ್ಗ-571501

ಪ್ರತಿಷ್ಠಾನದ ಗೌರವ ಸದಸ್ಯರು

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಕಳಿಸಬೇಕು

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ. ಆದರೆ, ಕಳಿಸಿದರೆ ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

ವಿನಿಮಯ ಪತ್ರಿಕೆಗಳು

1) ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕ, ಮೈಸೂರು 2) ಸಾಧನೆ, ಬೆಂಗಳೂರು 3) ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು. 4) ಮಿಥಿಕ್ ಸೊಸೈಟಿ ಜರ್ನಲ್, 5) ಬಸವ ಪಥ, ಬೆಂಗಳೂರು. 6) ಶಂಕರ ಭಾಸ್ಕರ, ಬೆಂಗಳೂರು. 7) ಧರ್ಮಪ್ರಭ, ಬೆಂಗಳೂರು 8) ಜಾನಪದ ಜಗತ್ತು, ಬೆಂಗಳೂರು. 9) ಅನ್ವೇಷಣೆ, ಬೆಂಗಳೂರು. 10) ಅಪರಂಜಿ, ಬೆಂಗಳೂರು 11) ಕರ್ನಾಟಕ ಭಾರತಿ, ಧಾರವಾಡ. 12) ಸುಗುಣಮಾಲಾ, ಉಡುಪಿ. 13) ಸತ್ಯಶುದ್ಧ ಕಾಯಕ, ಚಿತ್ರದುರ್ಗ. 14) ತರಳಬಾಳು, ಸಿರಿಗೆರೆ. 15) ಅಭಿಮತ, ದೆಹಲಿ.

ಕರ್ನಾಟಕ ಲೋಚನ ಚಂದಾ ವಿವರ

ವಾರ್ಷಿಕ ಚಂದಾ	:	ವ್ಯಕ್ತಿಗಳಿಗೆ ರೂ. 15–00 ಗ್ರಂಥಾಲಯ, ಸಂಘ ಸಂಸ್ಥೆಗಳಿಗೆ ರೂ. 25–00
ಆಜೀವ	:	ರೂ. 150–00 ಬಿಡಿ ಪ್ರತಿ ರೂ. 10.00 ಪ್ರತಿಷ್ಠಾನದ ಸದಸ್ಯರಿಗೆ ಲೋಚನ ಉಚಿತ.
ಪ್ರತಿಷ್ಠಾನದ ಸದಸ್ಯತ್ವ	:	ವಾರ್ಷಿಕ ರೂ. 25–00 ಆಜೀವ ರೂ. 250–00

KARNATAKA LOCHANA- Half Yearly Journal, Published by B. M. Sri. Smaraka Prathishthana, Gokhale Institute of Public Affairs Premises, Basavanagudi Road, Bangalore – 560 019. Printed by : Prabhu Mudrana, Shakambari Nagar, Sarakki, Bangalore-560 078. Phone : 6640976

Reg. No. 03260/23/2/ALTC/88 KARNATAKA LOCHANA

ಪ್ರತಿಷ್ಠಾನದ ಈಚಿನ ಪ್ರಕಟಣೆಗಳು

		ಉತ್ತಮ	ಸಾದಾ
1.	ಸಂಗಮರ ಕಾಲದ ವಿಜಯನಗರ		75-00
2.	ಕುಮಾರವ್ಯಾಸ ಭಾರತ ಸಂಗ್ರಹ	75-00	40-00
3.	ಶಂಬಾ ಕೃತಿ ಸಮೀಕ್ಷೆ		35-00
4.	ಎಂ. ವಿ. ಸೀ. ಸಂಸ್ಮರಣೆ		25-00
5.	ವೈಚಾರಿಕ ಜಾಗೃತಿ		21-00
6.	ಸಂವಿಧಾನ ಮತ್ತು ಕಾನೂನು		25-00
7.	ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಜೀವನ ಚರಿತ್ರ)		15-00
8.	ಬಸವಪ್ಪ ಶಾಸ್ತ್ರಿಗಳು		25-00
9.	ನವ್ಯಸ್ಫೂರ್ತಿ (ಗೋಕಾಕ್ ಸಾಹಿತ್ಯ ಸಮೀಕ್ಷೆ)		35-00
10.	ಕದಂಬ (ಎಂ.ವಿ.ಸೀ. ಸಮಗ್ರ ಸಾಹಿತ್ಯ-1. ಸಮಗ್ರ ಸಂಶೋಧನ ಲೇಖನಗಳು)	100-00	80-00
11.	ಕವಿರಾಜಮಾರ್ಗ (ಎಂ.ವಿ.ಸೀ. ಸಮಗ್ರ ಸಾಹಿತ್ಯ-2)	100-00	80-00
12.	ಕವಿರಾಜಮಾರ್ಗ ವಿವಕ್ಷೆ (ಸಮಗ್ರ ಸಾಹಿತ್ಯ-3 ಕವಿರಾಜಮಾರ್ಗವನ್ನು ಕುರಿತ ಲೇಖನಗಳು)	100-00	
13.	ಶ್ರೀ ಕೃಷ್ಣ ಬಾಲಲೀಲೆ, ಭಾಗ-2 (ಸಮಗ್ರ ಸಾಹಿತ್ಯ-4)	200-00	
14.	ಪದ್ಮಿನಿ ಕಲ್ಯಾಣ		15-00
15.	ಬೇಟೆರಾಯ ದೀಕ್ಷಿತರ ದೇವರನಾಮಗಳು ಮತ್ತು ಸಂಪ್ರದಾಯದ ಹಾಡುಗಳು		25-00

ಸಿದ್ಧತೆಯಲ್ಲಿ

1. ತೌಲನಿಕ ಸಾಹಿತ್ಯ (ಅಚ್ಚಿನಲ್ಲಿ)
2. ತಿರುಕ್ಕುರಳ್ (ಕನ್ನಡಾನುವಾದ)
3. ಅಂತರ ಶಿಸ್ತೀಯ ಸಂಶೋಧನ ವಿಧಿವಿಧಾನ
4. ಲೋಚನ ಲೇಖನ ಸೂಚಿ